ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 29 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 222 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ತಿದ್ದುಪಡಿ ಮಸೂದೆಗೆ ಸಂಪುಟ ಅಸ್ತು

ರಾಜ್ಯಪಾಲರ ಅಧಿಕಾರಕ್ಕೆ ಕತ್ತರಿ; ಮುಖ್ಯಮಂತ್ರಿಯೇ ಚಾನ್ಸಲರ್



ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ನ.28–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ತಿದ್ದುಪಡಿ ವಿಧೇಯಕಕ್ಕೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದ್ದು, ಇಷ್ಟು ದಿನ ರಾಜ್ಯಪಾಲರು ಚಾನ್ಸಲರ್ ಆಗಿದ್ದರು. ಇನ್ನು ಮುಂದೆ ಮುಖ್ಯಮಂತ್ರಿ ಚಾನ್ಸಲರ್ ಆಗಲಿದ್ದಾರೆ. ಆ ಮೂಲಕ ರಾಜ್ಯಪಾಲರ ಬಳಿ ಇದ್ದ ಅಧಿಕಾರವನ್ನು ಹಿಂಪಡೆದು ಸಿಎಂಗೆ ನೀಡಲಾಗಿದೆ.

ಇಲ್ಲಿಯವರೆಗೆ ರಾಜ್ಯಪಾಲರು ಕುಲಪತಿಯಾಗಿದ್ದರು. ಆದರೆ ಈ ತಿದ್ದುಪಡಿಯೊಂದಿಗೆ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿಯಾಗಲಿದ್ದಾರೆ ಎಂದು ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಹೇಳಿದರು. ಬೆಳಗಾವಿಯಲ್ಲಿ ಡಿ.9ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ, ಕಾರ್ಮಿಕ ಕಲ್ಯಾಣ ನಿಧಿಯನ್ನು ಹೆಚ್ಚಿಸುವ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ತಿದ್ದುಪಡಿ ಮಸೂದೆ ಸೇರಿದಂತೆ ಹಲವು ಮಸೂದೆಗಳಿಗೆ ಗುರುವಾರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕಾರ್ಮಿಕ ಕಲ್ಯಾಣ ನಿಧಿ ತಿದ್ದುಪಡಿ ಮಸೂದೆ ಅಂಗೀಕಾರ ಗೊಂಡ ನಂತರ ಕಾರ್ಮಿಕರ ಪಾಲು 50 ರೂ., ಉದ್ಯೋಗದಾತರ ಪಾಲು 100 ರೂ. ಮತ್ತು ಸರ್ಕಾರದ ಪಾಲು 50 ರೂ ಆಗುತ್ತದೆ ಎಂದು ಪಾಟೀಲ್ ಎಂದರು.

ಪ್ರಸ್ತುತ ಕಾರ್ಮಿಕರ ಕೊಡುಗೆ 20 ರೂ., ಮಾಲೀಕರು 40 ರೂ. ಮತ್ತು ರಾಜ್ಯ ಸರ್ಕಾರ ಪಾಲು 20 ರೂ. ಇದೆ. ಇದನ್ನು ಹೆಚ್ಚಿಸಲಾಗಿದ್ದು, ಹೆಚ್ಚಳದ ವೊತ್ತ ಕರ್ನಾಟಕ ಕಾರ್ಮಿಕ ಕಲ್ಯಾಣ ●6ನೇ ಪುಟಕ್ಕೆ

ಮೈಸೂರು ಲಲಿತಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆ ಖಾಸಗಿಯವರಿಗೆ

ಸಂಪುಟ ಸಭೆ ತೀರ್ಮಾನ

ಬೆಂಗಳೂರು, ನ.28(ಕೆಎಂಶಿ)–ಮೈಸೂರಿನ ಪಾರಂಪರಿಕ ಕಟ್ಟಡ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆ ಖಾಸಗಿಯವರಿಗೆ ವಹಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಅರಣ್ಯ, ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ಈ ಹೋಟೆಲ್ ನಿರ್ವಹಣೆ ಮಾಡುತ್ತಿದೆ. ಇದೀಗ ಹೋಟೆಲ್ ಆಪರೇಟರ್‌ಗಳಿಗೆ ಇದರ ಉಸ್ತುವಾರಿ ನೀಡಲು ಸರ್ಕಾರ ನಿರ್ಧರಿಸಿದೆ. ಇಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಹೋಟೆಲ್ ಖಾಸಗೀಕರಣ ಬಗ್ಗೆ ಸುದೀರ್ಘ ಚರ್ಚೆ ನಂತರ ಹೆಸರಾಂತ ಉದ್ಯಮಿಗಳ ಸುಪರ್ದಿಗೆ ನೀಡಲು ತೀರ್ಮಾನಿಸಲಾಗಿದೆ. ಯೂರೋಪ್ ಪ್ರವಾಸಿಗರು ಉಳಿದುಕೊಳ್ಳಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1930ರಲ್ಲಿ ಈ ಮಹಲ್ ನಿರ್ಮಿಸಿದ್ದರು. ಲಂಡನ್ ಕಟ್ಟಡಗಳ ವಿನ್ಯಾಸ ಆಧಾರವಾಗಿ ಇಟ್ಟುಕೊಂಡು ಮಹಾರಾಜರು, 52 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿದರು. ಚಾಮುಂಡಿಬೆಟ್ಟದ ತಪ್ಪಲಿ ನಲ್ಲಿರುವ ಈ ಹೋಟೆಲ್ ನಿರ್ವಹಣೆಯನ್ನು ಮೊದಲಿಗೆ ಕೇಂದ್ರ ಸ್ವಾಮ್ಯದ ಐಟಿಡಿಸಿ ನಿರ್ವಹಿಸುತ್ತಿತ್ತು. 2018ರಲ್ಲಿ ಕರ್ನಾಟಕ ಸರ್ಕಾರಕ್ಕೆ ಇದನ್ನು ಹಸ್ತಾಂತರ ಮಾಡಲಾಯಿತು, ನಂತರ ಪ್ರವಾಸೋದ್ಯಮ ಮತ್ತು ಅರಣ್ಯ ಇಲಾಖೆ ಲಲಿತ ಮಹಲ್ ನಿರ್ವಹಣೆ ಮಾಡುತ್ತಿದೆ.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ತವರು ಜಿಲ್ಲೆಯಲ್ಲಿರುವ ಈ ಐತಿಹಾಸಿಕ ಹೋಟೆಲ್ ಖಾಸಗಿ ಸುಪರ್ದಿಗೆ ನೀಡಲು ಮುಂದಾಗಿದ್ದಾರೆ.



ನೂರು ಕೋಟಿ ವೆಚ್ಚದಲ್ಲಿ ಶ್ರೀರಂಗಪಟ್ಟಣ ಪ್ರವಾಸೋದ್ಯಮಕ್ಕೆ ಕಾಯಕಲ್ಪ

ಜಿಲ್ಲಾಧಿಕಾರಿ ಡಾ.ಕುಮಾರ್ ಮಾಹಿತಿ



ಡಾ.ಕುಮಾರ್

ಮಂಡ್ಯ,ನ.28– ಶ್ರೀರಂಗಪಟ್ಟಣ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ನೂರು ಕೋಟಿ ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಿ ಕೇಂದ್ರ ಸರ್ಕಾರದ ಪ್ರವಾ ಸೋದ್ಯಮ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಾಲಯವನ್ನು ಕೇಂದ್ರವಾಗಿ ಇರಿಸಿಕೊಂಡು ಇದರ ಸುತ್ತಲಿನ 5.5 ಕಿಮೀನಲ್ಲಿ ಬರುವ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಇದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮಸ್ಥಳ, ಪುರಾತನ ಘಾಟ್‌ಗಳ ಸಂರಕ್ಷಣೆ,



ವಿವಿಧ ರೀತಿಯ ಸೂಚನಾ ಫಲಕಗಳು, ಪುರಾತನ ಕಾಲದಲ್ಲಿ ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಶಸ್ತ್ರಾಸ್ತ್ರಗಳು, ಕಲ್ಯಾಣಿ, ಮಂಟಪ, ರಸ್ತೆಗಳು ಸೇರಿದಂತೆ ವಿವಿಧ ರೀತಿಯ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ ಎಂದರು. ಈ ಯೋಜನೆಯ ಡಿಪಿಆರ್ ಸಂಪೂರ್ಣ ಸಿದ್ಧವಾದ ನಂತರ ಶ್ರೀರಂಗಪಟ್ಟಣ ಶಾಸಕರೊಂದಿಗೆ ಸಭೆ ನಡೆಸಿ ನಂತರ ಪ್ರಸ್ತಾವನೆಯನ್ನು ಕೇಂದ್ರದ ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಬೇಕಿದೆ. ಈ ಯೋಜನೆಯಿಂದ ಪ್ರವಾಸೋದ್ಯಮ ಉತ್ತೇಜನ ನೀಡುವುದರ ಜೊತೆಗೆ ಹಲವಾರು ಉದ್ಯೋಗಗಳನ್ನು ಸೃಷ್ಟಿಸಬಹುದು. ಬಹಳಷ್ಟು ಕೊಳಗಳು ಹಾಗೂ ಸ್ಥಳಗಳಲ್ಲಿ ಬರುವ ಆದಾಯದಿಂದ ಸ್ವಚ್ಛತೆಯನ್ನು ಕಾಪಾಡಬಹುದು ಎಂದರು.

ರಾಜ್ಯ ಪುರತತ್ವ ಇಲಾಖೆ ಆಯುಕ್ತ ದೇವರಾಜ್ ಮಾತನಾಡಿ, ಶ್ರೀರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಕೆಲವು ದುರಸ್ತಿ ಕಾಮಗಾರಿಗಳು ನಡೆಯಬೇಕಿದ್ದು, ಇದಕ್ಕೆ ಅನುದಾನ ಪುರಾತತ್ವ ಇಲಾಖೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ದೇವಸ್ಥಾನದಿಂದ ಅನುದಾನ ●6ನೇ ಪುಟಕ್ಕೆ

ಸಂಪುಟ ಪುನಾರಚನೆ ಪ್ರಸ್ತಾಪ; 8 ಸಚಿವರಿಗೆ ಕೊಕ್ ಸಾಧ್ಯತೆ

ಬೆಂಗಳೂರು, ನ.28– ರಾಜ್ಯ ಸಚಿವ ಸಂಪುಟ ಪುನಾರಚನೆ ಚರ್ಚೆಗಳು ತೀವ್ರಗೊಂಡಿದೆ. ಈ ನಡುವೆ ಡಿಸಿಎಂ ಡಿ.ಕೆ. ಶಿವಕುಮಾರ್ ಕೆಲವು ಸಚಿವರು ತ್ಯಾಗ ಮಾಡಬೇಕು ಎನ್ನುವ ಮೂಲಕ ಸಂಪುಟಕ್ಕೆ ಸರ್ಜರಿ ಮಾಡುವ ಸುಳಿವು ನೀಡಿದ್ದಾರೆ.

ಆದರೆ ಸಿಎಂ ಸಿದ್ದರಾಮಯ್ಯ ಮಾತ್ರ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ. ಈ ಬೆಳವಣಿಗೆಗಳ ನಡುವೆ ಸಿಎಂ ಮತ್ತು ಡಿಸಿಎಂ ದೆಹಲಿಗೆ ತೆರಳಿದ್ದಾರೆ. ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ.

ಸಚಿವ ಸಂಪುಟ ಪುನಾರಚನೆಯಾದಲ್ಲಿ ಯಾರನ್ನೆಲ್ಲಾ ಕೈ ಬಿಡುವ ಸಾಧ್ಯತೆ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಅದರಲ್ಲೂ ಕೆಲವು ಸಚಿವರ ಕಾರ್ಯವೈಖರಿಯ ಬಗ್ಗೆ ಅಸಮಾಧಾನಗಳು ಇವೆ. ಸಚಿವರು ತಮ್ಮ ಜವಾಬ್ದಾರಿಗಳನ್ನು ಸೂಕ್ತವಾಗಿ ನಿಭಾಯಿಸುತ್ತಿಲ್ಲ ಎಂಬ ಆರೋಪಗಳು ಇವೆ. ಅಷ್ಟೇ ಅಲ್ಲ, ಕೆಲವು ಜಿಲ್ಲೆಗಳಲ್ಲಿ ಸಂಪುಟಕ್ಕೆ ಸೇರಲು ಪ್ರಭಾವಿ ಶಾಸಕರು ಪ್ರಯತ್ನ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇದನ್ನು ಮುಂದಿಟ್ಟುಕೊಂಡು ಸಂಪುಟ ಪುನಾರಚನೆ ಮಾಡುವ ಸಾಧ್ಯತೆ ಇದೆ. ಇನ್ನು ಕೆಲವು ಸಚಿವರ ವಿರುದ್ಧ ಭ್ರಷ್ಟಾಚಾರದ ಆರೋಪ ಇದೆ. ಈಗಾಗಲೇ ವಾಲ್ಮೀಕಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಬಿ. ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಸರ್ಕಾರದ ಮೊದಲ ವಿಕೆಟ್ ಪತನ ಆಗಿದೆ. ●6ನೇ ಪುಟಕ್ಕೆ

ಮುಡಾ ನಿವೇಶನ ಹಂಚಿಕೆ ಹಗರಣ

ಲೋಕಾಯುಕ್ತ ಅಧಿಕಾರಿಗಳಿಂದ ಮುಡಾ ಮಾಜಿ ಆಯುಕ್ತ ಕಾಂತರಾಜು ವಿಚಾರಣೆ



ಕಾಂತರಾಜು

ಮೈಸೂರು, ನ.28(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ಮುಡಾದ ಹಿಂದಿನ ಆಯುಕ್ತ ಕಾಂತರಾಜು ಅವರನ್ನು ಇಂದು ಲೋಕಾಯುಕ್ತರು ವಿಚಾರಣೆ ನಡೆಸಿದರು. ನಗರದ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಬೆಳಗ್ಗೆ 11 ಗಂಟೆಗೆ ಆಗಮಿಸಿದ ಕಾಂತರಾಜು ಅವರನ್ನು ಮಧ್ಯಾಹ್ನ 1 ಗಂಟೆವರೆಗೆ ವಿಚಾರಣೆ ಮಾಡಿದರು. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಅಭಿವೃದ್ಧಿಪಡಿಸದ ಭೂಮಿ ನೀಡುವ ಸಂಬಂಧ 2017ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಬಗ್ಗೆ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ಕಾಂತರಾಜು ಅವರಿಂದ ಮಾಹಿತಿ ಪಡೆದರು.

ಲೋಕಾಯುಕ್ತ ವಿಚಾರಣೆ ನಂತರ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಕಾಂತರಾಜು, 2017ರಲ್ಲಿ ನಾನು ಮುಡಾ ಆಯುಕ್ತನಾಗಿದ್ದೆ. ಆಗ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಪಡೆದಿದ್ದ ●6ನೇ ಪುಟಕ್ಕೆ

ನಾಳೆ ಮುಡಾ ಸಾಮಾನ್ಯ ಸಭೆ

ಇಂದು 240 ಬಡಾವಣೆಗಳ ಹಸ್ತಾಂತರ ಪ್ರಕ್ರಿಯೆ ಪೂರ್ಣ

ಮೈಸೂರು, ನ.28(ಆರ್‌ಕೆ)– ನವೆಂಬರ್ 30ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾಮಾನ್ಯ ಸಭೆ ನಡೆಯಲಿದೆ.

ತಿಂಗಳೊಳಗೆ ಎರಡನೇ ಮಹತ್ವದ ಸಭೆ ಇದಾಗಿದ್ದು, ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಅಧ್ಯಕ್ಷತೆ ವಹಿಸಲಿದ್ದು, ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 940 ವಸತಿ ಬಡಾವಣೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವುದು, ಇನ್ನು ಮುಂದೆ ಪ್ರಾಧಿಕಾರದಲ್ಲಿ ಹೊಸ ಬಡಾವಣೆಗಳ ನಕ್ಷೆ ಅನುಮೋದನೆ, ಅಭಿವೃದ್ಧಿ ಯೋಜನೆ ಹೊರತುಪಡಿಸಿ ಖಾತೆ, ಕಂದಾಯ, ಸಿಆರ್‌ನಂತಹ ಸೇವೆಗಳನ್ನು ಒದಗಿಸದಿರುವಂತಹ ಮಹತ್ವದ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ. ಮುಡಾ ಅಭಿವೃದ್ಧಿಪಡಿಸಿರುವ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವವರೆಗೆ ಮಾತ್ರ ಪ್ರಾಧಿಕಾರದಲ್ಲಿ ಖಾತೆ, ಕಂದಾಯ ಮಾಡಬೇಕು. ಹಸ್ತಾಂತರ ನಂತರ ಅಂತಹ



ವಸತಿ ಬಡಾವಣೆಗಳ ನಿವೇಶನ, ಮನೆ, ವಾಣಿಜ್ಯ ಕಟ್ಟಡಗಳ ತೆರಿಗೆ, ಕಂದಾಯವನ್ನು ಮುಡಾ ಪಾವತಿಸಿಕೊಳ್ಳಬಾರದೆಂಬ ನಿರ್ಣಯವನ್ನು ಶನಿವಾರದ ಸಭೆಯಲ್ಲಿ ಕೈಗೊಳ್ಳಲಾಗುವುದು.

ಶೇ.50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆ ಹಾಗೂ ಬದಲಿ ನಿವೇಶನ ಹಂಚಿಕೆ ಹಗರಣದ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ.ಉದೇಶ್, ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಪಿ.ಎನ್.ದೇಸಾಯಿ ಆಯೋಗ ಹಾಗೂ ಜಾರಿ ನಿರ್ದೇಶನಾಲಯ (ಇಡಿ)ವು ಪ್ರತ್ಯೇಕ ತನಿಖೆ ನಡೆಸುತ್ತಿರುವುದರಿಂದ ಸ್ಥಗಿತಗೊಂಡಿರುವ ●6ನೇ ಪುಟಕ್ಕೆ

ಪ್ರಿಯಾಂಕಾ ಪ್ರಮಾಣ ವಚನ



ನವದೆಹಲಿ, ನ.28– ಕೇರಳದ ವಯನಾಡ್‌ನಿಂದ ನಡೆದ ಉಪಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಗುರುವಾರ ಲೋಕಸಭೆಯ ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಕೈಯ್ಯಲ್ಲಿ ಸಂವಿಧಾನದ ಪುಸ್ತಕ ಹಿಡಿದು ಪ್ರಿಯಾಂಕಾ ಅವರು ಪ್ರಮಾಣವಚನ ಸ್ವೀಕಾರ ಮಾಡಿದ್ದು, ಪ್ರಿಯಾಂಕಾ ಅವರಿಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಪ್ರಮಾಣ ವಚನ ಬೋಧಿಸಿದರು.

ಇದೇ ವೇಳೆ ನಾಂದೇಡ್ ಉಪ ಚುನಾವಣೆ ಯಲ್ಲಿ ಗೆದ್ದಿರುವ ರವೀಂದ್ರ ಚವಾಣ್ (ಕಾಂಗ್ರೆಸ್) ಕೂಡ ದೇವರ ಹೆಸರಿನಲ್ಲಿ ಮರಾಠಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇತ್ತೀಚೆಗೆ ಅವರ ತಂದೆ ವಸಂತರಾವ್ ಚವಾಣ್ ಅವರ ನಿಧನದ ಹಿನ್ನೆಲೆಯಲ್ಲಿ ಉಪಚುನಾವಣೆ ನಡೆದಿತ್ತು. ಪ್ರಿಯಾಂಕಾ ಗಾಂಧಿ 2019ರಲ್ಲಿ ಸಕ್ರಿಯ ರಾಜಕೀಯಕ್ಕೆ ಧುಮುಕಿದರು ಮತ್ತು ನಂತರ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿಯಾಗಿ ನೇಮಕಗೊಂಡರು. ಐದು ವರ್ಷಗಳ ನಂತರ, ಪ್ರಿಯಾಂಕಾ ಗಾಂಧಿ ಅವರು ಚುನಾಯಿತ ಜನಪ್ರತಿನಿಧಿಯಾಗಿ ತಮ ಪ್ರಯಾಣವನ್ನು ಪ್ರಾರಂಭಿಸಿದ್ದಾರೆ. ಪ್ರಮಾಣವಚನ ಸ್ವೀಕಾರದ ವೇಳೆ ಪ್ರಿಯಾಂಕಾ ಅವರು ಕೇರಳದ ಬ್ರೋಕೆಡ್ ಸೀರೆಯನ್ನು ಧರಿಸಿದ್ದರು. ●6ನೇ ಪುಟಕ್ಕೆ

SSLC ವಾರ್ಷಿಕ ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ

ಬೆಂಗಳೂರು, ನ.28– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ (ಕೆಎಸ್‌ಇಎಬಿ) ಪ್ರಸಕ್ತ ಶೈಕ್ಷಣಿಕ ವರ್ಷ (2024–25)ದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ.

ಈ ಸಂಬಂಧ ಬೆಂಗಳೂರಿನಲ್ಲಿ ನಿನ್ನೆ (ನ.27) ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಈ ಕುರಿತು ತೀರ್ಮಾನಿಸಲಾಗಿದ್ದು, 25 ದಿನಗಳ ಅವಧಿಯಲ್ಲಿ ವಾರ್ಷಿಕ ಪರೀಕ್ಷೆ ಮುಗಿಸಲು ಮಂಡಳಿ ನಿರ್ಧರಿಸಿದೆ. 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲು ಈಗಾಗಲೇ ಮಂಡಳಿ ದಿನಾಂಕ ನಿಗದಿಪಡಿಸಿತ್ತು. ಇದರಂತೆ, 2025ರ ಮಾ.24 ರಿಂದ ●6ನೇ ಪುಟಕ್ಕೆ

ನಾನಾಗಲಿ, ನನ್ನ ಮಗನಾಗಲಿ ಜೈಲಿಗೆ ಹೋಗುವ ಪರಿಸ್ಥಿತಿ ಬಂದಿಲ್ಲ, ಬರುವುದೂ ಇಲ್ಲ

ಹೆಚ್.ಡಿ.ರೇವಣ್ಣ ಹೇಳಿಕೆಗೆ ಶಾಸಕ ಜಿ.ಟಿ.ದೇವೇಗೌಡ ತಿರುಗೇಟು; ಇಂತಹ ವಿಚಾರದಲ್ಲಿ ಯಾರ ಸಹಾಯ ಕೇಳುವ ಪರಿಸ್ಥಿತಿಯೇ ಬಂದಿಲ್ಲ!



ಪತ್ರಿಕಾಗೋಷ್ಠಿಯಲ್ಲಿ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ

ಮೈಸೂರು, ನ.28(ಬಿಎಲ್‌ಯು)– ನಾನು ಹಾಗೂ ನನ್ನ ಮಗ ಯಾವುದೇ ಅಪರಾಧ ಮಾಡಿಲ್ಲ. ಹಾಗಾಗಿ ಜೈಲಿಗೆ ಹೋಗುವ ಪರಿಸ್ಥಿತಿ ಬಂದಿಲ್ಲ, ಬರುವುದೂ ಇಲ್ಲ ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದ್ದಾರೆ.

ಜಿ.ಟಿ.ದೇವೇಗೌಡ ಹಾಗೂ ಅವರ ಪುತ್ರ ಜಿ.ಡಿ.ಹರೀಶ್‌ಗೌಡರನ್ನು ಜೈಲಿಗೆ ಕಳುಹಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಿತ್ತು. ಆದರೆ ಹೆಚ್.ಡಿ.ಕುಮಾರಸ್ವಾಮಿ ಗುಟುರು ಹಾಕಿ ತಡೆದರು ಎಂಬ ಶಾಸಕ ಹೆಚ್.ಡಿ.ರೇವಣ್ಣ ಆರೋಪಕ್ಕೆ ಜಿ.ಟಿ.ದೇವೇಗೌಡರು ತಿರುಗೇಟು ನೀಡಿದ್ದಾರೆ.

ನಗರದ ವಿ.ವಿ.ಮೊಹಲ್ಲಾದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವುದಾದರೂ ಅಪರಾಧ ಕೃತ್ಯ ಎಸಗಿದ್ದರೆ ತಾನೆ ಜೈಲಿಗೆ ಹೋಗುವ ಪರಿಸ್ಥಿತಿ ಬರುತ್ತದೆ ಎಂದರು.

ಈ ಮಾತನ್ನು ಏಕೆ ಹೇಳಿದ್ದೀರಾ ಎಂದು ಹೆಚ್.ಡಿ.ರೇವಣ್ಣ ಅವರನ್ನು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಬಿಟ್ಟು ನನ್ನ ತಲೆಯಲ್ಲಿ ಏನು ಇಲ್ಲ. ಆದ ಕಾರಣ ನಾನು ಮಾಧ್ಯಮಗಳಿಂದ ಈಗ ದೂರವಿದ್ದೇನೆ. ಯಾವುದೇ ಪ್ರತಿಕ್ರಿಯೆ ನೀಡಬಾರದೆಂದು ನಿರ್ಧಾರ ಮಾಡಿದ್ದೇನೆ. ಆದರೆ ಪದೇ ಪದೇ ಇವರು ನನ್ನ ಹೆಸರು ಏಕೆ ಪ್ರಸ್ತಾಪಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಬಾಲಕನಾಗಿದ್ದಾಗಲೇ ಗ್ರಾಮದಲ್ಲಿ ನಾನಿಲ್ಲದೆ ಯಾವ ತೀರ್ಮಾನವಾಗುತ್ತಿರಲಿಲ್ಲ: ನನಗೆ 15 ವರ್ಷವಿರುವಾಗಲೇ ನನ್ನ ಗ್ರಾಮ ಗುಂಗ್ರಾಲ್ ಛತ್ರದಲ್ಲಿ ನಾನಿಲ್ಲದೆ ಯಾವುದೇ ತೀರ್ಮಾನ ಮಾಡುತ್ತಿರಲಿಲ್ಲ. ಆಗಲೇ ಯುವಕರ ಬಳಗ ಕಟ್ಟಿದೆ, ಸಹಕಾರ ಸೇರಿದಂತೆ ಇತರೆ ಕ್ಷೇತದ ಕೆಲಸ–ಕಾರ್ಯಗಳ ವಿಚಾರದಲ್ಲಿ ಪ್ರಶಂಸೆಯಿಂದ ಹಲವು ಪ್ರಶಸ್ತಿ ಕೂಡ ದೊರೆತಿದೆ. ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನಪರ ಕೆಲಸ ಕಾರ್ಯ ಮಾಡಿರುವೆ. ಸಹಕಾರ ಹಾಗೂ ●6ನೇ ಪುಟಕ್ಕೆ

ಇನ್ನು ಮುಂದೆ ರಾಜಕೀಯವಾಗಿ ಯಾರ ವಿರುದ್ಧವೂ ಮಾತಾಡಲ್ಲ

ನನ್ನನ್ನು ಕಳ್ಳ ಎಂದರೂ ಸರಿಯೇ ನಾನು ಮಾತ್ರ ಇನ್ನು ಮುಂದೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು. ತಮ್ಮ ವಿರುದ್ಧ ಮಾಜಿ ಸಚಿವ ಸಾ.ರಾ.ಮಹೇಶ್ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಜಿ.ಟಿ.ದೇವೇಗೌಡರು, ಇನ್ನು ಮುಂದೆ ರಾಜಕೀಯವಾಗಿ ನಾನು ಯಾರ ವಿರುದ್ಧವೂ ಮಾತಾಡುವುದಿಲ್ಲ ಎಂದರು. ಇಂದೇ ಕೊನೆ, ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಯಾರು ಏನೇ ಹೇಳಿದರೂ ನನ್ನ ಪ್ರತಿಕ್ರಿಯೆ ಕೇಳಬೇಡಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು.

ನಾನು ಹೌಸಿಂಗ್‌ಬೋರ್ಡ್ ಛೇರ್ಮನ್ ಆಗಿದ್ದಾಗ ಕಾಂಗ್ರೆಸ್, ಜೆಡಿಎಸ್ ನಾಯಕರೇ ನನ್ನ ತೇಜೋವಧೆಗೆ ಯತ್ನಿಸಿದ್ದರು!

ನಾನು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಭೂ ಹಗರಣ ನಡೆದಿದೆ ಎಂದು ಆರೋಪಿಸಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ನನ್ನ ವಿರುದ್ಧ ತನಿಖೆ ಮಾಡಿಸಿ, ತೇಜೋವಧೆ ಮಾಡಲು ಯತ್ನಿಸಿದ್ದರು ಎಂದು ಶಾಸಕ ಜಿ.ಟಿ.ದೇವೇಗೌಡರು ಆರೋಪಿಸಿದರು.

ನಾನು ಹಿಂದೆ ಚುನಾವಣೆಯಲ್ಲಿ ಸೋತಾಗ ಅಂದಿನ ಯಡಿಯೂರಪ್ಪ ಸರ್ಕಾರ ನನ್ನನ್ನು ಗೃಹ ಮಂಡಳಿ ಅಧ್ಯಕ್ಷರಾಗಿ ಮಾಡಿತು. ಆ ಸಂದರ್ಭದಲ್ಲಿ ನನ್ನ ಅವಧಿಯಲ್ಲಿ ಭೂ ಹಗರಣ ನಡೆದಿದೆ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ಸೇರಿ ನನ್ನ ವಿರುದ್ಧ ತನಿಖೆ ಮಾಡಿಸಿ, ತೇಜೋವಧೆ ಮಾಡಲು ಯತ್ನಿಸಿದ್ದರು ಎಂದು ದೂರಿದರು. ಆ ಸಂದರ್ಭದಲ್ಲಿ ಕೂಡ ನನ್ನ ರಕ್ಷಣೆ ಮಾಡಿ ಎಂದು ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಯಾರ ಬಳಿಯೂ ಹೋಗಲಿಲ್ಲ, ಯಾವ ಪ್ರಭಾವ ಬೀರಿಲ್ಲ ಎಂದು ಸ್ಪಷ್ಟಪಡಿಸಿದರು.

ನಾನಾಗಲಿ ಅಥವಾ ನನ್ನ ಮಗನಾಗಲೀ ಜೈಲಿಗೆ ಹೋಗುವ ಯಾವುದೇ ಅಪರಾಧ ಇದುವರೆಗೂ ಕೃತ್ಯ ಮಾಡಿಲ್ಲ. ಹಾಗಾಗಿ ಇಂದು ಹಾಗೂ ಮುಂದೆಯೂ ಜೈಲಿಗೆ ಹೋಗುವ ಪರಿಸ್ಥಿತಿ ಇಲ್ಲ. ಆದರೆ ಹೆಚ್.ಡಿ.ರೇವಣ್ಣ ಈ ಮಾತನ್ನು ಯಾವ ಅರ್ಥದಲ್ಲಿ ಹೇಳಿದ್ದಾರೋ ತಿಳಿಯದು ಎಂದರು.

ನನ್ನ ಬಂಧಿಸುತ್ತಿದ್ದಾರೆ ರಕ್ಷಣೆ ಕೊಡಿ ಎಂದು ಹೆಚ್.ಡಿ. ರೇವಣ್ಣ ಸೇರಿದಂತೆ ಯಾರ ಬಳಿಯೂ ಹೋಗಿಲ್ಲ ಎಂದು ಪುನರುಚ್ಚರಿಸಿದ ಜಿ.ಟಿ.ದೇವೇಗೌಡರು, ಬಂಧಿಸುವಷ್ಟು ಸೇಡನ್ನು ನಾನು ಯಾರೊಡನೆಯೂ ಹೊಂದಿಲ್ಲ, ಎಲ್ಲರ ಜೊತೆ ಉತ್ತಮ ಸಂಬಂಧ ಹೊಂದಿದ್ದೇನೆ. ನನ್ನ ಪ್ರಾಮಾಣಿಕತೆ ದೇವರಿಗೆ ಮಾತ್ರ ಗೊತ್ತಿದೆ. ನನ್ನ ಬಗ್ಗೆ ಇವರಿಗೇನು ಗೊತ್ತಿದೆ ಎಂದು ಹೆಚ್.ಡಿ.ರೇವಣ್ಣಗೆ ಟಾಂಗ್ ನೀಡಿದರು. ನನ್ನ ವಿರುದ್ಧ ಸೇಡು ತೀರಿಸಿಕೊಳ್ಳಲು ಸಿದ್ದರಾಮಯ್ಯ ಕೂಡ ರಾಜಕೀಯ ಮಾಡಿದ್ದಾರೆ. ಆದರೆ ನಾನು ಮಾತ್ರ ಎಂದಿಗೂ ಅವರನ್ನು ವೈಯಕ್ತಿಕವಾಗಿ ನಿಂದಿಸಿಲ್ಲ ಎಂದು ತಿಳಿಸಿದರು. ಅಂದಿನ ಬಿಜೆಪಿ ಹಾಗೂ ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಯಡಿಯೂರಪ್ಪ ಸಿಎಂ ಹಾಗೂ ಹೆಚ್.ಡಿ. ರೇವಣ್ಣ ಡಿಸಿಎಂ ಆಗಬೇಕಿತ್ತು. ಆದರೆ ತನಗೆ ಡಿಸಿಎಂ ಸ್ಥಾನ ಸಿಗುವುದಿಲ್ಲ ಎಂದು ಅರಿತ ಹೆಚ್.ಡಿ.ರೇವಣ್ಣ ತಮ್ಮ ತಂದೆ ಹೆಚ್.ಡಿ.ದೇವೇಗೌಡರ ಜೊತೆ ಸೇರಿ ಯಡಿಯೂರಪ್ಪಗೆ ಸಿಎಂ ಸ್ಥಾನ ತಪ್ಪಿಸಿದರು. ಹೀಗಾಗಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪಗೆ ಸಿಎಂ ಸ್ಥಾನ ತಪ್ಪಲು ರೇವಣ್ಣ ಕಾರಣ ಎಂದು ಜಿ.ಟಿ.ದೇವೇಗೌಡರು ಆರೋಪಿಸಿದರು.

ಇಂದಿರಾ ಕ್ಯಾಂಟೀನ್ ನೌಕರರಿಗೆ ಸೂಕ್ತ ವೇತನ, ಕಾಯಂಗೆ ಆಗ್ರಹಿಸಿ ಮೈಸೂರಲ್ಲಿ ದಸಂಸ ಪ್ರತಿಭಟನೆ



ಕರ್ನಾಟಕ ದಲಿತ ಸಂಘರ್ಷ ಸಮಿತಿ(ದಸಂಸ) ವತಿಯಿಂದ ಮಹಾನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ನ.28(ಜಿಎ)–ಇಂದಿರಾ ಕ್ಯಾಂಟೀನ್ ನೌಕರರನ್ನು ಕಾಯಂಗೊಳಿಸಬೇಕು, ಸಂಬಳ ನೀಡದೇ ಇರುವ ಕಂಪನಿಯನ್ನು ವಜಾ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಸಂಸ) ವತಿಯಿಂದ ನಗರಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಬಡವರಿಗೆ ಅನ್ನ ನೀಡುತ್ತಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಸುಮಾರು ಆರು ವರ್ಷಗಳಿಂದ ಗುತ್ತಿಗೆ ನೌಕರರಾಗಿ ಕೆಲಸ ಮಾಡುತ್ತಿರುವವರು ಕಡು ಬಡವರಾಗಿದ್ದಾರೆ. ಈ ಹಿಂದೆ ಗುತ್ತಿಗೆ ಪಡೆದ ಸಂಸ್ಥೆ ಸಂಬಳವನ್ನು ತಡವಾದರೂ ಬ್ಯಾಂಕ್ ಖಾತೆಗೆ ಹಾಕುತ್ತಿದ್ದರು. ಆದರೆ, ಈಗಿನ ಟೆಂಡರ್ ಗುತ್ತಿಗೆದಾರ ನಂದಿ ಎಂಟರ್‌ಪ್ರೈಸಸ್‌ನ ಅಶ್ವಿನಿಕುಮಾರ್ ವೇತನ ನೀಡಿಲ್ಲ. ಈ ಕುರಿತು ಆರೋಗ್ಯಾಧಿಕಾರಿ, ಆಯುಕ್ತರು, ಜಿಲ್ಲಾಧಿಕಾರಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಎಷ್ಟೇ ಮನವಿ ಮಾಡಿದರೂ ಸುಮಾರು ನಾಲ್ಕು ತಿಂಗಳಿನಿಂದ ಸರಿಯಾಗಿ ವೇತನ ನೀಡದ ಕಾರಣ ನೌಕರರು ಕುಟುಂಬ ನಿರ್ವಹಣೆ ಮಾಡುವುದು ತುಂಬಾ ಕಷ್ಟವಾಗಿದೆ. ಮನೆಯಲ್ಲಿ ಹೆಂಡತಿ ಮಕ್ಕಳ ಊಟಕ್ಕೂ ತೊಂದರೆ ಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ನೌಕರರು ಸಂಬಳ ನೀಡಿ ಎಂದು ಕೇಳಿಕೊಂಡಾಗ ಅಲ್ಪಸ್ವಲ್ಪ ಹಣ ನೀಡಿ ಸಮಾಧಾನಪಡಿಸುತ್ತಿದ್ದರು. ಊಟದ ಟೋಕನ್‌ಗಳನ್ನೂ ಸರ್ಕಾರ ನಿಗದಿಪಡಿಸಿರುವಂತೆ ಸಾರ್ವಜನಿಕರಿಗೆ ವಿತರಿಸದೇ, ಸರಿಯಾಗಿ ಊಟ ಕೊಡದೇ ಅಲ್ಲಿಯೂ ಮೋಸ ಮಾಡುತ್ತಿದ್ದಾರೆ. ಹೀಗಾಗಿ ಕೂಡಲೇ ಗುತ್ತಿಗೆದಾರ ಅಶ್ವಿನಿ ಕುಮಾರ್ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಇಂದಿರಾ ಕ್ಯಾಂಟೀನ್ ನೌಕರರಿಗೆ ಸರ್ಕಾರದ ನಿಯಮಾನುಸಾರ ಪ್ರತಿ ತಿಂಗಳು ವೇತನ ನೀಡಬೇಕು. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಪಾಲಿಕೆ ಮುಂದೆ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಶಂಕರ್, ವೆಂಕಟೇಶ್, ರಮೇಶ್, ಮಹದೇವ, ರವಿ, ಸ್ವಾಮಿ, ಶಿವಣ್ಣ, ರೇಷ್ಮಾ ಬಾನು, ಶಮಾ ಕೌಸರ್, ಅಸ್ಮತ್, ಮುಜಿದಾ, ಶೇಖರ್, ರಾಮು ಮತ್ತಿತರರು ಪಾಲ್ಗೊಂಡಿದ್ದರು.

ನಗರ ಕೇಂದ್ರ ಗ್ರಂಥಾಲಯದಲ್ಲಿ ಹಾವು ರಕ್ಷಣೆ



ಮೈಸೂರು,ನ.28–ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಆವರಣದ ಮುಖ್ಯದ್ವಾರದ ಬಳಿಯ ಪೊದೆಯಲ್ಲಿ ದಿಢೀರನೆ ಹಾವು ಪ್ರತ್ಯಕ್ಷಗೊಂಡಿತ್ತು. ಗ್ರಂಥಾಲಯಕ್ಕೆ ಆಗಮಿಸಿದ್ದ ವಿದ್ಯಾರ್ಥಿಗಳು, ಸಿಬ್ಬಂದಿಗಳಲ್ಲಿ ಕೆಲಕಾಲ ಆತಂಕ ಸೃಷ್ಟಿಸಿತು. ತಕ್ಷಣ ಸಿಬ್ಬಂದಿ ಉರಗ ತಜ್ಞರನ್ನು ಕರೆಸಿದರು. ಬಳಿಕ ಕೆಲ ನಿಮಿಷಗಳ ಹರಸಾಹಸದ ನಂತರ ಹಾವನ್ನು ಸೆರೆಹಿಡಿದು, ರಕ್ಷಿಸಲಾಯಿತು. ಹೀಗೆ ರಕ್ಷಿಸಿದ ಹಾವು ಕೊಳಕು ಮಂಡಲ ಪ್ರಭೇದಕ್ಕೆ ಸೇರಿದ್ದು ಎನ್ನಲಾಗಿದೆ.

ಕನ್ನಡ ರಾಜ್ಯೋತ್ಸವ....


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಬ್ಯುಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್‌ನಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಅಸೋಸಿಯೇಷನ್ ಅಧ್ಯಕ್ಷೆ ವೇದ ರಾಯ್ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮಾಲಿನಿ, ಪ್ರತಿಭಾ ಶೆಟ್ಟಿ, ಸಬೀನಾ, ನಿಶಾಲಿ, ಮಂಜುಳಾ, ಸ್ವಪ್ನ, ಪದ್ಮಿನಿ, ರೀತಿ, ಜ್ಯೋತಿ ಶೆಟ್ಟಿ ಇತರರಿದ್ದರು.

ಡಿ.1ಕ್ಕೆ ನವದೆಹಲಿಯಲ್ಲಿ ಉಪ್ಪು ಉತ್ಪಾದಕರು, ಮಾರಾಟಗಾರರ ಒಕ್ಕೂಟದ ಸಭೆ

ಮೈಸೂರು,ನ.28(ಜಿಎ)–ಡಿ.1ರಂದು ನವದೆಹಲಿಯಲ್ಲಿ ನಡೆಯುವ ಪ್ರಾಚೀನ ಉಪ್ಪು ಉತ್ಪಾದಕರ ಮತ್ತು ಮಾರಾಟಗಾರರ ಒಕ್ಕೂಟದ ಸಭೆಯಲ್ಲಿ ರಾಜ್ಯದ ಉಪ್ಪಾರ ಸಮುದಾಯದ ಮುಖಂಡರು ಪಾಲ್ಗೊಳ್ಳಬೇಕೆಂದು ರಾಜ್ಯ ಉಪ್ಪಾರ ಸಂಘದ ಉಪಾಧ್ಯಕ್ಷ ಸಿ.ಎಮಹದೇವಶೆಟ್ಟಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವದೆಹಲಿಯ ಬಹದ್ದೂರ್ ಶಾ ಜಾಫರ್ ರಸ್ತೆಯಲ್ಲಿರುವ ಪ್ಯಾರೇಲಾಲ್ ಭವನದಲ್ಲಿ ಪ್ರಾಚೀನ ಉಪ್ಪು ಉತ್ಪಾದಕ ಮತ್ತು ಮಾರಾಟಗಾರರ ಒಕ್ಕೂಟದ ಮಹಾಸಭೆ ನಡೆಯಲಿದ್ದು, ಭಗೀರಥಿ ಪೀಠದ ಶ್ರೀ ಡಾ.ಪುರುಷೋತ್ತಮಾನಂದಪುರಿ ಮಹಾಸ್ವಾಮೀಜಿ, ಭಾರ್ಗವಾನಂದ ಪುರಿ ಸ್ವಾಮೀಜಿ, ಭಗೀರತಾನಂದಪುರ ಸ್ವಾಮೀಜಿ, ಶಾಸಕ ಪುಟ್ಟರಂಗಶೆಟ್ಟಿ, ಮಾಜಿ ಅಧ್ಯಕ್ಷ ಎಸ್.ಬಸವರಾಜಪ್ಪ, ಹೆಚ್.ಸಿ.ನೀರಾವರಿ, ಹನುಮಂತಶೆಟ್ಟಿ, ರಾಜ್ಯ ಸಂಘದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಉಪ್ಪಾರ ಸಮುದಾಯವು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತಿದೆ. ಕುಲಕಸುಬು ಮಣ್ಣಿನಿಂದ ಉಪ್ಪು ತಯಾರಿಸುವುದಾಗಿದೆ. ನಂತರ ಈ ಚಟುವಟಿಕೆ ಮರೆಯಾಗಿದ್ದು, ಮೂಢನಂಬಿಕೆ, ಅನಕ್ಷರತೆ, ಬಾಲ್ಯವಿವಾಹಗಳು ಕಾಡುತ್ತಿವೆ. ಇದರಿಂದಾಗಿ ಇವರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿಲ್ಲ. ಹೀಗಾಗಿ ಈ ಕುರಿತ ಪರಿಹಾರೋಪಾಯ ಕಂಡುಕೊಳ್ಳುವ ಉದ್ದೇಶ ಈ ಮಹಾಸಭೆ ಹೊಂದಿದೆ ಎಂದರು ಮಾಹಿತಿ ನೀಡಿದರು.

ಆಯಾ ರಾಜ್ಯದ ಸ್ಥಿತಿಗನುಗುಣವಾಗಿ ಉಪ್ಪಾರ ಜಾತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು, ರಾಷ್ಟ್ರೀಯ ಪ್ರಾಚೀನ ಉಪ್ಪು ಉತ್ಪಾದಕರ ಹಣಕಾಸು ಅಭಿವೃದ್ಧಿ ನಿಗಮ ಸ್ಥಾಪಿಸಬೇಕು, ಮೊದಲಾದ ಬೇಡಿಕೆ ಈಡೇರಿಕೆಗೆ ಈ ವೇಳೆ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಷಕಂಠಯ್ಯ, ಫಿಲಂ ಮಹದೇವಶೆಟ್ಟಿ, ಗೋವಿಂದರಾಜು, ಹೆಮ್ಮನಹಳ್ಳಿ ನಾಗೇಶ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಅಭಿನಂದನೆ...


ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಲ್ಲಿ ನಡೆದ 2024–25ನೇ ಸಾಲಿನ ಅಂತರ ಕಾಲೇಜುಗಳ ಪುರುಷರ ಸಾಫ್ಟ್‌ಬಾಲ್ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದಾರೆ. ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಕಾರ್ತಿಕ್, ನಿರಂಜನ್, ಬೋಧಕ–ಬೋಧಕೇತರರು ಅಭಿನಂದಿಸಿದ್ದಾರೆ.

ನಾಳೆ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ನ.28–ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 319ನೆಯ ಕಾರ್ಯಕ್ರಮವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನ.30ರಂದು ಸಂಜೆ 6 ಗಂಟೆಗೆ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ.

'ಆರೋಗ್ಯ ದರ್ಪಣ ಒಂದು ಅನುಭಾವ ಚಿಂತನೆ' ಕುರಿತು ವಿಶ್ರಾಂತ ಆಯುರ್ವೇದ ಪ್ರಾಧ್ಯಾಪಕ ಡಾ.ಬಿ.ಗುರುಬಸವರಾಜ ಉಪನ್ಯಾಸ ನೀಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ನಿರ್ದೇಶಕ ಎಸ್.ಪುಟ್ಟಸುಬ್ಬಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕು. ಎನ್.ಚೂಡಾಮಣಿ ವಚನ ಗಾಯನ ನಡೆಸಿಕೊಡಲಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಡಿ.1ಕ್ಕೆ ಭೈರವದಿಂದ ಭೈರವಿ ಸಂಗೀತೋತ್ಸವ

ಮೈಸೂರು,ನ.28(ಜಿಎ)–ಮೈಸೂರಿನ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ಡಿ.1ರಂದು ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ ಕುವೆಂಪುನಗರದಲ್ಲಿರುವ ಗಾನಭಾರತಿ ರಮಾಗೋವಿಂದ ಕಲಾ ವೇದಿಕೆಯಲ್ಲಿ 'ಭೈರವದಿಂದ ಭೈರವಿ' ಸಂಗೀತೋತ್ಸವ ಹಾಗೂ ಪುಟ್ಟಶ್ರೀ ಸಮ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥ ಭೀಮಾಶಂಕರ ಬಿದನೂರು ಈ ವಿಷಯ ತಿಳಿಸಿ, ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಡಾ.ಎಂ.ಸಿ.ಮನೋಹರ, ಪ್ರಕಾಶ್ ಬಾಳಿಕಾಯಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಭಾದ ಗೌರವಾಧ್ಯಕ್ಷ ಮ.ವಿ.ರಾಮಪ್ರಸಾದ್ ಅಧ್ಯಕ್ಷತೆ ವಹಿಸುವರು. ಈ ವೇಳೆ ನಂತರ ಅಥರ್ವ ಆರ್.ಘಂಟೆಣ್ಣವರ್ ಅವರಿಗೆ ಶಂಕರ ಹಲಗತ್ತಿ ಅವರು ಪುಟ್ಟಶ್ರೀ ಪ್ರದಾನ ಮಾಡುವರು ಎಂದರು. ಬಳಿಕ ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ ವಿವಿಧ ರಾಗಗಳಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮ.ವಿ.ರಾಮಪ್ರಸಾದ್, ರಾಜೇಶ್, ಕೇಶವಮೂರ್ತಿ, ಓಂಕಾರ್, ನೇತ್ರಾವತಿ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಸಂಗೀತ ರಸಧಾರೆ

ಮೈಸೂರು: ಮುಂಬೈನ ವಿ.ಅಪೂರ್ವ ಗೋಖಲೆ ಮತ್ತು ವಿ.ಪಲ್ಲವಿ ಜೋಶಿ ನಗರದಲ್ಲಿ ಸಂಗೀತ ರಸಧಾರೆ ಹರಿಸಲಿದ್ದಾರೆ. ನಗರದ ಗಾಯನ ಸಭಾದಲ್ಲಿ ಅಪೂರ್ವ–ಪಲ್ಲವಿ ಸಹೋದರಿಯರ ಕಾರ್ಯಕ್ರಮವನ್ನು ಗಾನಭಾರತಿಯ 'ವೀಣೆ ಶೇಷಣ್ಣ ಭವನ'ದಲ್ಲಿ ಸಂಜೆ 6 ಗಂಟೆಗೆ ಆಯೋಜಿಸಿದೆ. ಸಾಗರ್ ಭರತ್‌ರಾಜ್ ಮತ್ತು ಪ್ರಸಾದ್ ಕಾಮತ್ ತಬಲಾ ಮತ್ತು ಹಾರ್ಮೋನಿಯಂನಲ್ಲಿ ಸಾಥ್ ನೀಡಲಿದ್ದಾರೆ.

ಶೇಷಾದ್ರಿಪುರಂ ಕಾಲೇಜಲ್ಲಿ ಕನ್ನಡ ರಾಜ್ಯೋತ್ಸವ


ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಿವೃತ್ತ ಪ್ರಾಧ್ಯಾಪಕ ಪ್ರೊ.ಜಯಪ್ರಕಾಶ್‌ಗೌಡ ನವಧಾನ್ಯಗಳನ್ನು ಬೀಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ನ.28– ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಕನ್ನಡ ವಿಭಾಗ, ಶೇಷಾದ್ರಿಪುರಂ ಸ್ವತಂತ್ರ ಪದವಿ–ಪೂರ್ವ ಕಾಲೇಜಿನ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಜಯಪ್ರಕಾಶ್‌ಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ನವಧಾನ್ಯಗಳನ್ನು ಬೀಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಮನುಷ್ಯ ಬೆಳೆಯುತ್ತಿದ್ದಂತೆ ನಾಡು ನನ್ನದು, ದೇಶ ನನ್ನದು ಎಂಬ ಅಭಿಮಾನ ಬೆಳೆಸಿಕೊಳ್ಳಬೇಕು. ಆಗ ಎಲ್ಲವೂ ಕೂಡ ಕ್ಷೇಮವಾಗಿರುತ್ತದೆ. ಆದರೆ ಇಂದು ಎಲ್ಲವನ್ನು ವಿಭಜನೆ ಮಾಡುವ ಮನೋಭಾವ ಬೆಳೆಯುತ್ತಿದೆ. ಅ.ನ.ಕೃಷ್ಣರಾಯ, ಬಿ.ಎಂ.ಶ್ರೀ, ಕುವೆಂಪು, ಆಲೂರು ವೆಂಕಟರಾಯರ ಅಖಿಲ ಕರ್ನಾಟಕ ಸ್ಥಾಪನೆಯ ಅಭಿಲಾಷೆಯ ಕಾಲದಲ್ಲಿದ್ದ ಅಭಿಮಾನದ ಕನಸು ಇಂದು ಅರ್ಥ ಕಳೆದುಕೊಳ್ಳುವಂತಾಗಿದೆ. ಗಾಂಧೀಜಿ ಅವರ ದೇಶ ಒಂದು ಎಂಬ ಆಶಯ, ಕುವೆಂಪು ಅವರ 'ಸರ್ವ ಜನಾಂಗದ ಶಾಂತಿಯ ತೋಟದ' ಆಶಯ ಮರೆಯಾಗುತ್ತಿದೆ. ಎಲ್ಲರೂ ಆಂತರಿಕ ಗುದ್ದಾಟದಿಂದ ಮನಸ್ಸನ್ನು ಕಲುಷಿತಗೊಳಿಸಿಕೊಳ್ಳದೆ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಶೇಷಾದ್ರಿಪುರಂ ಶಿಕ್ಷಣ ದತ್ತಿ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ವ ಜನಾಂಗದ ಶಾಂತಿಯ ತೋಟ ಈ ಕರುನಾಡು ಎಂಬುದು ಕುವೆಂಪು ನೀಡಿದ ಶಾಶ್ವತ ಸಂದೇಶ. ಸಾವಿರಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಎಲ್ಲರೂ ಸಹೋದರ ಭಾವನೆಯಿಂದ ಬಾಳುತ್ತಿದ್ದರು. ಇಂದು ಇದನ್ನು ಕೆಡಿಸುವ ಕಾರ್ಯ ಸೃಷ್ಟಿಯಾಗಿದೆ. ಎಂದಿಗೂ ಆಗಬಾರದು.

ನಮ್ಮಲ್ಲಿ ಕನ್ನಡದ ವಿವೇಕ ಉಳಿಯಬೇಕು. ಶಾಂತಿಯುತ ಸಮುದಾಯದ ಕಲ್ಪನೆ ಬೆಳೆಯಬೇಕು, ಕನ್ನಡದ ಬೇರು ಗಟ್ಟಿಗೊಳ್ಳಬೇಕು. ಹೀಗೆ ತನ್ಮೂಲಕ ನಾವು ನಾಡು ನುಡಿಯನ್ನು ಉಳಿಸಿ ಬೆಳೆಸಬೇಕು ಎಂದರು.

ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಸೌಮ್ಯ ಈರಪ್ಪ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮಾಧಿಕಾರಿ ಅನಿಲ್‌ಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಲಾವಣ್ಯ, ಸಹಾಯಕ ಪ್ರಾಧ್ಯಾಪಕರಾದ ಸಿದ್ದಪ್ಪ, ರಶ್ಮಿ ಹಾಗೂ ಬೋಧಕ –ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

'ಅಭಿನವ ಅರಸು' ಸಿದ್ದರಾಮಯ್ಯನವರ ಬದುಕು, ರಾಜಕಾರಣ ಕೃತಿ ಅವಲೋಕನ

ಮೈಸೂರು, ನ.28(ಜಿಎ)– ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಡಿ.1ರಂದು ಬೆಳಗ್ಗೆ 11 ಗಂಟೆಗೆ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ 'ಅಭಿನವ ಅರಸು' ಸಿದ್ದರಾಮಯ್ಯನವರ ಬದುಕು ಮತ್ತು ರಾಜಕಾರಣ ಕೃತಿಯ ಅವಲೋಕನ ಕಾರ್ಯಕ್ರಮ ಆಯೋಜಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕೃತಿಯ ಲೇಖಕ ಡಾ.ಮಹೇಶ್ ದಳಪತಿ ಈ ವಿಷಯ ತಿಳಿಸಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಪದ್ಮಾ ಶೇಖರ್, ಪ್ರೊ.ಡಿ.ಆನಂದ್, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಡಾ.ಬಿ.ಜೆ. ವಿಜಯಕುಮಾರ್, ಕೆ.ಎಸ್. ಶಿವರಾಮು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕೃತಿಯು 336 ಪುಟಗಳಿಂದ ಕೂಡಿದ್ದು, 400 ರೂ. ದರ ನಿಗದಿಪಡಿಸಲಾಗಿದೆ. ಕಾರ್ಯಕ್ರಮ ವೇಳೆ ರಿಯಾಯಿತಿ ದರದಲ್ಲಿ 250 ರೂ.ಗೆ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ಎಂ.ರವಿಕುಮಾರ್ ಇದ್ದರು.

ಕಾವೇರಿ ವಿದ್ಯಾಸಂಸ್ಥೆಯಲ್ಲಿ ರಕ್ತದಾನ ಶಿಬಿರ



ಮೈಸೂರು,ನ.28(ಜಿಎ)– ನೌಕಾಪಡೆ ಮಾಜಿ ಯೋಧರು ಮತ್ತು ಅಧಿಕಾರಿಗಳ ಸಂಸ್ಥೆ, ಲಯನ್ಸ್ ಕ್ಲಬ್, ರೋಟರಿ ಶ್ರೀಗಂಧ, ಜೀವಧಾರ ರಕ್ತ ನಿಧಿ ವತಿಯಿಂದ ಡಿ.1 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಕುವೆಂಪುನಗರ ಕಾವೇರಿ ವಿದ್ಯಾ ಸಂಸ್ಥೆಯಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಗಜಾನನ ಭಟ್ ಈ ವಿಷಯ ತಿಳಿಸಿ, ಪಾಕ್ ವಿರುದ್ಧದ ಯುದ್ಧದಲ್ಲಿ ಭಾರತ ಜಯ ಗಳಿಸಿದ ವಿಜಯ ದಿನ ನೆನಪಿನಲ್ಲಿ ಈ ಶಿಬಿರ ಆಯೋಜಿಸಲಾಗಿದ್ದು, ಎನ್‌ಸಿಸಿ ಕೆಡೆಟ್‌ಗಳು ಮಾತ್ರವಲ್ಲದೆ, ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಎನ್‌ಸಿಸಿ ಅನುಭವ ಹೊಂದಿದವರಿಗೆ ಸೇನೆಯಲ್ಲಿ ವಿಫುಲ ಅವಕಾಶಗಳಿವೆ. ಭದ್ರತಾ ಸೇವೆಯಲ್ಲಿಯು ಆದ್ಯತೆ ದೊರೆಯುತ್ತದೆ ಎಂದರು. ಗೋಷ್ಠಿಯಲ್ಲಿ ಅಭಿಲಾಷ್, ರಾಮು, ಉತ್ತಪ್ಪ, ಮಯಾಂಕ್ ಸಚಿನ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.11.2024 ಶುಕ್ರವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿನ್‌ಸನ್ಸ್ ಕಾಯಿಲೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30 ರಿಂದ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆಯ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಪ್ರಗತಿಪರ ಸಂಘಟನೆಗಳ ಒಕ್ಕೂಟಗಳು:** ಶ್ರೀ ಸಿದ್ದರಾಮಯ್ಯ ಸ್ವಾಭಿಮಾನಿ ಜನಾಂದೋಲನ ಸಮಾವೇಶ ಬೆಂಬಲಿಸಿ ಪ್ರಚಾರ ವಾಹನಕ್ಕೆ ಚಾಲನೆ, ಉಪಸ್ಥಿತರು: ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ ಕೆ.ಹರೀಶ್‌ಗೌಡ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಡಾ.ಬಿ.ಜೆ.ವಿಜಯಕುಮಾರ್, ಜನಾರ್ಧನ್ ಜನ್ನಿ, ಎಂ.ಸುಬ್ರಹ್ಮಣ್ಯ, ಕೆ.ಎಸ್.ಶಿವರಾಮು, ಎಂ.ಶಿವಣ್ಣ, ಅಯೂಬ್ ಖಾನ್, ಕೆ.ರಘುರಾಂ ವಾಜಪೇಯಿ, ಹೆಚ್.ವಿ.ರಾಜೀವ್, ಸ್ಥಳ: ಮಾನಸಗಂಗೋತ್ರಿ ಪ್ರವೇಶ ದ್ವಾರ, ಕುವೆಂಪು ಪ್ರತಿಮೆ ಎದುರು, ಬೆಳಗ್ಗೆ 10ಕ್ಕೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ:** ಕನ್ನಡ ರಾಜ್ಯೋತ್ಸವ–ನಿತ್ಯೋತ್ಸವ, ಉದ್ಘಾಟನೆ: ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಮುಖ್ಯ ಅತಿಥಿ: ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಶುಭಚಂದ್ರ, ಸ್ಥಳ: ಪ್ರಿವ್ಯೂ ಥಿಯೇಟರ್, ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಮಹಿಳಾ ಕಾಲೇಜು:** ದೀಕ್ಷಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ), ಪ್ರೊ.ಎನ್.ನಾಗರಾಜು, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮುಗೇಶಪ್ಪ, ಮುಖ್ಯ ಅತಿಥಿಗಳು: ಮಹಾಜನ ಪಿಜಿ ಸೆಂಟರ್‌ನ ಅರ್ಥಶಾಸ್ತ್ರ ವಿಭಾಗದ ನಿರ್ದೇಶಕಿ ಪ್ರೊ.ಸಿ.ಕೆ.ರೇಣುಕಾರ್ಯ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಉಪನಿರ್ದೇಶಕ ಬಿ.ನಿರಂಜನ ಮೂರ್ತಿ, ಸ್ಥಳ: ಜೆಎಸ್‌ಎಸ್ ಮಹಾವಿದ್ಯಾಪೀಠ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** 69ನೇ ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಮಹೇಶ್ ಆರ್, ಮುಖ್ಯ ಅತಿಥಿ: ವೃತ್ತಿ ರಂಗ ಕಲಾವಿದೆ ಸರಸ್ವತಿ ಜುಲೇಖಾ ಬೇಗಂ, ಸ್ಥಳ: ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಶತಮಾನೋತ್ಸವ, ಭವನ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘ :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿ: ಸಂತ ಫಿಲೋಮಿನಾ ಪದವಿ ಮಹಾವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ, ಅಧ್ಯಕ್ಷತೆ: ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ಅಧ್ಯಕ್ಷೆ ಶ್ರೀಮತಿ ಶಿವಮ್ಮ, ಉಪಸ್ಥಿತರು: ಡಾ.ರಂಗಸ್ವಾಮಿ, ಹೇಮಲತಾ, ಕುಶಾಲಪ್ಪ, ರುಕ್ಮಿಣಿ, ಆಲೀಸ್ ಫ್ಲಾರೆನ್ಸ್ ಕ್ರಾಸ್ತಾ, ಸ್ಥಳ: ಶ್ರೀ ಗುರು ರೆಸಿಡೆನ್ಸಿ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ:** ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ 2024–24 ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ(ಪರೀಕ್ಷಾಂಗ ಪ್ರೊ.ಎನ್.ನಾಗರಾಜು, ಅತಿಥಿಗಳು: ಮುಕ್ತ ವಿವಿ ಗ್ರಂಥಪಾಲಕ ಡಾ.ಕೆ.ಪ್ರಕಾಶ್, ಅಧ್ಯಕ್ಷತೆ: ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ, ಸ್ಥಳ: ಡಾ.ಎಸ್.ಆರ್.ರಂಗನಾಥನ್ ಸಭಾಂಗಣ, ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ಅಧ್ಯಯನ ವಿಭಾಗ, ಮಧ್ಯಾಹ್ನ 3.30ಕ್ಕೆ

■ **ರೋಟರಿ ಮೈಸೂರು ಉತ್ತರ :** ಗೊ.ರು.ಚ. ಅಂತರ ಕಾಲೇಜು ಸುಗಮ ಸಂಗೀತ ಸ್ಪರ್ಧೆ –2024, ಉದ್ಘಾಟನೆ: ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಅಧ್ಯಕ್ಷತೆ: ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಪಿ.ಪ್ರಭಾಕರ್, ಸ್ಥಳ: ರೋಟರಿ ಭವನ, ರೈಲ್ವೇ ಲೇ ಔಟ್, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಗೆ. ಸಮಾರೋಪ ಸಮಾರಂಭ, ಬಹುಮಾನ ವಿತರಣೆ, ಮುಖ್ಯ ಅತಿಥಿಗಳು: ಮುಕ್ತ ವಿವಿ ಪ್ರಾಧ್ಯಾಪಕ ಡಾ.ಜ್ಯೋತಿಶಂಕರ್, ಉಪಸ್ಥಿತಿ: ರೋಟರಿ ಮೈಸೂರು ಉತ್ತರ ಗೌರವ ಸದಸ್ಯೆ ಕು.ಅಮೂಲ್ಯ, ಅಧ್ಯಕ್ಷತೆ: ರೊ.ಪಿ.ಪ್ರಭಾಕರ್, ಸಂಜೆ 6 ಗಂಟೆಗೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಪ್ರತಿನಿತ್ಯ ಬೆಳಗ್ಗೆ ರುದ್ರಾಭಿಷೇಕ, ಸಂಜೆ 7ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10–ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಕಲೀಂವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 –KSOU ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಎಂ.ವಿ.ನಂದೀಶ್, ಉಪಕುಲಸಚಿವರು, ಪ್ರವೇಶಾತಿ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50–ರೈತರಿಗೆ ಸಲಹೆ, 7.15–KABHI ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನಮ್ಮ ಆರೋಗ್ಯ–ಆಂಟಿ ಮೈಕ್ರೋಬಿಯಲ್ ರೆಸಿಸ್ಟೆನ್ಸ್ ಜಾಗೃತಿ ಸಪ್ತಾಹದ ಸಂದರ್ಭದಲ್ಲಿ ' ಆಂಟಿ ಮೈಕ್ರೋಬಿಯಲ್ ರೆಸಿಸ್ಟೆನ್ಸ್' ಕುರಿತು ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದ ಪ್ರೊಫೆಸರ್ ಡಾ.ಎಂ.ಎಸ್. ಸುಮನಾ ಅವರೊಂದಿಗೆ ಮಾತುಕತೆ. ನಂತರ 'ಮಧುಮೇಹ ಸಂಬಂಧಿತ ಸಮಸ್ಯೆಗಳ ಪೂರ್ವ ತಪಾಸಣೆ ಹಾಗೂ ಚಿಕಿತ್ಸೆ' ಕುರಿತು ಮಧುಮೇಹ ತಜ್ಞರಾದ ಡಾ.ರೇಣುಕಾಪ್ರಸಾದ್ ಎ.ಆರ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇಂದ್ರೆ ಮಂಜುನಾಥ್, 9.40–ಗಾಂಧಿ ಸ್ಮೃತಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಕುನ್ನುಕುಡಿ ಎಂ. ಬಾಲಮುರಳಿಕೃಷ್ಣ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –"ಸೈಕಲ್ ಸವಾರಿ ಮಾತಿನ ಲಹರಿ", ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, **ಮಧ್ಯಾಹ್ನ :** 12.35–ದೇವರನಾಮ, 12.45–ಕಾದಂಬರಿ ವಿಹಾರ–ಎಂ.ಆರ್. ಶ್ರೀನಿವಾಸಮೂರ್ತಿ ಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್. ಎಸ್, 1.00–ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.20 –ಭಾವಗೀತೆಗಳು, 1.30–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40–ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55–ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಲ್.ವೈದ್ಯನಾಥನ್–ವಯೋಲಿನ್ ವಾದನ, 4.00–ಮಹಿಳಾರಂಗ–ಸಖೀ ಸಾಹಿತ್ಯ–ಉಷಾ ನರಸಿಂಹನ್, ವಿನೋದ ಹಾಗೂ ಮೀನಾಕ್ಷಿ. ಬಿ.ಕೆ. ಅವರಿಂದ ಕಥೆ, ಕವಿತೆ ಹಾಗೂ ಪ್ರಬಂಧ ವಾಚನ, 4.30–ವೃತ್ತಿ ಮಾರ್ಗದರ್ಶನ–'ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ' ಕುರಿತು ಯಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಜಿ.ಮಂಜುನಾಥ್, ತೋಟ ಗಾರಿಕಾ ವಿಜ್ಞಾನ ವಿದ್ಯಾರ್ಥಿಗಳಾದ ವಿಜಯ್ ಬಾಲಾಜಿ ಮತ್ತು ಇಂಚರ. ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಎನ್.ಕೇಶವಮೂರ್ತಿ, 6.50–ಕೃಷಿರಂಗ: ಕಬ್ಬಿನ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ: ಮದ್ದೂರು ತಾಲೂಕು ಕೊಪ್ಪ ಹೋಬಳಿ ಬೆಳತೂರು ಗ್ರಾಮದ ಬಿ.ಟಿ.ಶಿವರಾಮಯ್ಯ ಹಾಗೂ ಬಿ.ಎಸ್.ಪ್ರಭುಲಿಂಗು, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ–ಪತ್ರ್ಯದಲ್ಲಿ ಕನ್ನಡ ಮಾತನಾಡುತ್ತಾರೆ–ಪ್ರೊ. ಮೈಸೂರು ಕೃಷ್ಣಮೂರ್ತಿ, 8.00–ಚರ್ಚೆ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ನಂದಿತಾ. ಪಿ–ಹಾಡುಗಾರಿಕೆ, 10.00–ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30–ಸವಿನೆನಪು

ನಾಳೆ ಮೈಸೂರು ಚಿಲ್ಡ್ರನ್ಸ್ ಲಿಟರೇಚರ್ ಫೆಸ್ಟಿವಲ್


ಶಾಮಾ ಥಾಕ್ರೆ


ಶರನ್ ದೇವ್


ಸೆಂಥಿಲ್


ಫಣೀಶ್

ಮೈಸೂರು,ನ.28(ಪಿಎಂ)– ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015ರ ವತಿಯಿಂದ 4 ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ಮಕ್ಕಳಿಗಾಗಿ 9ನೇ ಆವೃತ್ತಿಯ 'ಮೈಸೂರು ಚಿಲ್ಡ್ರನ್ಸ್ ಲಿಟರೇಚರ್ ಫೆಸ್ಟಿವಲ್ 2024' ಅನ್ನು ನ.30ರಂದು ಆಯೋಜಿಸಲಾಗಿದೆ.

ಮೈಸೂರಿನ ನಜರ್‌ಬಾದಿನ ವಿಂಡ್ ಚೈಮ್ಸ್‌ನಲ್ಲಿ ಆಯೋಜಿಸಿರುವ ಚಿಲ್ಡ್ರನ್ಸ್ ಲಿಟರೇಚರ್ ಫೆಸ್ಟಿವಲ್ ಅನ್ನು ಅಂದು ಮಧ್ಯಾಹ್ನ 2ಕ್ಕೆ ಅಯೋಧ್ಯೆ ಬಾಲರಾಮ ಮೂರ್ತಿ ಕೆತ್ತನೆಯ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಉದ್ಘಾಟಿಸಲಿದ್ದಾರೆ. ಬಳಿಕ ಅವರು ತಮ್ಮ ಅಮೂಲ್ಯ ಅನುಭವಗಳನ್ನು ಬಿಚ್ಚಿಡಲಿದ್ದಾರೆ. ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿರುವ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡುವ ಜೊತೆಗೆ, ಸಣ್ಣಕಥಾ ಸ್ಪರ್ಧೆ ಮತ್ತು ಜಿಲ್ಲಾ ಮಟ್ಟದ ಸಾಮಾನ್ಯ ಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಿದ್ದಾರೆ.

ಫೆಸ್ಟಿವಲ್‌ನಲ್ಲಿ ಮೂವರು ಉದಯೋನ್ಮುಖ ಸಾಹಿತಿಗಳಾದ ಶಾಮಾ ಥಾಕ್ರೆ, ಶರನ್ ದೇವ್ ಮತ್ತು ಶ್ರೀವಲ್ಲಿ ಶ್ರೀನಿವಾಸನ್ ಮಾತ್ರವಲ್ಲದೆ, ರಮ್ಯ ಶ್ರೀನಿಧಿ, ಶ್ರೇಯಾ ನಾರಾಯಣನ್, ಅನುಪಮಾ ಕೆ.ಬೆಂಚಿನಮರಡಿ ಮತ್ತು ಗಣೇಶ್ ವೆಂಕಟೇಶ್ ಸಹ ಪಾಲ್ಗೊಳ್ಳಲಿದ್ದಾರೆ. ಮಕ್ಕಳಿಗೆ ರೋಮಾಂಚನ ಉಂಟು ಮಾಡುವ ರಹಸ್ಯಮಯ ಕತೆಗಳನ್ನು ಹೇಳಲು ಅರುಣ್ ಅರಸ್, ನಮ್ರತಾ ಅರಸ್ ಮತ್ತು ಚಾಂದಿನಿ ಭಾಗವಹಿಸಲಿದ್ದಾರೆ.

ಚಿತ್ರಕಾರರಾದ ವನ್ಯಾ ಜೋಸೆಫ್, ಸೆಂಥಿಲ್ ತಮ್ಮ ಕಲ್ಪನೆಯ ಚಿತ್ರಗಳನ್ನೆಲ್ಲಾ ನಮ್ಮೆದುರು ಕ್ಯಾನ್ವಾಸಿನ ಮೇಲೆ ಅನಾವರಣಗೊಳಿಸಲಿದ್ದಾರೆ. ಡಾ.ನೀಮಾ ಮಾಂಡ್ರೇಕರ್, ಪೂಜಾ ತೋಶ್ನಿವಾಲ್ ಮತ್ತು ರೂಪಾ ಶಿವಪ್ರಾಕಾಶ್ ಮಕ್ಕಳಿಗೆ ಕಥೆ ಹೇಳುತ್ತಾ ಅವರನ್ನು ಸಂತಸದಲ್ಲಿ ತೇಲುವಂತೆ ಮಾಡಲಿದ್ದಾರೆ. ಜೊತೆಗೆ ಮಾತನಾಡುವ ಗೊಂಬೆ ಪ್ರದರ್ಶನದ ಮೂಲಕ ಸುಮಾ ರಾಜ್‌ಕುಮಾರ್ ಮಕ್ಕಳ ಮನಸ್ಸಿಗೆ ಲಗ್ಗೆಯಿಡಲಿದ್ದಾರೆ.

ಕೇವಲ ಮನರಂಜನೆ ಮಾತ್ರವಲ್ಲದೆ, ಮಕ್ಕಳ ಕಲಿಕೆಯ ಹಂಬಲಕ್ಕೆ ಹೊಸ ಉತ್ಸಾಹ ತುಂಬುವ ಪ್ರಯತ್ನವೂ ಈ ಫೆಸ್ಟಿವಲ್‌ನ ಉದ್ದೇಶವಾಗಿದೆ. ರೋಬೊಟಿಕ್ಸ್ ತಂತ್ರಜ್ಞಾನದ ಪ್ರಪಂಚಕ್ಕೆ ಫಣೀಶ್ ಕರೆದೊಯ್ಯಲಿದ್ದು, ಇದು ಮಕ್ಕಳಲ್ಲಿರುವ ಅದಮ್ಯ ಉತ್ಸಾಹ ಮತ್ತು ಕ್ರಿಯಾಶೀಲತೆಗೆ ಇಂಬು ನೀಡಲಿದೆ.

ಚಿಟ್ಟೆಗಳ ಅದ್ಭುತವಾದ ಬಣ್ಣದ ಲೋಕಕ್ಕೆ ಸಂಬಂಧಿಸಿದ ಸ್ವಾರಸ್ಯಕರ ವಿಷಯಗಳನ್ನು ಬಿಚ್ಚಿಡುವ ಗೋಷ್ಠಿಯ ಜೊತೆಗೆ ಕಥೆಗಳನ್ನು ಬರೆಯುವ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ನೀಡುವ ಗೋಷ್ಠಿಯೂ ಇರಲಿದೆ. 4 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ಮಕ್ಕಳಿಗೆ ಉಚಿತ ಪ್ರವೇಶವಿದ್ದು, ಮಕ್ಕಳು ಮತ್ತು ಪೋಷಕರು ಒಟ್ಟಾಗಿ ಸಂಭ್ರಮಿಸುವುದಕ್ಕೆ ಈ ಫೆಸ್ಟಿವಲ್ ವೇದಿಕೆ ಒದಗಿಸಲಿದೆ.

ಇಷ್ಟೇ ಅಲ್ಲದೆ, ಮಕ್ಕಳು ಮತ್ತು ಪೋಷಕರ ಕಣ್ಮನ ಸೆಳೆಯುವ ಆಕರ್ಷಕ ಮಳಿಗೆಗಳೂ ಈ ಫೆಸ್ಟಿವಲ್‌ನಲ್ಲಿ ಇರಲಿವೆ. ಮಕ್ಕಳಿಗಾಗಿ ಪುಸ್ತಕ, ವಿಶಿಷ್ಟ ಜೆಲ್ ಆಟಿಕೆಗಳು, ಟ್ಯಾಟೂ, ರೋಬೋಟಿಕ್ಸ್ ಮಳಿಗೆಗಳು, ವಿಕಲಚೇತನರ ಸಶಕ್ತೀಕರಣಕ್ಕಾಗಿ ಶ್ರಮಿಸುವ ಮೈತ್ರಿ ಚಾರಿಟೆಬಲ್ ಟ್ರಸ್ಟ್‌ನ ಮಳಿಗೆಗಳು ಇರಲಿವೆ. ತೋಟಗಾರಿಕೆ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಬೆಳೆಸುವುದಕ್ಕಾಗಿ ಶಿರಸಿಯ ಸಂಸ್ಥೆಯು ವಿವಿಧ ತರಕಾರಿ ಬೀಜಗಳ ಮಾರಾಟ ಮಾಡಲಿದೆ. ಹಾಗೆಯೇ ಅಮ್ಮಂದಿರಿಗಾಗಿ ವೈವಿಧ್ಯಮಯ ಬಟ್ಟೆಗಳು ಮತ್ತು ಸೀರೆಗಳ ಅಂಗಡಿಗಳೂ ಇರುತ್ತವೆ. ವೈವಿಧ್ಯಮಯ ಖಾದ್ಯಗಳ ಮಳಿಗೆಗಳು ಮಕ್ಕಳ ಬಾಯಲ್ಲಿ ನೀರೂರಿಸಲಿವೆ. ಮಕ್ಕಳು ತಮ್ಮ ತಮ್ಮ ವ್ಯಂಗ್ಯಚಿತ್ರಗಳನ್ನು ಬರೆಸಿ ನೋಡಬಹುದು. ಪುಸ್ತಕ ವಿನಿಮಯಕ್ಕೂ ಫೆಸ್ಟಿವಲ್ ಅವಕಾಶ ಕಲ್ಪಿಸಲಿದ್ದು, ಓದಿದ ಹೊಸ ಪುಸ್ತಕಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಬಹುದು.

ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಅವರ ನೇತೃತ್ವದಲ್ಲಿ ಫೆಸ್ಟಿವಲ್ ನಡೆಯುತ್ತಿದ್ದು, ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವ ಸದುದ್ದೇಶದಿಂದ ಈ ಫೆಸ್ಟಿವಲ್ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 96069 93137 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವಾಹ ಮಹೋತ್ಸವ...


ಕನ್ನಡದ ಖ್ಯಾತ ಸಾಹಿತಿ ದಿವಂಗತ ಆಲನಹಳ್ಳಿ ಕೃಷ್ಣ ಅವರ ಪುತ್ರಿ ಕೃತಿಕಾ ಆಲನಹಳ್ಳಿ ಅವರ ವಿವಾಹ ಕಣ್ಣನ್ ಮನೋಹರನ್ ಅವರೊಂದಿಗೆ ಗುರುವಾರ ವಿಂಡ್ ಫ್ಲವರ್ ರೆಸಾರ್ಟ್‌ನಲ್ಲಿ ನೆರವೇರಿತು. ಬುಧವಾರ ಸಂಜೆ ನಡೆದ ಆರತಕ್ಷತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ನವ ವಧು–ವರರಿಗೆ ಆಶೀರ್ವದಿಸಿದರು. ಚಿತ್ರದಲ್ಲಿ (ಎಡದಿಂದ) ಶ್ರೀಮತಿ ಜೋತ್ಸನ ಪ್ರದ್ಯುಮ್ನ ಆಲನಹಳ್ಳಿ, ಕಾಂಗ್ರೆಸ್ ಮುಖಂಡ ಪ್ರದ್ಯುಮ್ನ ಆಲನಹಳ್ಳಿ, ಕೃತಿಕಾ ಆಲನಹಳ್ಳಿ (ವಧು), ಕಣ್ಣನ್ ಮನೋಹರನ್(ವರ), ಶ್ರೀಮತಿ ಸೆಲ್ವಿ ಮನೋಹರನ್, ಶ್ರೀಮತಿ ವಿನುತಾ ಆಲನಹಳ್ಳಿ (ಆಲನಹಳ್ಳಿ ಕೃಷ್ಣ ಅವರ ಧರ್ಮಪತ್ನಿ), ಮನೋಹರನ್, ಪ್ರದ್ಯುಮ್ನ ಆಲನಹಳ್ಳಿ ಅವರ ಪುತ್ರಿಯರಾದ ಹೃದಯ ಆಲನಹಳ್ಳಿ, ಸ್ಪರ್ಶ ಆಲನಹಳ್ಳಿ (ಕುಳಿತಿರುವವರು) ಇತರರನ್ನು ಕಾಣಬಹುದು.

19 ವರ್ಷದೊಳಗಿನ ಕೂಚ್ ಬೆಹಾರ್ ಟ್ರೋಫಿ ಪಂದ್ಯಾವಳಿ

ಮೊದಲ ದಿನದಂತ್ಯಕ್ಕೆ ಕರ್ನಾಟಕ 290/8

ಮೈಸೂರು, ನ.28(ಎಂಟಿವೈ)– 19 ವರ್ಷದೊಳಗಿನ ಕೂಚ್ ಬೆಹಾರ್ ಟ್ರೋಫಿ ಪಂದ್ಯಾವಳಿಯ ಕರ್ನಾಟಕ–ಒಡಿಶಾ ನಡುವಿನ ಪಂದ್ಯದಲ್ಲಿ ಮೊದಲ ದಿನದ ಅಂತ್ಯಕ್ಕೆ ಕರ್ನಾಟಕ 90 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 290 ರನ್ ಗಳಿಸಿದೆ.

ಇಲ್ಲಿನ ಮಾನಸ ಗಂಗೋತ್ರಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ 4 ದಿನಗಳ ಪಂದ್ಯದಲ್ಲಿ ಟಾಸ್ ಗೆದ್ದ ಒಡಿಶಾ ನಾಯಕ ಶ್ರೇಯಂಶ್ ಭಾರದ್ವಾಜ್ ಫೀಲ್ಡಿಂಗ್ ಆಯ್ದುಕೊಂಡು ಕರ್ನಾಟಕವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಎಸ್.ಗಗನ್ ರಾವ್ ಹಾಗೂ ಶಿವಂ ಸಿಂಗ್ ಮೊದಲ ವಿಕೆಟ್‌ಗೆ 75 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ 49 ರನ್ ಗಳಿಸಿದ್ದ ಶಿವಂ ಸಿಂಗ್ ಔಟಾಗುವ ಮೂಲಕ 1 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು.


ಕರ್ನಾಟಕದ ಆರಂಭಿಕರಾದ ಗಗನ್ ರಾವ್ ಹಾಗೂ ಶಿವಂಸಿಂಗ್ ರನ್ ಕಲೆಹಾಕುತ್ತಿರುವುದು.

ನಂತರ ಬಂದ ಮಣಿಕಂಠ ಹಾಗೂ ಗಗನ್‌ರಾವ್ 69ರನ್‌ಗಳ ಜೊತೆಯಾಟವಾಡಿದರು. ಈ ವೇಳೆ ತಂಡದ ಮೊತ್ತ 144ರನ್ ಆಗಿದ್ದ ವೇಳೆ 61 ರನ್ ಗಳಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಗಗನ್ ರಾವ್ ಔಟಾದರು. ನಂತರ ಬಂದ ಸಿದ್ಧಾರ್ಥ ಅಖಿಲ್ ಸಹ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಅರ್ಧಶತಕದ ಹೊಸ್ತಿನಲ್ಲಿದ್ದ ಮಣಿಕಂಠ ಶಿವಾನಂದ್ 49 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ತಂಡದ ಮೊತ್ತ 63.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 210 ರನ್ ಆಗಿತ್ತು. ಬಳಿಕ ಬಂದ ರೋಹಿತ್ ಆರ್.ವಾರಂಬಲ್ಲಿ 26 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ನಾಯಕ ಧೀರಜ್‌ಗೌಡ 49ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಅಲ್ಲಿವರೆಗೂ ಒಡಿಶಾ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಕರ್ನಾಟಕ ಆಟಗಾರರು ನಂತರ ರನ್ ಗಳಿಸಲು ಪರದಾಡಿದರು. ನಂತರ ವಿಕೆಟ್ ಕೀಪರ್ ಪ್ರತೀಕ್ 3, ಈಸಾ ಪುತ್ತಿಗೆ 1ರನ್ ಗಳಿಸಿ ಔಟಾದರು. ಕ್ರೀಸ್‌ನಲ್ಲಿ ಗೌರವ ಶಾನ್‌ಬಾಗ್ ಅಜೇಯ 10, ಪ್ರಣವ್ ಅಶ್ವಂತ್ ಯಾವುದೇ ರನ್ ಗಳಿಸದೇ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಒಡಿಶಾ ಪರ ಸಯ್ಯದ್ ತುಫಾಯ್ ಅಹ್ಮದ್ 4, ಅಭಿಷೇಕ್ ಸಿಂಗ್, ಸಂಬಿತ್ ಕೆ.ಬೆಜಾ, ಸೌಭಾಗ್ಯ ಓಝಾ, ಪ್ರಯಾನ್ ಪ್ರಂತಿಕ್ ಸಮಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ

ರಂಗಕರ್ಮಿ ಬಿ.ಎಂ.ರಾಮಚಂದ್ರ ಕಿವಿಮಾತು

ಮೈಸೂರು, ನ.28(ಎಂಕೆ)– ಕನ್ನಡ ಭಾಷಾಭಿಮಾನದ ಜೊತೆಗೆ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ರಂಗಕರ್ಮಿ ಬಿ.ಎಂ.ರಾಮಚಂದ್ರ ತಿಳಿಸಿದರು.

ಮೈಸೂರಿನ ಎಸ್‌ಬಿಎಂ ಹಾಗೂ ಇತರೆ ಬ್ಯಾಂಕ್ ನೌಕರರ ಬಡಾವಣೆಯಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ನಮ್ಮ ತಾಯಿ ಭಾಷೆ ಮಾತ್ರವಲ್ಲ ನಮ್ಮ ಹೃದಯದ ಭಾಷೆಯೂ ಆಗಿದೆ ಎಂದರು.

ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಜನಪದ, ಸಂಗೀತ, ನೃತ್ಯ, ಶಿಲ್ಪಕಲೆ, ಗಮಕ ಕಲೆಗಳನ್ನು ಉಳಿಸಿ ಬೆಳೆಸುವ ದಿಕ್ಕಿನಲ್ಲಿ ಪ್ರತಿಯೊಬ್ಬರು ಗಮನಹರಿಸಬೇಕು ಎಂದು ನೆರೆದಿದ್ದವರಿಗೆ ಕಿವಿಮಾತು ಹೇಳಿದರು.


ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ನಂತರ ಸಂಗೀತ ಬ್ಯಾಂಡ್‌ನೊಂದಿಗೆ ಚಾರು ತಂಡದಿಂದ ರಂಗಗೀತೆಗಳನ್ನು ಪ್ರಸ್ತುತಪಡಿಸಲಾಯಿತು. ಕನ್ನಡ ವಾಚನ ಮತ್ತು ಲೇಖನ ಸ್ಪರ್ಧೆಯಲ್ಲಿ ಸ್ಪರ್ಧಿಸಿದ್ದ ಎಲ್ಲರಿಗೂ ಬಹುಮಾನ ವಿತರಣೆಯನ್ನು ಮಾಡಲಾಯಿತು. ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷೆ ಡಿ.ಶೀಲಾಕುಮಾರಿ, ವಿದುಷಿ ಅಪರ್ಣ ಉಪಸ್ಥಿತರಿದ್ದರು.

ಆಧ್ಯಾತ್ಮಿಕ ಆರೋಗ್ಯದ ವೈಜ್ಞಾನಿಕ ವಿಚಾರ ಸಂಕಿರಣ

ಸಂತೋಷವೇ ಆರೋಗ್ಯ; ಅಸಂತೋಷವೇ ಅನಾರೋಗ್ಯ

ವೈದ್ಯ ಸಾಹಿತಿ ಡಾ.ಯೋಗಣ್ಣ ಅಭಿಮತ

ಮೈಸೂರು, ನ.28(ಎಂಕೆ)– ಸಂತೋಷದ ಸ್ಥಿತಿಯೇ ಆರೋಗ್ಯ, ಅಸಂತೋಷದ ಸ್ಥಿತಿಯೇ ಅನಾರೋಗ್ಯ. ಆಧ್ಯಾತ್ಮವೆಂಬುದೇ ಆರೋಗ್ಯದ ಪ್ರಕಾರ ಎಂದು ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಹೇಳಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶಿಕ್ಷಕರ ಸಂಘದ ವತಿಯಿಂದ ಜೆ.ಕೆ.ಮೈದಾನದಲ್ಲಿರುವ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಆಧ್ಯಾತ್ಮಿಕ ಆರೋಗ್ಯದ ವೈಜ್ಞಾನಿಕ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಆಧುನಿಕ ವೈದ್ಯ ವಿಜ್ಞಾನ ದೇಹವನ್ನು ಗುರುತಿಸಿದರೆ, ಆಧ್ಯಾತ್ಮ ಆತ್ಮವನ್ನು ಗುರುತಿಸುತ್ತದೆ. ಆಧ್ಯಾತ್ಮ ಎಂದರೆ ದೇವರಲ್ಲ ಅದೊಂದು ಸೃಷ್ಟಿಯ ನಿಯಮ ಎಂದರು.

ಪ್ರತಿಯೊಂದು ಮನಸ್ಸಿನ ನಿಯಂತ್ರಣದಲ್ಲಿದ್ದು, ಚಿಂತನೆ ಸರಿದಾರಿಯಲ್ಲಿ ಸಾಗಬೇಕಾದರೆ ಆಧ್ಯಾತ್ಮ ಅವಶ್ಯವಾಗಿದೆ. ಆಧ್ಯಾತ್ಮದ ಅತೀತ ಪ್ರಭಾವ ಶಕ್ತಿ ಮನಸ್ಸಿನ ಮೂಲಕ ದೇಹದ ಅಂಗಾಂಗಗಳ ಮೇಲೆ ಪರಿಣಾಮ ಬೀರುತ್ತದೆ. ಮನಸ್ಸನ್ನು ಸಮಸ್ಥಿತಿಯಲ್ಲಿ ಇಟ್ಟುಕೊಳ್ಳಲು ಆಧ್ಯಾತ್ಮಿಕ ಚಿಂತನೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.



ಆಧ್ಯಾತ್ಮಿಕ ಆರೋಗ್ಯದ ವೈಜ್ಞಾನಿಕ ವಿಚಾರ ಸಂಕಿರಣವನ್ನು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದಜೀ ಮಹಾರಾಜ್ ಉದ್ಘಾಟಿಸಿದರು.

ವೈದ್ಯಕೀಯ ಸಾಹಿತ್ಯದಲ್ಲಿ ದೈಹಿಕ, ಸಾಮಾಜಿಕ, ಮಾನಸಿಕ ಆರೋಗ್ಯದ ಬಗ್ಗೆ ಮಾನದಂಡಗಳಿವೆ. ಆದರೆ ಆಧ್ಯಾತ್ಮದ ಬಗ್ಗೆ ಯಾವುದೇ ಮಾನದಂಡಗಳಿಲ್ಲ. ಹಾಗಾಗಿ ಆಧ್ಯಾತ್ಮಿಕ ಶಿಕ್ಷಣವನ್ನು ಪಠ್ಯಗಳಲ್ಲಿ ಅಳವಡಿಕೆಯಾಗಬೇಕು. ಮನಸ್ಸು ಕ್ಷಣ ಕ್ಷಣಕ್ಕೂ ಬದಲಾಗುತ್ತದೆ. ಅವೈಜ್ಞಾನಿಕ ಮಾನಸಿಕ ಸ್ಥಿತಿಯನ್ನು ವೈಜ್ಞಾನಿಕ ಸ್ಥಿತಿಗೆ ತರಲು ಸಹ ಆಧ್ಯಾತ್ಮ ಅವಶ್ಯವಾಗಿದೆ.

ನಂತರ ಆಧ್ಯಾತ್ಮಿಕ ಆರೋಗ್ಯ ದರ್ಶನ ಕುರಿತು ಪ್ರಸೂತಿ ತಜ್ಞ ಡಾ.ಸಂಜೀವ ಕುಲಕರ್ಣಿ ತಿಳಿಸಿದರೆ, ಆಧ್ಯಾತ್ಮಿಕ ಆರೋಗ್ಯದ ಪ್ರಾಚೀನತೆಯ ವೈಜ್ಞಾನಿಕ ನೋಟ ಕುರಿತು ಆಯುರ್ವೇದ ಪ್ರಾಧ್ಯಾಪಕ ಡಾ.ಬಿ.ವಿ. ಕುಮಾರಸ್ವಾಮಿ ಮಾಹಿತಿ ನೀಡಿದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದಜೀ ಮಹಾರಾಜ್, ಖ್ಯಾತ ಸಾಹಿತಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್, ಎಂಎಂಸಿಆರ್‌ಐ ಶಿಕ್ಷಕರ ಸಂಘದ ಅಧ್ಯಕ್ಷೆ ಡಾ.ಸುಧಾ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಗಜಾನನ ಹೆಗಡೆ, ಡಾ.ಶಿಶಿಧರ್, ಡಾ.ಸುಬ್ರತಾ ಹೆಗಡೆ ಮತ್ತಿತರರಿದ್ದರು.

ಅದಾನಿ, ಸಂಭಾಲ್ ಹಿಂಸಾಚಾರ ಗದ್ದಲ; ಸಂಸತ್ತಿನಲ್ಲಿ ಕೋಲಾಹಲ; ಉಭಯ ಸದನ ಕಲಾಪ ಮುಂದೂಡಿಕೆ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಪ್ರಕರಣ, ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಹಿಂಸಾಚಾರ ಮತ್ತಿತರ ವಿಷಯಗಳ ಕುರಿತು ಪ್ರತಿಪಕ್ಷಗಳ ಸದಸ್ಯರ ಪ್ರತಿಭಟನೆಯ ನಡುವೆಯೇ ಸಂಸತ್ತಿನ ಉಭಯ ಸದನಗಳನ್ನು ನಾಳೆ (ಶುಕ್ರವಾರ)ಗೆ ಮುಂದೂಡಲಾಗಿದೆ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಲಾಪವನ್ನು ಆರಂಭದಲ್ಲಿ ಮಧ್ಯಾಹ್ನ 12ರವರೆಗೆ ಸ್ಥಗಿತಗೊಳಿಸಲಾಗಿತ್ತು. ಪ್ರತಿಪಕ್ಷಗಳ ಪ್ರತಿಭಟನೆಗಳು ಮುಂದುವರೆದವು, ಪರಿಣಾಮವಾಗಿ ಉಭಯ ಸದನಗಳನ್ನು ನಾಳೆಗೆ ಮುಂದೂಡಲಾಗಿದೆ.

ಇಂದು ಬೆಳಗ್ಗೆ ಲೋಕಸಭೆ ಕಲಾಪ ಆರಂಭವಾದಾಗ ಇತ್ತೀಚಿನ ಉಪ ಚುನಾವಣೆಯಲ್ಲಿ ಕೇರಳದ ವಯನಾಡಿನಿಂದ ಆಯ್ಕೆಯಾದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಮಹಾರಾಷ್ಟ್ರದ ನಾಂದೇಡ್‌ನಿಂದ ಚುನಾಯಿತರಾದ ರವೀಂದ್ರ ವಸಂತರಾವ್ ಚವಾಣ್ ಅವರು ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇಬ್ಬರು ಹೊಸ ಸದಸ್ಯರ ಪ್ರಮಾಣ ವಚನ ಸ್ವೀಕಾರದ ನಂತರ, ಅದಾನಿ ಗ್ರೂಪ್ ವಿರುದ್ಧದ ಆರೋಪಗಳು ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲು ಕಾಂಗ್ರೆಸ್ ಸೇರಿದಂತೆ ಹಲವು ಪ್ರತಿಪಕ್ಷಗಳ ಸದಸ್ಯರು ಪ್ರಸ್ತಾಪಿಸಿದರು. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಕೆಲವು ಸದಸ್ಯರು ಬಾವಿಗಿಳಿದು ಪ್ರತಿಭಟನೆ ಮಾಡಿದರೆ ಇತರ ವಿರೋಧ ಪಕ್ಷದ ಸದಸ್ಯರು ಹಜಾರದಲ್ಲಿ ನಿಂತು ಘೋಷಣೆಗಳನ್ನು ಕೂಗಿದರು. ಸ್ಪೀಕರ್ ಓಂ ಬಿರ್ಲಾ ಅವರು ಪ್ರಶ್ನೋತ್ತರ ಅವಧಿಗೆ ಅವಕಾಶ ನೀಡುವಂತೆ ವಿರೋಧ ಪಕ್ಷದ ಸದಸ್ಯರನ್ನು ಕೇಳಿದರು. ಜನರ ನಿಜವಾದ ಸಮಸ್ಯೆಯನ್ನು ಎತ್ತಲು ಜನರು ಸಂಸದರನ್ನು ತಮ್ಮ ಪ್ರತಿನಿಧಿಗಳಾಗಿ ಆಯ್ಕೆ ಮಾಡಿ ಕಳುಹಿಸುತ್ತಾರೆ. ಆದರೆ ಅವರು ಸದನದ ಕಲಾಪಗಳಿಗೆ ಅಡ್ಡಿಪಡಿಸುತ್ತಿದ್ದಾರೆ. ಅದು ಒಳ್ಳೆಯದಲ್ಲ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು.



ಸಂವಿಧಾನ ರಚನಾ ಸಭೆಯಲ್ಲೂ ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಗೌರವಯುತವಾಗಿ ಬೆಳೆಸಲಾಗಿದೆ ಎಂದರು. ಗದ್ದಲದ ನಡುವೆ, ಒಂದು ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲಾಯಿತು. ಪ್ರತಿಭಟನೆ ಮುಂದುವರಿದ ಕಾರಣ ಸ್ಪೀಕರ್ ಸದನವನ್ನು ಮಧ್ಯಾಹ್ನ 12 ಗಂಟೆಗೆ ಮುಂದೂಡಿದರು. ರಾಜ್ಯಸಭೆ ಮೇಲ್ಮನೆಯಲ್ಲಿ ಬೆಳಗಿನ ಅಧಿವೇಶನದಲ್ಲಿ ಪಟ್ಟಿ ಮಾಡಲಾದ ವಿಷಯಗಳನ್ನು ಪ್ರಸ್ತಾಪಿಸಿದ ನಂತರ ಸಭಾಪತಿ ಜಗದೀಪ್ ಧನಕರ್ ಅವರು ಸದನದ ನಿಯಮ 267 ರ ಅಡಿಯಲ್ಲಿ ನಿಗದಿತ ವ್ಯವಹಾರವನ್ನು ಮುಂದೂಡಲು 16 ಸೂಚನೆಗಳನ್ನು ಸ್ವೀಕರಿಸಿದ್ದಾರೆ ಎಂದು ಹೇಳಿದರು. ಎಲ್ಲಾ ನೋಟಿಸ್‌ಗಳನ್ನು ತಿರಸ್ಕರಿಸುತ್ತಿರುವುದಾಗಿ ಸಭಾಪತಿ ತಿಳಿಸಿದ್ದಾರೆ. ಅದಾನಿ ಗ್ರೂಪ್ ವಿರುದ್ಧದ ಭ್ರಷ್ಟಾಚಾರದ ಆರೋಪಗಳು, ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ನಡೆದ ಕೋಮು ಹಿಂಸಾಚಾರ ಮತ್ತು ಮಣಿಪುರದಲ್ಲಿ ಜನಾಂಗೀಯ ಘರ್ಷಣೆಗಳ ಕುರಿತು ಚರ್ಚೆಗಾಗಿ ವಿರೋಧ ಪಕ್ಷದ ಸದಸ್ಯರು ನೋಟೀಸ್ ನೀಡಿದರು. ಅದಾನಿ ವಿಚಾರದಲ್ಲಿ ಚರ್ಚೆಗೆ ನೋಟಿಸ್ ನೀಡಿದ್ದ ಕಾಂಗ್ರೆಸ್‌ನ ಪ್ರಮೋದ್ ತಿವಾರಿ ಅವರು ತಮ್ಮ ನೋಟಿಸ್ ತಿರಸ್ಕಾರದ ಬಗ್ಗೆಯೂ 'ಪಾಯಿಂಟ್ ಆಫ್ ಆರ್ಡರ್' ಎತ್ತಿದ್ದರು. ಪ್ರತಿಪಕ್ಷದ ಹಲವು ಸದಸ್ಯರು ತೀವ್ರ ಗದ್ದಲ, ಕೋಲಾಹಲ ನಡೆಸಿದ್ದರಿಂದ ಸಭಾಪತಿ ಸದನದ ಕಲಾಪವನ್ನು ಮಧ್ಯಾಹ್ನ 12 ಗಂಟೆಗೆ ಮುಂದೂಡಿದರು.

ಸಮಾಜದಲ್ಲಿ ಜಾತಿ, ಧರ್ಮದ ಹೆಸರಲ್ಲಿ ಅತೀ ಹೆಚ್ಚು ಘರ್ಷಣೆ

ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ.ಜಯಪ್ರಕಾಶ್ ಗೌಡ ಅಭಿಮತ

ಮೈಸೂರು, ನ.28– ಸಮಾಜದಲ್ಲಿ ವ್ಯವಹಾರಿಕತೆ, ಅಸಹನೀಯ ಪ್ರವೃತ್ತಿ ಹೆಚ್ಚುತ್ತಿದೆ. ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸಂಘರ್ಷಗಳು ನಡೆಯುತ್ತಿವೆ. ಇಂತಹ ಹೊತ್ತಿನಲ್ಲಿ ಜೀವನ ಪ್ರೀತಿಯ ಅಗತ್ಯವಿದೆ. ಬುದ್ಧ ಮತ್ತು ಗಾಂಧಿಯವರ ಜೀವನ ಪ್ರೀತಿಯನ್ನು ನಾವು ಅಳವಡಿಸಿಕೊಳ್ಳಬೇಕಿದೆ ಎಂದು ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶ್ ಗೌಡ ಕರೆ ನೀಡಿದರು.

ಶ್ರೀ ನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ನಟರಾಜ ಸಭಾಭವನದಲ್ಲಿ ನಡೆದ ವಿಚಾರ ಸಂಕಿರಣ ಮತ್ತು ಸಂವಾದ ಸಮಾರಂಭದ ಸಮಾರೋಪದಲ್ಲಿ ಸಾಹಿತಿ ಸಾತನೂರು ದೇವರಾಜ್ ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಇಂದು ಸಾಹಿತ್ಯ ಕ್ಷೇತ್ರವೂ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಸುಳ್ಳುಗಾರರು, ಅವಕಾಶವಾದಿಗಳು, ಭಂಡಗಾರರು ತುಂಬಿದ್ದಾರೆ. ಆದ್ದರಿಂದ, ರಾಜಕೀಯವೂ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಯೋಗ್ಯರನ್ನು ಆರಿಸಬೇಕು, ಬೆಂಬಲಿಸಬೇಕು. ಈ ಪ್ರಜ್ಞೆ ಜನರಲ್ಲಿ ಸದಾ ಇರಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ಸತ್ಯ, ನ್ಯಾಯ, ಸಮತೆ ಉಳಿಯುವುದಿಲ್ಲ ಎಂದು ಎಚ್ಚರಿಸಿದರು.

ಹಲವರು ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಇಂಥವರ ನಡುವೆ ಕೆಲವು ಸಂಭಾವಿತರು ತಮ್ಮಷ್ಟಕ್ಕೆ ತಾವು ಅಮೂಲ್ಯ ಸೇವೆ ಸಲ್ಲಿಸುತ್ತ, ಅಗಾಧ ಸಾಧನೆ ಮಾಡಿರುತ್ತಾರೆ. ಯಾವತ್ತಿಗೂ ಪ್ರಶಸ್ತಿ ಹಿಂದೆ ಬೀಳುವುದಿಲ್ಲ. ಅಂತಹ ಅಪರೂಪದ ಸಾಹಿತ್ಯ ಸಾಧಕ ಸಾತನೂರು ದೇವರಾಜ್. ಇವರ ಕೊಡುಗೆ ವಿಜ್ಞಾನ ಸಾಹಿತ್ಯಕ್ಕೆ ಅಮೂಲ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಮೈಸೂರಿನ ಶ್ರೀ ನಟರಾಜ ಸಭಾಭವನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ವಿಜ್ಞಾನ ಲೇಖಕ ಸಾತನೂರು ದೇವರಾಜ್ ದಂಪತಿಗಳನ್ನು ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ.ಜಯಪ್ರಕಾಶ್ ಗೌಡ ಅಭಿನಂದಿಸಿದರು. ಟಿ.ಸತೀಶ್ ಜವರೇಗೌಡ, ಪ್ರೊ. ಕೆ.ಟಿ.ವೀರಪ್ಪ, ಡಾ. ಎಸ್.ಶಿವರಾಜಪ್ಪ, ಎಂ.ಚಂದ್ರಶೇಖರ, ಡಾ. ಡಿ.ಕೆ.ಉಷಾ, ಮಡ್ಡೀಕೆರೆ ಗೋಪಾಲ್, ಡಾ. ಮಹೇಶ್ ದಳಪತಿ ಉಪಸ್ಥಿತರಿದ್ದರು.

ಸಾಹಿತ್ಯಕ್ಕೂ ವಿಜ್ಞಾನಕ್ಕೂ ಅಪಾರ ನಂಟಿದೆ. ವಿಜ್ಞಾನ ಪ್ರಕೃತಿ ರಹಸ್ಯ ಭೇದಿಸಿದರೆ, ಸಾಹಿತ್ಯ ಮನುಷ್ಯನ ಅಂತಃರಂಗವನ್ನು ಭೇದಿಸುತ್ತದೆ. ಈ ಪ್ರಕ್ರಿಯೆ ಎಂದಿಗೂ ನಿಲ್ಲುವುದಿಲ್ಲ ಎಂದರು. ವಿಜ್ಞಾನ ಕ್ಷೇತ್ರ ತುಂಬ ಮುಂದುವರಿದಿದೆ. ವಿಜ್ಞಾನ ನಿರಂತರ ತಿಳಿವಳಿಕೆ ಕೊಡುತ್ತದೆ. ಜೀವನದ ಹೊಸ ಹೊಸ ಸವಾಲುಗಳನ್ನು ಎದುರಿಸುವಂತೆ ಮಾಡುತ್ತದೆ. ಕೊರತೆಗಳನ್ನು ನೀಗಿಸುತ್ತದೆ. ಇದನ್ನು ಜನರು ಅರ್ಥಮಾಡಿಕೊಂಡಿಲ್ಲ ಎಂದು ವಿಷಾದಿಸಿದರು.

ಕನ್ನಡದಲ್ಲಿ ವಿಜ್ಞಾನದ ವಿಚಾರಗಳನ್ನು ಸರಳವಾಗಿ ಬರೆಯುವ ಕೆಲಸ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಜಿ.ಟಿ.ನಾರಾಯಣರಾವ್ ಅವರ ಕೊಡುಗೆ ಅಪಾರ. ಅವರ ಹಾದಿಯಲ್ಲಿ ಸಾಗುತ್ತಿರುವ ಸಾತನೂರು ದೇವರಾಜ್ ಅವರು ಸರಳವಾದ ಭಾವ ಮತ್ತು ಭಾಷೆಯಲ್ಲಿ ಆಕರ್ಷಕವಾಗಿ ವಿಜ್ಞಾನ ಸಾಹಿತ್ಯ ಬರೆಯುತ್ತಿರುವುದು ಅಭಿನಂದಾರ್ಹ ಕಾರ್ಯ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಲೇಖಕ ಸಾತನೂರು ದೇವರಾಜ್, ಸಾಹಿತ್ಯ ರಚನೆಗೆ ಹೊರಗಿನ ಒತ್ತಡಗಳು ಮತ್ತು ಒಳಗಿನ ಪ್ರೇರಣೆ ಎರಡೂ ಬೇಕು. ಹಾಗೆಯೇ ನನ್ನ ಬದುಕಿನಲ್ಲೂ ಒತ್ತಡ ಮತ್ತು ಪ್ರೇರಣೆ – ಈ ಎರಡೂ ಸಿಕ್ಕ ಕಾರಣ ನಾನು ಲೇಖಕನಾಗಲು ಸಾಧ್ಯವಾಯಿತು ಎಂದು ಸ್ಮರಿಸಿದರು.

ಕನ್ನಡದಲ್ಲಿ ಸಾಮಾನ್ಯ ವಿಜ್ಞಾನ ಸಾಹಿತ್ಯದ ಕೃತಿಗಳ ಲಭ್ಯತೆ ಕಡಿಮೆ ಇದೆ. ಇರುವವು ಕೂಡ ಸ್ವಲ್ಪ ಸಂಕೀರ್ಣವಾಗಿವೆ. ಇದನ್ನು ಮನಗಂಡು ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವಿಜ್ಞಾನದ ಅರಿವನ್ನು ಮೂಡಿಸಲು 'ವಿಜ್ಞಾನ ಸಾಹಿತ್ಯ' ಕೃಷಿ ಮಾಡುತ್ತಿರುವೆ. ಇಂದಿನ ಸಮಾಜಕ್ಕೆ ಜೈವಿಕ ವಿಜ್ಞಾನ ಕುರಿತಾದ ಪುಸ್ತಕಗಳು ಹೆಚ್ಚು ಬರುವ ಅಗತ್ಯವಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್. ಶಿವರಾಜಪ್ಪ ವಹಿಸಿದ್ದರು. ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಸಮಾರೋಪ ನುಡಿಗಳನ್ನಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವಿಶ್ರಾಂತ ನಿರ್ದೇಶಕ ಪ್ರೊ. ಕೆ.ಟಿ.ವೀರಪ್ಪ ಅಭಿನಂದನ ಭಾಷಣ ಮಾಡಿದರು.

ವೇದಿಕೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ. ಡಿ.ಕೆ.ಉಷಾ, ವಾತ್ಸಲ್ಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್ ದಳಪತಿ ಉಪಸ್ಥಿತರಿದ್ದರು.

ಡಿ.1ರಂದು ಅಶ್ವಿನಿ ಸ್ವರೂಪ್ ಭರತನಾಟ್ಯ ರಂಗಪ್ರವೇಶ

ಮೈಸೂರು,ನ.28(ಪಿಎಂ)– ನಗರದ ಉದಯೋನ್ಮುಖ ಭರತನಾಟ್ಯ ಕಲಾವಿದೆ ವಿದುಷಿ ಅಶ್ವಿನಿ ಸ್ವರೂಪ್ ಡಿ.1ರಂದು ಭರತನಾಟ್ಯ ರಂಗಪ್ರವೇಶ ಮಾಡಲಿದ್ದಾರೆ. ಬೆಂಗಳೂರಿನ ಬಸವೇಶ್ವರನಗರದ ಕೆಇಎ ಪ್ರಭಾತ್ ರಂಗಮಂದಿರದಲ್ಲಿ ಅಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಅವರು ರಂಗಪ್ರವೇಶ ಮಾಡಲಿದ್ದಾರೆ.

ಕಾರ್ಯಕ್ರಮಕ್ಕೆ ಹಿರಿಯ ನೃತ್ಯ ಶಿಕ್ಷಕಿ ಶ್ರೀಲತಾ, ಸಂಗೀತ ಶಿಕ್ಷಕ ಪ್ರೀತಂ ಗಂಧರ್ವ, ವಿದುಷಿ ಲತಾ ಲಕ್ಷ್ಮೀಶ ಅವರು ಸಾಕ್ಷಿಯಾಗಲಿದ್ದಾರೆ. ಮೈಸೂರಿನ ಉದ್ಯಮಿ ಸ್ವರೂಪ್ ಅವರ ಪತ್ನಿಯಾದ ಅಶ್ವಿನಿ ಅವರು ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಪ್ರವೃತ್ತಿಯಲ್ಲಿ ನೃತ್ಯ ಕಲಾವಿದೆ ಆಗಿರುವುದು ವಿಶೇಷ.

ದೆಹಲಿ, ಮೈಸೂರು, ಪಾಂಡಿಚೇರಿ, ತಿರುಪತಿ ಸೇರಿದಂತೆ ದೇಶದ ವಿವಿಧ ಪ್ರತಿಷ್ಠಿತ ವೇದಿಕೆಗಳಲ್ಲಿ ಈಗಾಗಲೇ ಭರತನಾಟ್ಯ ಕಾರ್ಯಕ್ರಮ ಮತ್ತು ಪ್ರಾತ್ಯಕ್ಷಿಕೆಗಳನ್ನು ಅಶ್ವಿನಿ ನೀಡಿದ್ದಾರೆ. ವಿದುಷಿ ಲತಾ ಅವರಲ್ಲಿ ಕಳೆದ 15 ವರ್ಷಗಳಿಂದ ನೃತ್ಯಾಭ್ಯಾಸ ಮಾಡಿ ಇತ್ತೀಚೆಗೆ ವಿದ್ವತ್ ಪರೀಕ್ಷೆಯನ್ನು ಅತ್ಯುತ್ತಮ ಅಂಕಗಳೊಂದಿಗೆ ಪೂರ್ಣಗೊಳಿಸಿ ಗಮನಾರ್ಹ ಸಾಧನೆಗೈದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


ಅಶ್ವಿನಿ ಸ್ವರೂಪ್ ನೃತ್ಯ ಭಂಗಿ

ನಕ್ಕರೆ ಅದೇ ಸ್ವರ್ಗ

ಶಿಕ್ಷಕರು : (ಪರೀಕ್ಷೆ ಹಾಲ್‌ನಲ್ಲಿ ಗಂಭೀರವಾಗಿ ಕುಳಿತ ವಿದ್ಯಾರ್ಥಿಗಳನ್ನು ಕುರಿತು ಯಾವುದಾದರೂ ಪ್ರಶ್ನೆಗಳು ಕಠಿಣವಾಗಿವೆಯೇ?

ವಿದ್ಯಾರ್ಥಿಗಳು : "ಖಂಡಿತಾ ಇಲ್ಲ. ಎಲ್ಲಾ ಪ್ರಶ್ನೆಗಳು ತೀರಾ ಸರಳವಾಗಿವೆ. ಆದರೆ ಉತ್ತರಗಳು ಮಾತ್ರ ಕಠಿಣ ಸಾರ್!".

ಮೈಸೂರು ಮಿತ್ರ

ಶುಕ್ರವಾರ, 29 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ಕೆಲಸಗಳನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ. –ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ಅವೈಜ್ಞಾನಿಕ ರಸ್ತೆ ವಿಭಜಕಗಳಿಂದಲೇ ಅಪಘಾತಗಳು

ಮಾನ್ಯರೆ,

ಬೆಳಗಾವಿಯಿಂದ ಮಕ್ಕಳ ಪ್ರವಾಸಕ್ಕೆ ಕರೆ ತಂದಿದ್ದ ಸಾರಿಗೆ ಬಸ್ ಫೌಂಟೇನ್ ಸರ್ಕಲ್ ಬಳಿ ರೋಡ್ ಡಿವೈಡರ್‌ಗೆ ಡಿಕ್ಕಿ ಹೊಡೆದು ಉರುಳಿ ಬಿದ್ದು ಹಲವು ಮಕ್ಕಳಿಗೆ ಗಾಯಗೊಂಡಿದ್ದಾರೆ. (ಮೈಮಿ. 27.11.2024). ಇದಕ್ಕೆ ಕಾರಣ ಅವೈಜ್ಞಾನಿಕ ರಸ್ತೆ ವಿಭಜಕಗಳು, ರಸ್ತೆ ವಿಭಜಕಗಳ ಪ್ರಾರಂಭದಲ್ಲಿ ಸರಿಯಾದ ರಿಫ್ಲೆಕ್ಟರ್ ಅಳವಡಿಸದಿರುವುದು. ಇಂತಹ ರಸ್ತೆ ವಿಭಜಕಗಳ ಬಗ್ಗೆ ಮತ್ತು ಅದಕ್ಕೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ದಿನಾಂಕ 04.09.2024ರ 'ಮೈಸೂರು ಮಿತ್ರ'ದಲ್ಲಿ ಪ್ರಕಟಪಡಿಸಿದ 'ರೆಫ್ಲೆಕ್ಟರ್, ಫ್ಲೆಕ್ಸಿಬಲ್ ರಿಫ್ಲೆಕ್ಟರ್ ಅಳವಡಿಸಿ' ಶೀರ್ಷಿಕೆಯ ನನ್ನ ಪತ್ರದಲ್ಲಿ ತಿಳಿಸಿದ್ದೆ.

ಸ್ಥಳೀಯ ವಾಹನ ಸವಾರರಿಗೆ ಸಾಮಾನ್ಯ ಎಲ್ಲಿ ರಸ್ತೆ ವಿಭಜಕಗಳಿವೆ ಎಂಬ ಬಗ್ಗೆ ಅರಿವಿರುತ್ತದೆ. ಆದರೆ ಪ್ರವಾಸಿಗರಿಗೆ ಅದರ ಅರಿವಿರುವುದಿಲ್ಲವಾದ್ದರಿಂದ ರಾತ್ರಿ ಸಮಯ ಎದುರು ಬರುವ ವಾಹನದ ಪ್ರಖರ ಬೆಳಕಿನಲ್ಲಿ ಅದು ಕಾಣುವುದಿಲ್ಲ. ಆಗ ಇಂತಹ ಘಟನೆಗಳು ಸಂಭವಿಸಬಹುದು ಎಂಬುದು ಮೇಲ್ನೋಟಕ್ಕೆ ತಿಳಿಯಬಹುದಾಗಿದ್ದರೂ ಏಕೆ ಕ್ರಮ ವಹಿಸುವುದಿಲ್ಲ ಎಂಬುದು ಆಶ್ಚರ್ಯಕರ. ಅದೃಷ್ಟವಶಾತ್ ಈ ಅಪಘಾತದಲ್ಲಿ ಹೆಚ್ಚಿನ ಅನಾಹುತ ಸಂಭವಿಸಿಲ್ಲ. ಭಾರಿ ಅನಾಹುತವಾಗಿದ್ದರೆ ಯಾರು ಜವಾಬ್ದಾರಿ. ಸಂಬಂಧಪಟ್ಟವರು ಚಾಲಕನ ತಪ್ಪಿಲ್ಲದಿದ್ದರೂ ಚಾಲಕನ ಮೇಲೆ ಜವಾಬ್ದಾರಿ ಹೊರಿಸಿ ಒಂದಷ್ಟು ಪರಿಹಾರ ನೀಡಿ ಕೈ ತೊಳೆದುಕೊಂಡು ಬಿಟ್ಟರೆ ಮುಗಿಯಿತು. ನನ್ನ ಪತ್ರದಲ್ಲಿ ಈ ಬಗ್ಗೆ ಕೋರಿದ್ದ ಯಥಾವತ್ ಭಾಗ ಈ ಕೆಳಗಿನಂತಿದೆ. ಈಗಲಾದರೂ ಕ್ರಮ ಕೈಗೊಳ್ಳಲು ಕೋರುತ್ತೇನೆ.

ಹಲವಾರು ರಸ್ತೆ ವಿಭಜಕಗಳು ಆರಂಭವಾಗುವ ಕಡೆ ಅನೇಕ ಅಪಘಾತಗಳು ಆಗಿರುವುದನ್ನು ಆ ವಿಭಜಕಗಳ ಮುಕ್ಕಾದ ಆರಂಭಿಕ ಭಾಗಗಳನ್ನು ಗಮನಿಸಿದಾಗ ಗೊತ್ತಾಗುತ್ತದೆ. ಇದರಲ್ಲಿ ಎಷ್ಟು ಜನಕ್ಕೆ ಗಂಭೀರ ಪೆಟ್ಟಾಗಿರುತ್ತದೋ, ಪ್ರಾಣಾಪಾಯವಾಗಿರುತ್ತದೋ ಎಂಬ ಆತಂಕ ಒಮ್ಮೆ ಮನಸಿನಲ್ಲಿ ಸುಳಿಯದಿರದು. ಇತ್ತೀಚೆಗಂತೂ ವಿಭಜಕಗಳು ಹೇಗಿರುತ್ತವೆಂದರೆ ಅದಕ್ಕೆ ಅಪ್ಪಳಿಸಿದ ವಾಹನಕ್ಕೆ ಹಾಗೂ ಸವಾರರಿಗೆ ಏನೂ ಬೇಕಾದರೂ ಆಗಲಿ ವಿಭಜಕಕ್ಕೆ ಏನೂ ಆಗಬಾರದು ಅನ್ನುವಷ್ಟು ಗಟ್ಟಿಮುಟ್ಟಾಗಿ ಹಾಗೂ ಯಾವುದೇ ಸೂಚನಾ ಫಲಕವನ್ನು ಹಾಕದೆ ಕಟ್ಟಿರುತ್ತಾರೆ. ರಾತ್ರಿ ಸಮಯವಂತೂ ಎದುರುಗಡೆಯಿಂದ ಬರುವ ವಾಹನದ ಬೆಳಕಿನಲ್ಲಿ ಆ ವಿಭಜಕ ಕಾಣುವುದೇ ಇಲ್ಲ. ಇದಕ್ಕೆ ಉದಾಹರಣೆಯಾಗಿ ಪಾಲಿಕೆಯ ಮುಂಭಾಗದಲ್ಲಿ ಇರುವ ಮುಕ್ಕಾದ ವಿಭಜಕವನ್ನೇ ಗಮನಿಸಬಹುದು. ಆದುದರಿಂದ ವಿಭಜಕ ಆರಂಭವಾಗುವ ಮುನ್ನ ಪ್ರಖರವಾದ ರಿಫ್ಲೆಕ್ಟರ್‌ಗಳನ್ನು ಹಾಗೂ ಫ್ಲೆಕ್ಸಿಬಲ್ ರಿಫ್ಲೆಕ್ಟರ್ ಪೈಪುಗಳನ್ನು ಹಾಕುವುದಲ್ಲದೇ ಅವುಗಳನ್ನು ಪ್ರತಿ ಮಾಹೆಗೆ ಒಂದು ದಿನವಾದರೂ ಪರಿಶೀಲಿಸಿ ನಿರ್ವಹಣೆ ಮಾಡಿದಲ್ಲಿ ಸಾಕಷ್ಟು ಅಪಘಾತಗಳು ಹಾಗೂ ಜೀವಹಾನಿಯನ್ನು ತಡೆಗಟ್ಟಬಹುದು. ಪತ್ರ ಪ್ರಕಟಗೊಂಡು ಮೂರು ತಿಂಗಳಾಗುತ್ತಾ ಬಂದರೂ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿದೆ. ಕ್ರಮ ಕೈಗೊಂಡಿದ್ದರೆ ಬಹುಶಃ ಈ ಅಪಘಾತವನ್ನು ತಡೆಯಬಹುದಾಗಿತ್ತು. ಮಕ್ಕಳ ಆಕ್ರಂದನವನ್ನು ತಪ್ಪಿಸಬಹುದಿತ್ತು. ಈ ಮಕ್ಕಳ ನೋವು ಸಂಬಂಧಿಸಿದವರಿಗೆ ತಟ್ಟದಿರದು. **–ಕೆ.ಎಂ.ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.**

ನಿರ್ಗತಿಕರು, ವೃದ್ಧರಿಗೆ ಇಂತಹ ವೇಳೆ ನೆರವಾಗುವುದು ಅವಶ್ಯ

ಮಾನ್ಯರೆ,



ಎಲ್ಲೆಡೆಯೂ ಶುರುವಾಗಿದೆ ಕೊರೆವ ಚಳಿ. ಇದರಿಂದ ತಪ್ಪಿಸಿಕೊಳ್ಳಲು ಹಲವಾರು ಜನ ಬೆಳಗಿನ ವೇಳೆ ಕೈಗವಸು, ಕಾಲುಚೀಲ, ಟೋಪಿ, ಮಫ್ಲರ್, ಸ್ವೆಟರ್ ರಾತ್ರಿಯಲ್ಲಿ ಶುಚಿ–ರುಚಿಯಾದ ಬಿಸಿಬಿಸಿ ಆಹಾರ ಸೇವಿಸಿ, ಉತ್ತಮ ಹೊದಿಕೆ ಬಳಸಿ ಬೆಚ್ಚನೆಯ ಅನುಭವ ಪಡೆಯುತ್ತಾರೆ. ಆದರೆ, ಇರಲು ನೆಲೆಯಿಲ್ಲದೆ ದೇವಸ್ಥಾನ, ಬಸ್ ಸ್ಟ್ಯಾಂಡ್, ರಸ್ತೆಬದಿ, ಅಂಗಡಿ ಮುಂಗಟ್ಟು, ಹೀಗೆ, ಎಲ್ಲೆಂದರಲ್ಲಿ ಆಶ್ರಯ ಪಡೆಯುವ ಅಶಕ್ತರು, ನಿರ್ಗತಿಕರು, ವಯೋವೃದ್ಧರು ಮಹಿಳೆಯರು, ಮಕ್ಕಳು ಇವರುಗಳ ಪಾಡೇನು?! ದಯಮಾಡಿ, ಜಿಲ್ಲಾಡಳಿತ ಇಂತಹವರನ್ನು ಗುರುತಿಸಿ ಇವರಿಗೆಲ್ಲ ಕನಿಷ್ಠಪಕ್ಷ ಒಂದು ಉತ್ತಮ ಗುಣಮಟ್ಟದ ಹೊದಿಕೆ ಮತ್ತು ಬಿಸಿಯಾದ ಆಹಾರ ನೀಡಿ ಕೊರೆವ ಚಳಿಯಿಂದ ಮುಕ್ತಿ ನೀಡಬೇಕಿದೆ. ಇದಕ್ಕೆ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಾದ ನಾವೂ ಸಹ ಕೈ ಜೋಡಿಸಬೇಕೆಂದು ಮನವಿ. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ಸುದ್ದಿವಾಹಿನಿಗಳ ಬೇಜವಾಬ್ದಾರಿ!

ಮಾನ್ಯರೆ,

ಗರ್ಭಿಣಿಯಾದ ತನ್ನ ಧರ್ಮಪತ್ನಿ, ಇಬ್ಬರು ಮಕ್ಕಳು ಹಾಗೂ ಜನ್ಮ ನೀಡಿದ ತನ್ನ ತಾಯಿಯನ್ನೇ ಕೊಂದ ಆರೋಪಿಗೆ ಮೈಸೂರಿನ ಜಿಲ್ಲಾ ನ್ಯಾಯಾಲಯವು ಮರಣದಂಡನೆ ವಿಧಿಸಿ ತೀರ್ಪು ನೀಡಿತು.ಈ ಮಾಹಿತಿಯು ವಾರ್ತಾ ಇಲಾಖೆ ಮೂಲಕ ಎಲ್ಲಾ ಮಾಧ್ಯಮಗಳಿಗೂ ಲಭಿಸಿತು. ಕೆಲವು ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಯಿತು. ಆದರೆ ನಮ್ಮ ಸುದ್ದಿವಾಹಿನಿಗಳಿಗೆ ಇದೊಂದು 'ಸುದ್ದಿ' ಎಂಬ ಅರಿವಾಗಲೇ ಇಲ್ಲ. ಯಾವ ಸುದ್ದಿವಾಹಿನಿಯಲ್ಲೂ ಈ ಸುದ್ದಿ ಪ್ರಸಾರವಾಗಲೇ ಇಲ್ಲ. ಜೈಲಲ್ಲಿರುವ ಗಣ್ಯರ ಭೇಟಿಯಾಗಲು ಯಾರು, ಯಾವಾಗ ಬಂದರು!?

ಅವರು ಯಾವ ತಿಂಡಿ ತಂದರು? ಆ ವೇಳೆ ಕಣ್ಣೀರಿಟ್ಟರು ಎಂಬ ವಿಚಾರಗಳನ್ನು ನೋಡದೇ ಇದ್ದರೂ, ನೋಡಲು ಅವಕಾಶವೂ ಇಲ್ಲದಿದ್ದರೂ ಕಣ್ಣಿಗೆ ಕಟ್ಟಿದಂತೆ ವರದಿ ಮಾಡುತ್ತಾರೆ. ಏನಿದು ಪವಾಡ! ಇದೆಲ್ಲಾ ಸ್ಫೋಟಕ ಸುದ್ದಿ ಎಂದು ಬಿಂಬಿಸಿ ಉಡಾಯಿಸುವ ಸುದ್ದಿವಾಹಿನಿಗಳಿಗೆ ಮರಣದಂಡನೆ ನೀಡಿದಂತಹ ನಿಜವಾದ ಸ್ಫೋಟಕ ಸುದ್ದಿಯನ್ನು ಪ್ರಸಾರ ಮಾಡಬೇಕೆಂಬ ಕನಿಷ್ಠ ಜವಾಬ್ದಾರಿ ಇಲ್ಲದೇ ಹೋದುದು ದುರದೃಷ್ಟಕರ ಸುದ್ದಿ!

ಕೊಲೆ, ಹತ್ಯೆಯಂತಹ ಗಂಭೀರ ಘಟನೆ ನಡೆದಾಗ ಅದನ್ನು ಝೂಮ್ ಮಾಡಿ ಪದೇ ಪದೆ ತೂರಿಸುವ ಮಾಧ್ಯಮಗಳು ಅದೇ ಅಪರಾಧಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದಾಗ ಕಂಡೂ ಕಾಣದಂತೆ ತೆಪ್ಪಗಿರುವುದೇಕೆ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಶಿಕ್ಷಣ ಕುರಿತು ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು

ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಎಲ್ಲ ಕಾಲಕ್ಕೂ ಅನ್ವಯವಾಗುತ್ತವೆ. ಸಮನ್ವಯವಾಗಿ ನೆಲೆ ನಿಲ್ಲುವಂತಹವು ಹಾಗೂ ಅನುಗಾಲವೂ ಸಲ್ಲುವಂತವುಗಳು. ಅದರಲ್ಲೂ ಮುಖ್ಯವಾಗಿ ಶಿಕ್ಷಣದ ಬಗೆಗೆ ಸ್ವಾಮೀಜಿ ಅವರು ಕೊಟ್ಟ ವ್ಯಾಖ್ಯಾನಗಳು ಪ್ರಸ್ತುತ ಸಮಾಜಕ್ಕೆ ಬೇಕಾಗುವಂತದ್ದು.

ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು–ವಿವೇಕಾನಂದರು ಹೇಳುವಂತೆ ಈಗಾಗಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಹೊರ ಜಗತ್ತಿಗೆ ಪ್ರಕಾಶಪಡಿಸುವುದೇ ನಿಜವಾದ ಶಿಕ್ಷಣ. ಉದಾಹರಣೆಯೊಂದನ್ನು ನೀಡುತ್ತಾ;–ಬೀಜ ತಾನಾಗಿಯೇ ಬೆಳೆದು ಗಿಡವಾಗಿ, ಮರವಾಗಿ, ಹೆಮ್ಮರವಾಗುತ್ತದೆ. ಅದು ಬೆಳೆಯುವುದಕ್ಕೆ ನಾವೊಂದು ಅವಕಾಶ ಕಲ್ಪಿಸಿ ಕೊಡುತ್ತೇವೆ ಅಷ್ಟೇ. ಗಿಡವಾಗುವ, ಮರವಾಗುವ, ಹೆಮ್ಮರವಾಗಿ ಬೆಳೆಯುವ ಸಾಮರ್ಥ್ಯ ಆ ಬೀಜಕ್ಕೆ ಇರುತ್ತದೆ. ಹೀಗೆ ಕಲಿಕಾರ್ಥಿಯಲ್ಲಿ ಅಡಗಿರುವ ಸಾಮರ್ಥ್ಯವನ್ನು ಗಮನಿಸಿ ಅದಕ್ಕೆ ತಕ್ಕ ಪ್ರೋತ್ಸಾಹವನ್ನು ನೀಡಿದರೆ ಖಂಡಿತವಾಗಿಯೂ ಯಾರೇ ಆದರೂ ಸಾಧನೆ ಮಾಡಬಲ್ಲರು. ಇದನ್ನು ಹೇಳುವಾಗ ನನಗೆ ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಗಣಿತದ ತರಗತಿಯಲ್ಲಿ ಸಮಸ್ಯೆಗಳನ್ನು ಬಿಡಿಸಲು ತಿಣಕಾಡುತ್ತಿದ್ದ ವಿದ್ಯಾರ್ಥಿ ಆಟದ ಮೈದಾನಕ್ಕೆ ಬಂದಾಗ ತನ್ನ ಸಾಮರ್ಥ್ಯವನ್ನು ಮೀರಿ ಆಡುವುದನ್ನು ಗಮನಿಸಿದ ಆ ಶಿಕ್ಷಕರು ಆಟದಲ್ಲಿ ಮುಂದುವರಿಯುವಂತೆ ಪ್ರೋತ್ಸಾಹವನ್ನು ನೀಡಿದರು. ಮುಂದೆ ಆ ವಿದ್ಯಾರ್ಥಿ ಕ್ರಿಕೆಟ್‌ಗೆ ದೇವರು (ಸಚಿನ್) ಎನಿಸಿಕೊಂಡದ್ದು ಇತಿಹಾಸ. ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ತಮ್ಮದೇ ಆದ ಸಾಮರ್ಥ್ಯ ಅಡಕವಾಗಿರುತ್ತದೆ. ಆ ಸಾಮರ್ಥ್ಯವನ್ನು ಗಮನಿಸಿ ಅದಕ್ಕೆ ಪ್ರೋತ್ಸಾಹವನ್ನು ನೀಡಿದಾಗ ಸಾಧಕರು ಹೊರಹೊಮ್ಮುತ್ತಾರೆ. ಸ್ವಾಮಿ ವಿವೇಕಾನಂದರ ವಿಚಾರಧಾರೆಯು ಇದನ್ನೇ ತಿಳಿಸುತ್ತದೆ.

ವ್ಯಕ್ತಿಯ ಸರ್ವತೋಮುಖ ವಿಕಾಸವೇ ಶಿಕ್ಷಣದ ಗುರಿ


ವ್ಯಕ್ತಿಯ ಸರ್ವತೋಮುಖ ವಿಕಾಸಕ್ಕೆ ಶಿಕ್ಷಣ ಪ್ರಮುಖ ಕಾರಣವಾಗಬೇಕು. ಆದರೆ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಕೇವಲ ಅಂಕಪಟ್ಟಿ ನೀಡುವ ಕಾರ್ಖಾನೆಯ ರೂಪದಂತೆ ಆಗಿರುವುದು ವಿಪರ್ಯಾಸ. ವಕೀಲರು, ವೈದ್ಯರು, ಅಭಿಯಂತರರು, ಗುಮಾಸ್ತರನ್ನು ಉತ್ಪಾದಿಸುವುದರಲ್ಲಿಯೇ ಶಿಕ್ಷಣ ನಿರತವಾಗಿದೆ. ಪ್ರಸ್ತುತ ಯುವ ಜನಾಂಗ ಶಿಕ್ಷಣ ಎಂದರೆ ಪದವಿಯನ್ನು ಪಡೆಯುವುದು, ಧನ ಸಂಪಾದನೆ ಮಾಡುವುದನ್ನೇ ಗುರಿಯಾಗಿರಿಸಿಕೊಂಡಿದ್ದಾರೆ ಎಂಬ ಭಾವನೆ ಮೂಡಿಬರುತ್ತಿದೆ.

ಶಿಕ್ಷಣ ಎಂದರೆ ಕೇವಲ ಪದವಿಯನ್ನು ಪಡೆಯುವುದು, ಧನ ಸಂಪಾದನೆ ಮಾಡುವುದು ಇವಿಷ್ಟೇ ಗುರಿಯಾದರೆ ಅಂತಹ ಶಿಕ್ಷಣದಿಂದ ಪಡೆದ ಜ್ಞಾನ ಯಾವುದೇ ಕಾರಣಕ್ಕೂ ಉಪಯೋಗಕ್ಕೆ ಬಾರದು. ವ್ಯಕ್ತಿಯ ಸರ್ವತೋಮುಖ ವಿಕಾಸಕ್ಕೆ ಶಿಕ್ಷಣ ಕಾರಣವಾಗಬೇಕು. ಅಂದರೆ ಸರ್ವತೋಮುಖ ಅಭಿವೃದ್ಧಿಯು ವಿದ್ಯಾರ್ಥಿಯನ್ನು ದೈಹಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಸಾಮಾಜಿಕ ಮುಂತಾದ ಬಹು ಅಂಶಗಳಲ್ಲಿ ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಸೂಚಿಸುವುದು.

ನನಗೆ ಇದನ್ನು ಹೇಳುವಾಗ ಪ್ರಹಸನಗಳ ಪಿತಾಮಹ ಎಂದು ಪ್ರಸಿದ್ಧರಾದ ಟಿ.ಪಿ.ಕೈಲಾಸಂ ಅವರು ವಿರಚಿಸಿದ ಪ್ರಥಮ ನಾಟಕ 'ಟೊಳ್ಳುಗಟ್ಟಿ'ಯ ಪ್ರಸಂಗ ನೆನಪಾಗುತ್ತದೆ. ಈ ಟೊಳ್ಳುಗಟ್ಟಿಯಲ್ಲಿ ಇವತ್ತಿನ ಶಿಕ್ಷಣ ವ್ಯವಸ್ಥೆಯನ್ನು ಹಾಗೂ ನಾಲ್ಕು ಗೋಡೆಯ ಶಿಕ್ಷಣಕ್ಕೂ ಬಯಲು ಆಲಯದ ಶಿಕ್ಷಣಕ್ಕೂ ಇರುವ ವ್ಯತ್ಯಾಸವನ್ನು ಮನಗಾಣಿಸಲಾಗಿದೆ.

ನಾಟಕದ ಪ್ರಸಂಗ: ನಾಟಕದಲ್ಲಿ ಮುಖ್ಯವಾಗಿ ಎರಡು ಪಾತ್ರ ಗಮನ ಸೆಳೆಯುತ್ತವೆ. ಪರೀಕ್ಷೆಯಲ್ಲಿ ನಿರಂತರವಾಗಿ ಒಳ್ಳೆಯ ಅಂಕಗಳನ್ನು ಪಡೆಯುವ ಮಾಧು ಒಂದು ಕಡೆಯಾದರೆ, ಓದಿನಲ್ಲಿ ಯಶಸ್ಸು ಗಳಿಸಲಾರದೇ ಅನುತ್ತೀರ್ಣನಾಗುವ ಪುಟ್ಟು. ನಿರೀಕ್ಷೆಯಂತೆ ತಂದೆ–ತಾಯಿ, ಬಂಧು–ಬಳಗದವರಿಗೆ ಮಾಧು ಹತ್ತಿರವಾಗುತ್ತಾನೆ. ಪುಟ್ಟು ಎಲ್ಲರ ಅವಕೃಪೆಗೆ ಒಳಗಾಗುತ್ತಾನೆ. ನಾಟಕದ ಕೊನೆಯಲ್ಲಿ ಮನೆಗೆ ಬೆಂಕಿ ಬಿದ್ದಾಗ ಮಾಧು ತನ್ನ ಪುಸ್ತಕಗಳನ್ನು ಹೊತ್ತು ಹೊರ ಬಂದರೆ ಪುಟ್ಟು ತನ್ನ ತಂದೆ–ತಾಯಂದಿರನ್ನು ರಕ್ಷಿಸಿ ಹೊರ ತರುತ್ತಾನೆ. ಓದು ಪುಸ್ತಕದ ಬದನೆಕಾಯಿಯಂತಾಗಬಾರದು ಮಾನವೀಯತೆ, ಮನುಷ್ಯತ್ವಗಳನ್ನು ರೂಢಿಸಿಕೊಂಡಂತಿರಬೇಕೆಂಬ ಸಂದೇಶವನ್ನು ಕೈಲಾಸಂ ಅವರು ಸಾರಿದ್ದಾರೆ. ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಎಂಬುದು ವಿದ್ಯಾರ್ಥಿಗಳು ಸುಸಜ್ಜಿತರಾಗಲು ಮತ್ತು ಅವರ ಜೀವನದ ಎಲ್ಲಾ ಅಂಶಗಳಲ್ಲಿಯೂ ಪರಿಣಾಮಕಾರಿಯಾಗಿ ಕಾರ್ಯವನ್ನು ನಿರ್ವಹಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿರುತ್ತದೆ. ಇಂತಹ ಶಿಕ್ಷಣವನ್ನು ನೀಡುವಂತಿರಬೇಕು.

ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು: ಕೆಲಸಕ್ಕಾಗಿ ಅಲೆಯದೆ ತಾನೇ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವಂತಹ ಸಾಮರ್ಥ್ಯ ವ್ಯಕ್ತಿಗೆ ಶಿಕ್ಷಣದಿಂದ ದೊರೆಯಬೇಕು ಎಂಬ ಅಭಿಪ್ರಾಯ ಸ್ವಾಮಿ ವಿವೇಕಾನಂದ ಅವರದು. ವಾಸ್ತವ ಎಂದರೆ ಪ್ರಸ್ತುತ ನಾವು ನೀಡುತ್ತಿರುವ ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿ ಮಾಡದೆ ಪರಾವಲಂಬಿಗಳನ್ನಾಗಿ ಮಾಡುತ್ತಿದೆ ಎಂಬುದು ಕಟುವಾದರೂ ಒಪ್ಪಲೇಬೇಕಾದ ವಾಸ್ತವ ಇದು. ಶಿಕ್ಷಣವನ್ನು ಪಡೆದವರು ಕೆಲಸಕ್ಕಾಗಿ ಅಲೆಯುವುದು, ಕೆಲಸ ಸಿಗದಿದ್ದಾಗ ಪರಿತಪಿಸುವುದು, ಭವಿಷ್ಯವನ್ನು ನೆನೆದು ಕೊರಗುವುದು ಮುಂತಾದ ಅಂಶಗಳನ್ನು ನೋಡಿದಾಗ ನಿಜಕ್ಕೂ ಶಿಕ್ಷಣ ಪಡೆದವರಿಗಿಂತ ಶಿಕ್ಷಣ ಪಡೆಯದವರೇ ಅತ್ಯಂತ ಸಂತೃಪ್ತಿಯಿಂದ ಜೀವನ ಕಟ್ಟಿಕೊಂಡಿರುವುದನ್ನು ಕಾಣಬಹುದು.



ಡಾ.ಗುರುರಾಜ ಕರ್ಜಗಿ ಅವರು ಒಂದು ಕಡೆ ಈ ರೀತಿ ಹೇಳುತ್ತಾರೆ– "ನಿಮ್ಮ ಮನೆಯ ಕೆಲಸಕ್ಕೆ ಬರುವ ಹೆಂಗಸಿಗೆ ನಾಳೆಯಿಂದ ಕೆಲಸಕ್ಕೆ ಬರಬೇಡಿ ಎಂದು ಹೇಳಿದರೆ ಆ ಹೆಂಗಸು ಯಾವುದೇ ಚಿಂತೆಗೆ ಒಳಗಾಗುವುದಿಲ್ಲ ಈ ಮನೆ ಇಲ್ಲದಿದ್ದರೆ ಇನ್ನೂ ನಾಲ್ಕು ಮನೆ ಸಿಗುತ್ತವೆ ಎಂಬ ಆತ್ಮವಿಶ್ವಾಸ ಅವಳಲ್ಲಿ ಇರುತ್ತದೆ. ಆದರೆ ಪದವಿಗಳನ್ನು ಪಡೆದ ನಮ್ಮ ಯುವಕರು ಆಕಸ್ಮಿಕವಾಗಿ ಕೆಲಸವನ್ನು ಕಳೆದುಕೊಂಡರೆ ಅಯ್ಯೋ ಮುಂದಿನ ಜೀವನ ಹೇಗೆ ಎಂದು ಕೈ ಹೊತ್ತು ಕೂರುತ್ತಾರೆ. ಜೀವನವನ್ನು ಕಟ್ಟಿಕೊಳ್ಳುವ ಸಾಮರ್ಥ್ಯ ಇಲ್ಲ ಎಂದಾದರೆ ಅಂತಹ ಶಿಕ್ಷಣವನ್ನು ಏಕೆ ಪಡೆಯಬೇಕು?"

ನಿಜವಾದ ಶಿಕ್ಷಣ ಎಂದರೆ ಅಂಕಗಳನ್ನು ಪಡೆಯುವುದು ಒಳ್ಳೆಯ ಕೆಲಸಕ್ಕೆ ಸೇರುವುದಲ್ಲ, ನಮ್ಮ ಸಾಮರ್ಥ್ಯವನ್ನು ಅರಿತುಕೊಂಡು ನಾವೇ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವಂತಹ ಶಕ್ತಿಯನ್ನು ಶಿಕ್ಷಣ ನೀಡಬೇಕು. ಅಂತಹ ಶಿಕ್ಷಣ ನೀಡಿದಾಗ ನಿಜಕ್ಕೂ ಸಾರ್ಥಕತೆ ಬರುತ್ತದೆ.

ಶಿಕ್ಷಣವು ವಿಚಾರ ಸ್ವಾತಂತ್ರ್ಯವನ್ನು ನೀಡಬೇಕು: ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣ ಎಂದರೆ ವಿಚಾರ ಮಾಡುವ ಸ್ವಾತಂತ್ರ್ಯವನ್ನು ನೀಡುವಂತೆ ಇರಬೇಕು. ತಾನೇ ಸ್ವತಂತ್ರವಾಗಿ ವಿಚಾರ ಮಾಡಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಣಯಿಸುವ ಸಾಮರ್ಥ್ಯ ವ್ಯಕ್ತಿಗೆ ಬರಬೇಕು. ಪರಿಸ್ಥಿತಿಗೆ ತಕ್ಕಂತೆ ಬದುಕುವ ಕಲೆ ಗೊತ್ತಿರಬೇಕು. ಯಾವುದನ್ನು ಮಾಡಬೇಕು. ಯಾವುದನ್ನು ಮಾಡಬಾರದು, ಎಂಬ ತಿಳುವಳಿಕೆ ಇರಬೇಕು. ಯಾವುದೇ ಒಂದು ವಿಚಾರವನ್ನು ತಿಳಿದು ಅದನ್ನು ತರ್ಕಬದ್ಧವಾಗಿ ಆಲೋಚಿಸುವ ಶಕ್ತಿಯನ್ನು, ಸ್ವಾತಂತ್ರ್ಯವನ್ನು ಶಿಕ್ಷಣ ನೀಡಬೇಕು. ಅತ್ಯಧಿಕ ಅಂಕಗಳನ್ನು ಪಡೆದವರು ವೇದಿಕೆಯ ಮೇಲೆ ನಿಂತು ಮಾತನಾಡಿ ಎಂದರೆ ಭಯಪಡುವುದನ್ನು ನೋಡಿದ್ದೇವೆ. ಯಾವುದಾದರೂ ಒಂದು ವಿಷಯವನ್ನು ಕೊಟ್ಟು ಆ ವಿಷಯದ ಕುರಿತು ಮಾತನಾಡಿ ಎಂದರೆ ಗೊಂದಲಕ್ಕೆ ಒಳಗಾಗುವುದನ್ನು ಗಮನಿಸಿದ್ದೇವೆ. ಒಂದು ವಿಷಯದ ಕುರಿತು ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಿಸಲು ಸಾಧ್ಯವಾಗಲಿಲ್ಲ ಎಂದರೆ ಅಂತಹ ಶಿಕ್ಷಣದಿಂದ ಯಾವುದೇ ಉಪಯೋಗವಾಗಲಾರದು.

ಶಿಕ್ಷಣವು ವ್ಯಕ್ತಿಯಲ್ಲಿ ಸೇವಾ ಮನೋಭಾವವನ್ನು ಬೆಳೆಸಬೇಕು: ಯಾರು ಇತರರಿಗಾಗಿ ಬದುಕುವರೋ ಅವರು ಸದಾಕಾಲ ಜೀವಂತವಾಗಿರುತ್ತಾರೆ. ಯಾರು ತಮಗಾಗಿ ಮಾತ್ರ ಬದುಕುವರೋ ಅವರು ಬದುಕಿದ್ದರೂ ಜೀವಂತ ಶವದಂತಿರುತ್ತಾರೆ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಅಂದರೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳದೆ, ಇತರರ ಒಳಿತನ್ನು ಪರಿಗಣಿಸದೆ ತಮ್ಮ ಒಳಿತನ್ನು ಯಾರು ಕೂಡ ಸಾಧಿಸಲಾರರು.

ಮನುಷ್ಯನಾಗಿ ಹುಟ್ಟಿದ ಮೇಲೆ ತಮ್ಮ ಜೀವನಕ್ಕೊಂದು ಸಾರ್ಥಕತೆ ಬರಬೇಕಾದರೆ ನಾವು ಸೇವಾ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕು. ನಮ್ಮ ಕೈಲಾದಷ್ಟು ಸೇವೆಯನ್ನು ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ನೀಡುವಂತಿರಬೇಕು. ಉದಾಹರಣೆಗೆ ಹಸಿದವರಿಗೆ ಒಂದು ತುತ್ತು ಅನ್ನವನ್ನು ನೀಡಿದರೆ ಅವರ ಪಾಲಿಗೆ ನೀವೇ ದೇವರು, ನಿಮ್ಮ ಧರ್ಮವೇ ಶ್ರೇಷ್ಠವಾದ ಧರ್ಮ! ಸಹಾಯವನ್ನು ಬೇಡುವವರಿಗೆ ನಮ್ಮ ಕೈಲಾದ ಸಹಾಯವನ್ನು ಮಾಡುವುದೇ ನಿಜವಾದ ಮನುಷ್ಯತ್ವ, ನಾವು ಮಾಡುವ ಸಣ್ಣ ಸಹಾಯವು ಕೂಡ ವ್ಯಕ್ತಿಯ ಬದುಕಿನಲ್ಲಿ ಪರಿಣಾಮವನ್ನು ಬೀರಬಲ್ಲದು. ಯಾರಲ್ಲಿ ಈ ಬಗೆಯ ಸೇವಾ ಮನೋಭಾವಗಳು ಇರುತ್ತದೋ ಅಂತಹವರು ಎಲ್ಲಾ ಕಾಲದಲ್ಲಿಯೂ ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತಾರೆ.

ವಿದ್ಯಾರ್ಥಿಗಳಲ್ಲಿ ಸ್ವದೇಶಾಭಿಮಾನವನ್ನು ಜಾಗೃತಗೊಳಿಸುವ ಶಿಕ್ಷಣ ನಮಗೆ ಬೇಕು: ದೇಶಪ್ರೇಮ ಬೆಳೆಸುವ ಶಿಕ್ಷಣ ನಮ್ಮದಾಗಬೇಕು ಎಂಬುದು ವಿವೇಕಾನಂದರ ಅಭಿಪ್ರಾಯ. ನಿಜಕ್ಕೂ ಈ ಮಾತು ಎಲ್ಲರೂ ಒಪ್ಪಲೇಬೇಕು. ನಮ್ಮ ದೇಶದ ಬಗ್ಗೆ ನಾವು ಅಭಿಮಾನ ಪಡದೆ ಬೇರೆಯವರು ಪಡಲು ಸಾಧ್ಯವೇ? ನಮ್ಮ ದೇಶದ ಬಗ್ಗೆ ನಾವು ಹೆಮ್ಮೆಪಡಬೇಕು. ಈ ದೇಶದ ಸಂಸ್ಕೃತಿಯನ್ನು, ಪರಂಪರೆಯನ್ನು ಉಳಿಸುವ ಬೆಳೆಸುವ ಅಭಿಮಾನ ನಮ್ಮಲ್ಲಿರಬೇಕು.

ಪ್ರಸ್ತುತ ನಮ್ಮ ದೇಶವನ್ನು ಇತರ ದೇಶದೊಂದಿಗೆ ಹೋಲಿಕೆ ಮಾಡಿ ಬೇರೆ ದೇಶವೇ ಶ್ರೇಷ್ಠ, ನಮ್ಮ ದೇಶ ಕನಿಷ್ಠ ಎಂಬಂತಹ ಅಭಿಪ್ರಾಯ ಕೆಲವರಲ್ಲಿದೆ. ನಮ್ಮ ದೇಶದಲ್ಲಿ ಓದಿ ಹೊರದೇಶಗಳಲ್ಲಿ ಹೋಗಿ ಕೆಲಸ ಮಾಡುತ್ತಾ ಅಲ್ಲಿಯೇ ಶಾಶ್ವತವಾಗಿ ಉಳಿದು ನಮ್ಮ ದೇಶವನ್ನು ಮರೆಯುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ. ಹಣ, ಜೀವನ ಭದ್ರತೆಗಾಗಿ ಹೊರದೇಶಗಳಿಗೆ ಹೋಗಿ ನೆಲೆಸುವುದು ದುಡಿಯುವುದು ಮುಂತಾದ ಕೆಲಸವನ್ನು ಮಾಡುತ್ತಿದ್ದಾರೆ. ಇದು ತಪ್ಪಲ್ಲ ಆದರೆ ನಮ್ಮ ದೇಶದ ಬಗ್ಗೆ ನಮಗೆ ಅಭಿಮಾನ ಇಲ್ಲ ಎಂದಾದರೆ ಬೇರೆಯವರಿಗೆ ಬರಲು ಸಾಧ್ಯವೇ? ನಾಲ್ಕು ವರ್ಷದ ಹಿಂದೆ ಕೊರೊನಾ ವೇಳೆ ಬೇರೆ ದೇಶಗಳಲ್ಲಿ ಇದ್ದ ಭಾರತೀಯರು ಮರಳಿ ಮಣ್ಣಿಗೆ ಎಂಬಂತೆ ಸುರಕ್ಷಿತ ತಾಣವನ್ನು ಹುಡುಕಿಕೊಂಡು ಬಂದಿದ್ದು ನಮ್ಮ ದೇಶಕ್ಕೆ ನಮ್ಮತನವ ನಾವು ಮರೆಯಬಾರದು. ಈ ದೇಶಕ್ಕೆ ತನ್ನದೇ ಆದ ಒಂದು ದಿವ್ಯ ಪರಂಪರೆ ಇದೆ. ಸಾವಿರಾರು ವರ್ಷಗಳ ಇತಿಹಾಸವಿದೆ ಇಲ್ಲಿರುವ ಅಪಾರವಾದ ಸಂಪತ್ತು ಸಂಸ್ಕೃತಿಯನ್ನು ನೋಡಿ ವ್ಯಾಪಾರಕ್ಕೆಂದು ಬಂದ ಬ್ರಿಟೀಷರು ನಮ್ಮಲ್ಲಿ ಒಗ್ಗಟ್ಟು ಇಲ್ಲದ್ದನ್ನು ಮನಗಂಡು ತಾನೇ ಸರಿಸುಮಾರು 400 ವರ್ಷಗಳ ಕಾಲ ಗುಲಾಮರನ್ನಾಗಿ ಮಾಡಿಕೊಂಡು ತಮ್ಮ ಪ್ರಭುತ್ವ ಸಾಧಿಸಿದ್ದು.

ಒಮ್ಮೆ ಸ್ವಾಮಿ ವಿವೇಕಾನಂದರು ರೈಲಿನಲ್ಲಿ ಪಯಣ ಮಾಡುವಾಗ ಆಕಸ್ಮಿಕವಾಗಿ ರೈಲು ಒಂದು ಕಡೆ ಕೆಟ್ಟು ನಿಲ್ಲುತ್ತದೆ. ವಿವೇಕಾನಂದರಿಗೆ ದಾಹವಾಗಿ ರೈಲಿನಲ್ಲಿದ್ದ ಹುಡುಗನೊಬ್ಬನಿಗೆ ಇಲ್ಲಿ ಕುಡಿಯಲು ನೀರು ಸಿಗುತ್ತದೆಯೇ ಎಂದು ಪ್ರಶ್ನಿಸಿದಾಗ ಆ ಹುಡುಗ ತಾನು ನೀರು ತೆಗೆದುಕೊಂಡು ಬರುವುದಾಗಿ ಹೇಳಿ 20 ನಿಮಿಷಗಳ ನಂತರ ನೀರನ್ನು ತಂದು ಕೊಡುತ್ತಾನೆ. ವಿವೇಕಾನಂದರು ಆ ಹುಡುಗನನ್ನು ನೀರನ್ನು ಎಲ್ಲಿಂದ ತಂದೆ ಎಂದು ಕೇಳಿದಾಗ ಹತ್ತಿರದಲ್ಲಿ ಎಲ್ಲಿಯೂ ನೀರು ಇರಲಿಲ್ಲ, ಹಾಗಾಗಿ ಎರಡು ಕಿಲೋಮೀಟರ್ ದೂರ ಹೋಗಿ ನೀರನ್ನು ತೆಗೆದುಕೊಂಡು ಓಡಿಬಂದೆ ಎಂದು ಉತ್ತರ ನೀಡುತ್ತಾನೆ. ಆಗ ವಿವೇಕಾನಂದರು ಅಲ್ಲಪ್ಪ ನೀರಿಲ್ಲದಿದ್ದರೆ ಇಲ್ಲ ಎಂದು ಹೇಳಬಹುದಿತ್ತು. ಈ ತೊಂದರೆ ಏಕೆ ತೆಗೆದುಕೊಂಡೆ ಎಂದು ಕೇಳಿದಾಗ ಆ ಹುಡುಗ ಕೊಟ್ಟ ಉತ್ತರ ಉಲ್ಲೇಖಾರ್ಹ. ನೀವು ನಮ್ಮ ಅತಿಥಿ ಇಂಥ ದೇಶಕ್ಕೆ ಹೋಗಿ ಅಲ್ಲಿ ನನಗೆ ಕುಡಿಯಲು ನೀರು ಸಿಗಲಿಲ್ಲ ಎಂದು ನಿಮ್ಮ ದೇಶದವರಿಗೆ ಹೇಳಿದರೆ ನನ್ನ ದೇಶಕ್ಕೆ ಅಪಮಾನವಾದಂತಾಗುತ್ತದೆ.ಆ ರೀತಿಯಾಗಬಾರದೆಂದು ನಾನು ನೀರನ್ನು ತಂದುಕೊಟ್ಟೆ ಎನ್ನುತ್ತಾನೆ. ವಿವೇಕಾನಂದರು ಆ ಹುಡುಗನ ದೇಶಪ್ರೇಮವನ್ನು ಮನಸಾರೆ ಮೆಚ್ಚಿಕೊಳ್ಳುತ್ತಾರೆ.

ಶಿಕ್ಷಣದ ಗುರಿ ಪುರುಷ ಸಿಂಹಗಳ ನಿರ್ಮಾಣ: ಶಿಕ್ಷಣದ ಪ್ರಮುಖವಾದ ಗುರಿ ಪುರುಷ ಸಿಂಹಗಳನ್ನು ನಿರ್ಮಾಣ ಮಾಡುವಂತಿರಬೇಕು. ಅಂದರೆ ಜೀವನದಲ್ಲಿ ಎಂತಹ ಪರಿಸ್ಥಿತಿ ಎದುರಾದರೂ ಅದನ್ನು ಎದುರಿಸಿ ನಿಲ್ಲುವ ಧೈರ್ಯ ನಮ್ಮದಾಗಬೇಕು. ಇಲ್ಲಿ ಹೇಳಿರುವ ವಿಚಾರವನ್ನು ಪುರುಷ ಸಿಂಹ ಎಂದಿರುವುದು ಲಿಂಗವಾಚಕವಾಗಿ ಅಲ್ಲ ಧೈರ್ಯದ ಸಂಕೇತವಾಗಿ ಸಾಮರ್ಥ್ಯದ ಅನುರೂಪವಾಗಿ ಅದನ್ನು ಸ್ವೀಕರಿಸಬೇಕು. ನಿಜವಾದ ಶಿಕ್ಷಣ ಎಂತಹದ್ದೇ ಪರಿಸ್ಥಿತಿ ಬಂದರೂ ಅದನ್ನು ಎದುರಿಸಿ ನಿಲ್ಲುವ ಶಕ್ತಿಯನ್ನು ಹೊಂದಬೇಕು ಎಂಬುದನ್ನೇ ಪುರುಷ ಸಿಂಹಗಳ ನಿರ್ಮಾಣ ಎಂದು ಹೇಳಲಾಗಿದೆ.

ವಿದ್ಯಾರ್ಥಿಗಳು ಕಲಿಯಲು ಶಿಕ್ಷಣ ನೆರವಾಗಬೇಕು: ವಿದ್ಯಾರ್ಥಿಗಳಿಗೆ ಕಲಿಯಲು ಸೂಕ್ತವಾದ ಶಿಕ್ಷಣವನ್ನು ನೀಡಬೇಕೆಂದು ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ವಿದ್ಯಾರ್ಥಿಯ ಕಲಿಕೆಗೆ ಸೂಕ್ತವಾದ ವಾತಾವರಣವನ್ನು ನಿರ್ಮಿಸಿಕೊಡಬೇಕು. ಶಿಕ್ಷಣ ಎಂದರೆ ಬಲವಂತದಿಂದ ತುರುಕುವುದಲ್ಲ, ಪ್ರೀತಿಯಿಂದ ಕಲಿಯುವಂತದ್ದು. ಪ್ರೀತಿಯಿಂದ ಕಲಿತದ್ದು ಸದಾಕಾಲ ನೆನಪಿನಲ್ಲಿರುತ್ತದೆ. ಬಲವಂತದ ಹೇರಿಕೆ ಯಾವ ಪರಿಣಾಮವನ್ನು ಬೀರುವುದಿಲ್ಲ. ವಿವೇಕಾನಂದರ ವಿಚಾರಧಾರೆಗಳು ಸಮುದ್ರದಂತೆ ವಿಶಾಲವಾದುದು, ಅಗಮ್ಯವಾದುದು. ಅದನ್ನು ಹೆಕ್ಕಿ ತೆಗೆದಷ್ಟು ಅನೇಕ ಬಗೆಯ ದಿವ್ಯ ದರ್ಶನ ನಮ್ಮದಾಗುತ್ತದೆ. ಶಿಕ್ಷಣದ ಕುರಿತು ವಿವೇಕಾನಂದರ ಅಭಿಪ್ರಾಯಗಳು ಅಂತವುಗಳಲ್ಲಿ ಒಂದು.

ವಿವಿಧ ಕಾಮಗಾರಿ ಪರಿಶೀಲಿಸಿದ ಶಾಸಕ ಶ್ರೀವತ್ಸ

ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಅಧಿಕಾರಿಗಳಿಗೆ ಸೂಚನೆ



ಹರಿಶ್ಚಂದ್ರಘಾಟ್ ಸ್ಮಶಾನದಲ್ಲಿ 1.05 ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು,ನ.28– ಕೆ.ಆರ್.ವಿಧಾನ ಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಗುರುವಾರವೂ ಹಲವೆಡೆ ಸಂಚರಿಸಿ, ವಿವಿಧ ಕಾಮಗಾರಿಗಳ ಸ್ಥಿತಿ–ಗತಿಯ ಪರಿಶೀಲನೆ ನಡೆಸಿದರು.

ಮೊದಲಿಗೆ ಹರಿಶ್ಚಂದ್ರಘಾಟ್ ಸ್ಮಶಾನಕ್ಕೆ ಭೇಟಿ ನೀಡಿ 1.05 ಕೋಟಿ ರೂ.ವೆಚ್ಚದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು. ಬಳಿಕ ಮಳೆ ಬಂದರೆ ನೀರು ನಿಂತು ಸಮಸ್ಯೆ ಉಂಟಾಗುತ್ತದೆ ಎಂಬ ದೂರಿಗೆ ಸ್ಪಂದಿಸಿ, ಮುಡಾ ಮತ್ತು ಮೈಸೂರು ಮಹಾನಗರಪಾಲಿಕೆ ಆಯುಕ್ತರೊಂದಿಗೆ ಸ್ಮಶಾನಕ್ಕೆ ತೆರಳಿ ಪರಿಶೀಲನೆ ನಡೆಸಿದ ಶಾಸಕರು, ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿದಂತೆ ಕೂಡಲೇ ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

ತದನಂತರ ಸ್ಮಶಾನದ ಆವರಣದಲ್ಲಿ ಸುಮಾರು 98 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಬಯೋಗ್ಯಾಸ್ ಉತ್ಪಾದನೆಯ ಕಾಮಗಾರಿಯನ್ನು ಸಹ ಪರಿಶೀಲಿಸಿ, ಅಗತ್ಯ ಮಾಹಿತಿ ಪಡೆದುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆದೇಶಿಸಿದರು.

ಇದೇ ವೇಳೆ ಪಿಂಜರಾಪೋಲ್ ರಸ್ತೆಯಲ್ಲಿ ಸಂಚರಿಸಿದ ಶಾಸಕರು, ಈ ಮಾರ್ಗದಲ್ಲಿ ಮಳೆ ನೀರು ಮುಂದಕ್ಕೆ ಹರಿಯದೇ ತೊಂದರೆಯಾಗಿದೆ ಎಂಬ ಸಮಸ್ಯೆಯನ್ನು ಆಲಿಸಿ, ಪರಿಶೀಲನೆ ನಡೆಸಿದ ವೇಳೆ ಮಾರ್ಗ ಮಧ್ಯದಲ್ಲಿ ಕಾಂಪೌಂಡ್ ಒಂದನ್ನು ನಿರ್ಮಾಣ ಮಾಡಿರುವುದರಿಂದ ಈ ಸಮಸ್ಯೆ ಉದ್ಭವಿಸಿದೆ ಎಂಬುದನ್ನು ಕಣ್ಣಾರೆ ಕಂಡರು. ಬಳಿಕ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಈ ಕುರಿತು ನಿರ್ದೇಶನ ನೀಡಿ, ಮಳೆ ನೀರು ಸರಾಗವಾಗಿ ಹರಿಯಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಹ ಸೂಚಿಸಿದರು.

ಹಾಸನ ಪೆನ್‌ಡ್ರೈವ್ ಹಂಚಿಕೆ ಹಗರಣ

ಹೈಕೋರ್ಟ್‌ನಿಂದ ಕೇಸ್ ರದ್ದು ಅರ್ಜಿ ಹಿಂಪಡೆದ ಪ್ರೀತಂ ಜೆ.ಗೌಡ



ಬೆಂಗಳೂರು, ನ.28–ಹಾಸನ ಪೆನ್‌ಡ್ರೈವ್ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮ ಮೇಲೆ ಹಾಕಿದ್ದ ಎಫ್‌ಐಆರ್ ರದ್ದು ಕೋರಿ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಬಿಜೆಪಿ ನಾಯಕ ಪ್ರೀತಂ ಜೆ.ಗೌಡ ಹಿಂಪಡೆದಿದ್ದಾರೆ.

ಹಾಸನ ಪೆನ್‌ಡ್ರೈವ್ ಹಗರಣಕ್ಕೆ ಸಂಬಂಧಿಸಿದಂತೆ ಪೆನ್‌ಡ್ರೈವ್‌ಗಳ ಹಂಚಿಕೆಯಲ್ಲಿ ಕೈವಾಡ ಇದೆ ಎಂದು ಪ್ರೀತಂ ಜೆ.ಗೌಡ ಮೇಲೆ ಬೆಂಗಳೂರಿನ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ದೂರು ಮತ್ತು ನಂತರದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು ಎಂದು ಕೋರಿ ಪ್ರೀತಂಗೌಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸದ್ಯ ಕೇಸ್‌ಗೆ ಸಂಬಂಧಿಸಿದಂತೆ ಚಾರ್ಜ್‌ಶೀಟ್ ಕೂಡ ಸಲ್ಲಿಕೆಯಾಗಿದೆ. ಈ ಹಿನ್ನೆಲೆ ಕೇಸ್‌ನಿಂದ ಹೆಸರು ಕೈಬಿಡಲು ಅಥವಾ ಎಫ್‌ಐಆರ್ ರದ್ದು ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಪ್ರೀತಂ ಜೆ.ಗೌಡ ಅವರೇ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. ಗುರುವಾರ ಈ ಬಗ್ಗೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ಕೈಗೆತ್ತಿಕೊಂಡಿತು. ಪ್ರೀತಂಗೌಡ ಆರಂಭದಲ್ಲಿಯೇ ಅರ್ಜಿ ಹಿಂಪಡೆಯಲು ಅನುಮತಿಸುವಂತೆ ಕೋರಿ ಮೆಮೊ ಸಲ್ಲಿಸಿದರು. ಇದಕ್ಕೆ ಒಪ್ಪಿಗೆ ಸೂಚಿಸಿದ ಪೀಠವು ಅರ್ಜಿ ಇತ್ಯರ್ಥಪಡಿಸಿತು. ಈ ಹಿಂದೆ ಇದೇ ಕೇಸ್ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪ್ರಜ್ವಲ್ ಅವರ ಲೈಂಗಿಕ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ಪ್ರೀತಂಗೌಡ ಅವರು ಅಶ್ಲೀಲ ವಿಡಿಯೋಗಳನ್ನು ಇರುವ ಪೆನ್ ಡ್ರೈವ್ ಹಂಚಿಕೆ ಮಾಡಿಸಿದ್ದರೆ ಅದು ದೊಡ್ಡ ಪಾಪ ಎಂದು ಅಭಿಪ್ರಾಯಪಟ್ಟಿತ್ತು. ಆ ಸಂದರ್ಭದಲ್ಲಿ ಪ್ರೀತಂಗೌಡ ಪರ ವಾದ ಮಂಡನೆ ಮಾಡಿದ್ದ ವಕೀಲ ಸಿ.ವಿ.ನಾಗೇಶ್ ಅವರು, ಪೆನ್‌ಡ್ರೈವ್ ಹಂಚಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ಅದಕ್ಕಾಗಿ ಪ್ರಕರಣ ದಾಖಲಿಸಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದಿದ್ದರು. ಆಗ ಪೀಠವು ಅದು ಸತ್ಯವಿರಬಹುದು. ಪ್ರೀತಂಗೌಡ ವಿಡಿಯೋಗಳನ್ನು ಹಂಚಿಕೆ ಮಾಡಿದ್ದರೆ ಅದು ನೀವು ಎಸಗಿರುವ ದೊಡ್ಡ ಪಾಪ. ಏಕೆಂದರೆ ಪ್ರತಿಯೊಬ್ಬ ಮಹಿಳೆಯನ್ನು ಅವಮಾನಕ್ಕೆ ನೂಕಲಾಗಿದೆ ಎಂದು ಹೇಳಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಅಪೋಲೊದಲ್ಲಿ ಶ್ವಾಸಕೋಶ ಕ್ಯಾನ್ಸರ್ ಪತ್ತೆ ಹಚ್ಚುವ ವಿಶೇಷ ಕಾರ್ಯಕ್ರಮ

ಮೈಸೂರು,ನ.28(ಜಿಎ)–ಮೈಸೂರಿನ ಅಪೋಲೊ ಆಸ್ಪತ್ರೆಯಲ್ಲಿ ಲಂಗ್ ಲೈಫ್ ಸ್ಕ್ರಿನಿಂಗ್ ಮೂಲಕ ಶ್ವಾಸಕೋಶ ಕ್ಯಾನ್ಸರ್ ಪತ್ತೆ ಹಚ್ಚುವ ವಿಶೇಷ ಕಾರ್ಯಕ್ರಮ ಆಯೋಜಿಸಿದೆ ಎಂದು ಆಸ್ಪತ್ರೆಯ ಶ್ವಾಸ ಕೋಶ ತಜ್ಞ ಡಾ.ಕೆ. ಮಧು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ವಾಸಕೋಶ ಕ್ಯಾನ್ಸರ್‌ಗೆ ಹಲ ವಾರು ಕಾರಣಗಳಿವೆ. ದೇಶದಲ್ಲಿ ಬಹ ಳಷ್ಟು ಮಂದಿ ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿರುವುದರ ಅರಿವಿಲ್ಲದೇ ಅಂತಿಮ ಹಂತ ತಲುಪಿದ ಬಳಿಕ ಆಗಮಿಸುವುದ ರಿಂದಾಗಿ ಪೂರ್ಣ ಗುಣಪಡಿಸಲು ಸಾಧ್ಯ ವಿಲ್ಲ. ಹೀಗಾಗಿ ಆರಂಭದಲ್ಲಿಯೇ ಪತ್ತೆ ಹಚ್ಚಿ ಪರಿಣಾಮಕಾರಿ ಚಿಕಿತ್ಸೆ ನೀಡುವ ಉದ್ದೇಶದಿಂದ ಅಪೋಲೊ ಕ್ಯಾನ್ಸರ್ ಸಂಸ್ಥೆಯು ಶ್ವಾಸಕೋಶ ಕ್ಯಾನ್ಸರ್ ಪತ್ತೆಗೆ ಲಂಗ್ ಲೈಫ್ ಸ್ಕ್ರೀನಿಂಗ್ ಮಾಡುತ್ತಿದೆ ಎಂದರು.

ಬಹಳಷ್ಟು ಮಂದಿಗೆ ಶ್ವಾಸಕೋಶ ಕ್ಯಾನ್ಸರ್ ಇರುವುದೇ ಅರಿವಿರುವುದಿಲ್ಲ. ಕೈಗಾರಿಕೆಗಳಲ್ಲಿ ಕೆಲಸ ಮಾಡುವರು, ಧೂಮಪಾನ, ಕಲುಷಿತ ವಾತಾವರಣ, ಹೆಚ್ಚು ಸಮಯ ಒಲೆ ಮುಂದೆ ಇರುವವ ರಲ್ಲಿ ಹೆಚ್ಚಾಗಿ ಶ್ವಾಸಕೋಶ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಹೀಗಾಗಿ ಆರಂಭ ದಲ್ಲಿಯೇ ಲಂಗ್ ಲೈಫ್ ಸ್ಕ್ರೀನಿಂಗ್ ಮೂಲಕ ಪತ್ತೆ ಹಚ್ಚಿ ಪರಿಣಾಮಕಾರಿ ಚಿಕಿತ್ಸೆ ನೀಡ ಬಹುದಾಗಿದೆ. ಆದ್ದರಿಂದ ಸಾರ್ವ ಜನಿಕರು ಆಸ್ಪತ್ರೆಗೆ ಆಗಮಿಸಿ ಪರೀಕ್ಷೆಗೆ ಒಳಗಾಗಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೈದ್ಯರಾದ ಡಾ.ಆರ್. ಅವಿನಾಶ್, ಡಾ.ನವೀನ್‌ಕುಮಾರ್, ಡಾ.ವೈ.ರಮ್ಯ ಉಪಸ್ಥಿತರಿದ್ದರು.

ಸಂವಿಧಾನದ ಬಗ್ಗೆ ಪೇಜಾವರ ಶ್ರೀಗಳ ಹೇಳಿಕೆಗೆ ಮಾಜಿ ಮೇಯರ್ ಪುರುಷೋತ್ತಮ್ ಆಕ್ಷೇಪ

ಮೈಸೂರು,ನ.28(ಜಿಎ)–ಪೇಜಾವರ ಶ್ರೀಗಳು ಸಂವಿಧಾನದ ಬಗ್ಗೆ ಹಗುರ ವಾಗಿ ಮಾತನಾಡಿರುವುದನ್ನು ಮಾಜಿ ಮೇಯರ್ ಪುರುಷೋ ತ್ತಮ್ ಖಂಡಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ವ್ಯತ್ಯಾಸವಿದೆ. ಗುಲಾಮ ಗಿರಿಯಲ್ಲೇ ಎಲ್ಲರೂ ಇರಲೆಂದು ಕೆಲ ವರು ಬಯಸುತ್ತಿದ್ದಾರೆ. ಇದು ಸರಿಯಲ್ಲ. ಪೇಜಾವರ ಶ್ರೀಗಳು ಈಗಿನ ಸಂವಿಧಾನ ಬೇಡವೆಂದರೆ ಯಾವ ಸಂವಿಧಾನ ನೀಡ ಬೇಕೆಂಬುದನ್ನು ಸ್ಪಷ್ಟಪಡಿಸಲಿ. ದೇಶವನ್ನು ಒಡೆದು ಆಳುವ ಮನಸ್ಥಿತಿ ಹಲವರಲ್ಲಿ ಕಾಣುತ್ತಿದೆ. ಸಮಾನತೆ ನೋಡಲು ಇಚ್ಛಿಸದ ಮನಸ್ಥಿತಿ ಇವರದ್ದಾಗಿದೆ. ಸಂವಿಧಾನ ಬಂದ ಬಳಿಕ ದಲಿತರು, ಶೋಷಣೆಗೆ ಒಳಗಾದವರು, ಒಬಿಸಿಗಳು, ಅಲ್ಪಸಂಖ್ಯಾತರು ಒಂದಷ್ಟು ಸಮಾನತೆ ಕಾಣುತ್ತಿರುವುದು ಇವರಿಗೆ ಸಹಿಸಲು ಸಾಧ್ಯ ವಿಲ್ಲ ಅನಿಸುತ್ತಿದೆ ಒಂದು ರೀತಿಯಲ್ಲಿ ಈಗಿನ ಸಂವಿಧಾನವೇ ಬೇಡ ಎಂದಿದ್ದಾರೆ. ಹೀಗಾಗಿ ಈ ರೀತಿ ಅಮರು ಹಾಗೂ ಇತರರು ಮುಂದುವರಿದಲ್ಲಿ ಮಾತನಾಡುವವರ ವಿರುದ್ಧ ಮತ್ತೆ ಕೋರೆಗಾಂವ್ ಯುದ್ಧ ನಡೆಯಬೇಕಾದ ಪರಿಸ್ಥಿತಿ ಬರಬಹುದಾಗಿದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಸಾಹಿತಿ ಸಿದ್ದಸ್ವಾಮಿ, ತುಂಬಲ ರಾಮಣ್ಣ ಇದ್ದರು.

ಯುಜಿಸಿ–ನೆಟ್ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು,ನ.28– ಜ್ಞಾನಬುತ್ತಿ ಸಂಸ್ಥೆ ವತಿಯಿಂದ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು 2025ರ ಜನವರಿ ತಿಂಗಳಲ್ಲಿ ನಡೆಸಲಿರುವ ಕಾಲೇಜು ಸಹಾಯಕ ಪ್ರಾಧ್ಯಾಪಕರ ಮತ್ತು ಕಿರಿಯ ಶಿಷ್ಯವೇತನ ಸಂಶೋಧನಾ ಸಹಾಯಕರ ಅರ್ಹತಾ (UGC-NET) ಪರೀಕ್ಷೆಗೆ ಉಚಿತ ತರಬೇತಿಯನ್ನು ನೀಡಲಾಗುತ್ತಿದೆ. ಆಸಕ್ತರು ಡಿ.5ರೊಳಗಾಗಿ ಲಕ್ಷ್ಮೀ ಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಅವರ ದೂ.ಸಂ: 9448117455 ಸಂಯೋಜಕ ಸಿ.ಕೆ.ಕಿರಣ್ ಕೌಶಿಕ್ ದೂ.ಸಂ:9972830857, ಕೆ.ವೈ.ನಾಗೇಂದ್ರ ಅವರ ದೂ.ಸಂ: 8296788251 ಅನ್ನು ಸಂಪರ್ಕಿಸಬಹುದು ಎಂದು ಸಂಸ್ಥೆ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿಶ್ರಾಂತ ಸರ್ಕಾರಿ ನೌಕರರ ಸಂಘದ ಸಂಘಟನಾ ಸಭೆ

ಮೈಸೂರು, ನ.28(ಜಿಎ)–ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ವಿಶ್ರಾಂತ ಉದ್ಯೋಗಿಗಳ ಸಂಘದ ವತಿ ಯಿಂದ ಜಿಲ್ಲಾ ಸಂಘದ ವತಿಯಿಂದ ನ.30ರಂದು ಬೆಳಗ್ಗೆ 11.45ಕ್ಕೆ ಶ್ರೀರಾಂ ಪುರ 2ನೇ ಹಂತ ಎಸ್‌ಬಿಎಂ ಕಾಲೋನಿ ಶಿವದೇವಾಲಯದ ಆವರಣದಲ್ಲಿರುವ ಶಿವಭವನದಲ್ಲಿ ಮೈಸೂರು ವಲಯದ ಸಂಘಟನಾ ಸಭೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಬಿ.ಆರ್.ಉಮಾಕಾಂತ್ ಈ ವಿಷಯ ತಿಳಿಸಿ, ಮೈಸೂರು, ಚಾಮರಾಜನಗರ, ಮಂಡ್ಯ, ಮಡಿಕೇರಿ, ಹಾಸನ, ಚಿಕ್ಕಮಗ ಳೂರು, ಉಡುಪಿ, ಮಂಗಳೂರು, ಕಾರ ವಾರ ಜಿಲ್ಲೆಗಳನ್ನು ಒಳಗೊಂಡ ವಲಯ ಇದಾಗಿದೆ. ರಾಜ್ಯಾಧ್ಯಕ್ಷರಾದ ಡಾ.ಎಲ್. ಭೈರಪ್ಪ, ಮೈಸೂರು ವಲಯದ ಉಪಾ ಧ್ಯಕ್ಷರಾದ ಶ್ರೀನಿವಾಸ್ ಸೇರಿದಂತೆ ಇನ್ನಿ ತರ ಗಣ್ಯರು ಆಗಮಿಸಲಿದ್ದಾರೆ. ಸಭೆಯಲ್ಲಿ ನಿವೃತ್ತ ನೌಕರರಿಗೆ ದೊರೆಯುವ ಸೌಲಭ್ಯ ಕುರಿತು ಮಾಹಿತಿ ನೀಡಲಾಗುವುದು. ಜೊತೆಗೆ, ಸರ್ಕಾರದಿಂದ ದೊರಕಬೇಕಾದ ಸೌಲಭ್ಯ ಕುರಿತು ಬೇಡಿಕೆ ಸಲ್ಲಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಮಾಯಮ್ಮ, ನಾಗಮ್ಮ, ಶ್ರೀನಿವಾಸ, ಕೆ.ಎಂ.ಪುಟ್ಟು ಉಪಸ್ಥಿತರಿದ್ದರು.

ತಿಂಗಳಲ್ಲಿ ಒಳ ಮೀಸಲಾತಿ ಜಾರಿ ಮಾಡದಿದ್ದರೆ ವರುಣದಿಂದ ವಿಧಾನಸೌಧಕ್ಕೆ ಪಾದಯಾತ್ರೆ

ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿ ಎಚ್ಚರಿಕೆ

ಮೈಸೂರು,ನ.28(ಜಿಎ)–ಒಳ ಮೀಸ ಲಾತಿ ಕುರಿತ ಸುಪ್ರೀಕೋರ್ಟ್ ತೀರ್ಪನ್ನು ತಿಂಗಳೊಳಗೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಜಾರಿಗೊಳಿಸದಿದ್ದರೆ, ಅವರ ಕ್ಷೇತ್ರ ವರುಣದಿಂದ ವಿಧಾನ ಸೌಧದವರೆಗೆ ಪಾದಯಾತ್ರೆ ಹಮ್ಮಿಕೊಳ್ಳು ವುದಾಗಿ ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಎಂ.ದೇವ ರಾಜ್ ಮಾತನಾಡಿ, ಆ.1ರಂದು ಒಳ ಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಹೀಗಾಗಿ ಹರಿಯಾಣ, ತೆಲಂಗಾಣಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿವೆ. ಆದರೂ ರಾಜ್ಯ ಸರ್ಕಾರ ನಾಗಮೋಹನದಾಸ್ ಅವರ ನೇತೃತ್ವ ದಲ್ಲಿ ಸಮಿತಿ ರಚಿಸಿ ಮೂರು ತಿಂಗಳ ಕಾಲಾವಕಾಶ ನೀಡಿದೆ. ಇದು ವಂಚಿ ಸುವ ಹುನ್ನಾರವಾಗಿದ್ದಲ್ಲಿ ಹೋರಾಟ ನಡೆಸಲಾಗುವುದು ಎಂದರು.

ಎಲ್.ಜಿ ಹಾವನೂರ್ ವರದಿಯನ್ನು ಆಧರಿಸಿ ಇಂದಿನ ಜನಸಂಖ್ಯೆಗೆ ಅನು ಗುಣವಾಗಿ ಒಳ ಮೀಸಲಾತಿ ನೀಡಬಹು ದಾಗಿತ್ತು. ಸಾಮಾಜಿಕ ನ್ಯಾಯ ಎನ್ನುವ ಸಿಎಂ ಸಿದ್ದರಾಮಯ್ಯ ಅವರು ನಿಜಕ್ಕೂ ಆ ರೀತಿಯ ಕ್ರಮ ಕೈಗೊಂಡಿಲ್ಲ. ಹೀಗಾಗಿ ಈ ಬಾರಿ ವಂಚಿಸಿದಲ್ಲಿ ವರುಣದಿಂದ ವಿಧಾನಸೌಧದವರೆಗೆ ಪ್ರತಿಭಟನಾ ಪಾದ ಯಾತ್ರೆ ಮಾಡಲಾಗುತ್ತದೆ ಎಂದರು. ಗೋಷ್ಠಿ ಯಲ್ಲಿ ರಾಮಕೃಷ್ಣ, ಗಂಗಣ್ಣ, ಶ್ರೀನಿ ವಾಸ್, ಸಂತೋಷ್‌ಕುಮಾರ್ ಇದ್ದರು.

ಇಂದು ಕನ್ನಡ ರಾಜ್ಯೋತ್ಸವ–ನಿತ್ಯೋತ್ಸವ

ಮೈಸೂರು,ನ.28– ಭಾರತೀಯ ಭಾಷಾ ಸಂಸ್ಥಾನದ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ವತಿಯಿಂದ ನ.29ರಂದು ಬೆಳಗ್ಗೆ 10 ಗಂಟೆಗೆ ಸಂಸ್ಥೆಯ ಪ್ರಿವ್ಯೂ ಥಿಯೇಟರ್‌ನಲ್ಲಿ ಕನ್ನಡ ರಾಜ್ಯೋತ್ಸವ–ನಿತ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಉದ್ಘಾಟನೆ ಮಾಡಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಶುಭಚಂದ್ರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಿ.2ರಿಂದ ಕಿಡ್ನಿ ಉಚಿತ ತಪಾಸಣೆ ಶಿಬಿರ

ಮೈಸೂರು,ನ.28– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಡಿ.2ರಿಂದ ಡಿ.7ರವರೆಗೆ ಕಿಡ್ನಿ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸ ಲಾಗಿದೆ. ಮೂತ್ರಪಿಂಡ ತಜ್ಞವೈದ್ಯ ಡಾ.ಹರ್ಷವರ್ಧನ್ ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ 50 ವರ್ಷ ಮೇಲ್ಪಟ್ಟ ವಯಸ್ಕರು, ಮಧುಮೇಹ ರೋಗಿಗಳು, ಅಧಿಕ ರಕ್ತದೊತ್ತಡ ಇರುವವರು, ಮೂತ್ರಪಿಂಡದಲ್ಲಿ ಕಲ್ಲು ಹಾಗೂ ಸೋಂಕು ಹೊಂದಿರುವವರು, ಕುಟುಂಬದಲ್ಲಿ ಮೂತ್ರಪಿಂಡದ ಸಮಸ್ಯೆ ಇರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವಿಶೇಷ ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ 30% ರಿಯಾಯತಿ ಇದೆ. ಹೆಚ್ಚಿನ ಮಾಹಿತಿಗಾಗಿ 0821-2533600, 99863 99862 ಸಂಪರ್ಕಿಸಬಹುದಾಗಿದೆ.

ಬೆಂಕಿರಹಿತ ಅಡುಗೆಯಲ್ಲಿ ಮಹಿಳೆಯರ ಕೈ ಚಳಕ; ಸಲಾಡ್, ಜ್ಯೂಸ್ ರುಚಿಕಟ್ಟಾದ ತಿನಿಸು ರೆಡಿ





ಬೆಂಕಿರಹಿತ ಅಡುಗೆ ತಯಾರಿಕಾ ಸ್ಪರ್ಧೆ ವಿಜೇತರಾದ ಜಿ.ಆರ್.ತಾರಕೇಶ್ವರಿ ಪ್ರಥಮ, ಕೆ.ಎಸ್.ಕೃಪಾಲಕ್ಷ್ಮಿ ದ್ವಿತೀಯ ಮತ್ತು ಅದೀಬಾ ಕುಲ್‌ಸಮ್ ಅವರಿಗೆ ತೃತೀಯ ಬಹುಮಾನ ವಿತರಿಸಲಾಯಿತು.

ಮೈಸೂರು,ನ.28(ಎಂಟಿವೈ)–ದಸರಾ ವಸ್ತುಪ್ರದ ರ್ಶನದ ಆವರಣದಲ್ಲಿ ಮಹಿಳೆಯರಿಗಾಗಿ ಬೆಂಕಿ ರಹಿತ ಅಡುಗೆ ತಯಾರಿಸುವ ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡು ಹಣ್ಣು–ತರಕಾರಿಯಿಂದ ರುಚಿಕರವಾದ ವಿವಿಧ ತಿನಿಸು ತಯಾರಿಸಿ ಗಮನ ಸೆಳೆದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಹಾಗೂ ಮಹಿಳಾ ಉದ್ಯಮಿ ಸಮಿತಿ ವತಿಯಿಂದ ಪಿ.ಕಾಳಿಂಗ ರಾವ್ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ ಅಡುಗೆ ತಯಾರಿಸುವ ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ ಬಡಾವಣೆಗಳಿಂದ 50ಕ್ಕೂ ಹೆಚ್ಚು ಮಂದಿ ಮಹಿಳೆಯರು ಬೆಂಕಿ ಬಳಸದೇ ಸ್ಥಳದಲ್ಲೇ ತಿನಿಸುವ ಮೂಲಕ ಕೈಗುಣ ಪ್ರದರ್ಶಿಸಿದರು.

ಬೆಂಕಿ ಬಳಸದೇ ಅಡುಗೆ ತಯಾರಿಸಬೇಕು ಎಂಬ ನಿಯವಿದ್ದ ಹಿನ್ನೆಲೆಯಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಮಹಿಳೆಯರು ನಾನಾ ಸಲಾಡ್ ಹಾಗೂ ಜ್ಯೂಸ್ ತಯಾರಿಸುವ ಮೂಲಕ ಗಮನ ಸೆಳೆದರು. ಸ್ಪರ್ಧೆಯಲ್ಲಿ ಬೀಟ್‌ರೂಟ್ ಜ್ಯೂಸ್, ಪಾಲಾಕ್ ಸೊಪ್ಪಿನ ಜ್ಯೂಸ್, ಈರೇಕಾಯಿ ಸಲಾಡ್, ಸಿಹಿ ತಿನಿಸು ಗಳು, ಚುರುಮುರಿ, ಬೀಟ್‌ರೂಟ್ ಅಲ್ವಾ, ಸೌತೇ ಕಾಯಿ ಸಲಾಡ್, ಮೊಳಕೆಕಾಳಿನ ಸಲಾಡ್, ಮೆಂತ್ಯ ಸಲಾಡ್, ದಾಳಿಂಬೆ ಸಲಾಡ್ ಸೇರಿದಂತೆ ವಿವಿಧ ಬಗೆಯ ತಿನಿಸುಗಳನ್ನು ತಯಾರಿಸಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವ ಜನತೆ ಅಡುಗೆ ಮನೆಯನ್ನು (ಕಿಚನ್) ಮರೆತು ಪಾರ್ಸಲ್ ತರಿಸಿಕೊಳ್ಳುವ ಪರಿಪಾಠ ಹೊಂದಿದ್ದಾರೆ. ಮಹಿಳೆಯರಿಗೆ ಅಡುಗೆ ಮನೆಯೇ ಅರಮನೆಯಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಫುಡ್ ಡೆಲವರಿ ಸಂಸ್ಥೆಗಳನ್ನು ಅವಲಂಬಿಸಿ ದೇಸಿ ಅಡುಗೆ ಮರೆಯುತ್ತಿದ್ದಾರೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಜಂಕ್‌ಫುಡ್ ಸೇವಿ ಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮನೆಯಲ್ಲಿಯೇ ರುಚಿಕರವಾದ ಅಡುಗೆ ತಯಾ ರಿಸುವುದಕ್ಕೆ ಪ್ರೇರಣೆ ನೀಡಲು ಈ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಮಹಿಳೆಯರು ತಯಾರಿಸಿರುವ ವಿವಿಧ ತಿನಿಸನ್ನು ದೊಡ್ಡ ಮಟ್ಟದಲ್ಲಿ ತಯಾರಿಸುವುದಾದರೆ ಮಳಿಗೆ ವ್ಯವಸ್ಥೆ ಮಾಡಿ ಉದ್ಯಮಿಗಳಾಗಿ ರೂಪುಗೊಳ್ಳಲು ಸಹಕರಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ದಸರಾ ವಸ್ತುಪ್ರದ ರ್ಶನ ಮಹಿಳಾ ಉದ್ಯಮಿ ಉಪಸಮಿತಿ ಅಧ್ಯಕ್ಷೆ ರಾಜೇಶ್ವರಿ, ಉಪಾಧ್ಯಕ್ಷರಾದ ಎಸ್.ಭವ್ಯ, ಎಸ್.ರೇಷ್ಮಾ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಮಲ್ಲಿಗೆ ವೀರೇಶ್ ಇನ್ನಿತರರು ಉಪಸ್ಥಿತರಿದ್ದರು.

ಡಿ.4, ಜಿಲ್ಲಾ ಮಟ್ಟದ ಯುವಜನೋತ್ಸವ

ಮೈಸೂರು, ನ.28(ಆರ್‌ಕೆ)–ಡಿಸೆಂಬರ್ 4ರಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯ ಕ್ರಮ ಆಯೋಜಿಸಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕ್ರೀಡೆ ಮತ್ತು ಯುವಜನ ಸಬಲೀಕರಣ ಇಲಾಖೆ, ನೆಹರು ಯುವ ಕೇಂದ್ರ, ಮೈಸೂರು ವಿಶ್ವ ವಿದ್ಯಾನಿಲಯ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಯುವಜನೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಲಾಗುವುದು.

ವಿಷಯಾಧಾರಿತ ಸ್ಪರ್ಧೆಗಳು ವಿಜ್ಞಾನ ಮೇಳ, ಕನ್ನಡ, ಆಂಗ್ಲ, ಹಿಂದಿ ಭಾಷೆ ಯಲ್ಲಿ ಜಾನಪದ ನೃತ್ಯ (ತಂಡ), ಜಾನ ಪದ ಗೀತೆ (ತಂಡ), ಜಾನಪದ ನೃತ್ಯ (ವೈಯಕ್ತಿಕ), ಜಾನಪದ ಗೀತೆ (ವೈಯ ಕ್ತಿಕ), ಕವಿತೆ ಬರೆಯುವುದು (ವೈಯಕ್ತಿಕ) (1000 ಪದಗಳಿಗೆ ಮೀರದಂತೆ) ಕಥೆ ಬರೆಯುವುದು (1000 ಪದಗಳಿಗೆ ಮೀರ ದಂತೆ), ಚಿತ್ರಕಲೆ A3 Size I.e 11.7"x16.5", Declamation (ಘೋಷಣೆ) ಭಾಷೆ: ಹಿಂದಿ ಮತ್ತು ಆಂಗ್ಲಭಾಷೆಯಲ್ಲಿರಬೇಕು. (ರಾಷ್ಟ್ರ



ಮಟ್ಟದ ಯುವ ಜನೋತ್ಸವ ಕಾರ್ಯ ಕ್ರಮದಲ್ಲಿ ಭಾಗವಹಿಸಲು) ಕನ್ನಡ ಭಾಷೆಯನ್ನು ರಾಜ್ಯ ಮಟ್ಟದ ಯುವಜನೋ ತ್ಸವ ಕಾರ್ಯಕ್ರಮದವರೆಗೆ ಮಾತ್ರ ಸೀಮಿತಗೊಳಿಸಿದೆ. ಸ್ಪರ್ಧಿಗಳು ಸಿದ್ಧ ಪಡಿಸಿಕೊಂಡಿರುವ ಆಯ್ಕೆ ವಿಷಯಗಳ ಬಗ್ಗೆ 3 ನಿಮಿಷಗಳ ಭಾಷಣ ಮಾಡ ಬೇಕು. ಗುಡಿ ಕೈಗಾರಿಕೆಯ ಕಲಾಪ್ರಕಾರ (Artisans of Handicrafts to Participate in Yuva Kirthi), ನೇಕಾರಿಕೆ, ಜವಳಿ, ಕೃಷಿ ಉತ್ಪನ್ನಗಳು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಸ್ಪರ್ಧೆಗಳಿಗೆ 15ರಿಂದ 29 ವರ್ಷ ದೊಳಗಿನ ಯುವಕ–ಯುವತಿಯರು, ಶಾಲಾ–ಕಾಲೇಜುಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮತ್ತು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೋಂದಾವಣೆಯಾದ ಯುವಕ ಸಂಘ ಗಳು, ಯುವತಿ ಮಂಡಳಿಗಳ ಪದಾ ಧಿಕಾರಿಗಳು ಭಾಗವಹಿಸಬಹುದಾಗಿದ್ದು, ಆಸಕ್ತರು ಡಿಸೆಂಬರ್ 4ರಂದು ಬೆಳಿಗ್ಗೆ 9 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಂಘಟಕರಲ್ಲಿ ವರದಿ ಮಾಡಿಕೊಳ್ಳಬೇಕು.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರು 2024–25ನೇ ಸಾಲಿನ ರಾಜ್ಯ ಮಟ್ಟದ ಯುವಜನೋ ತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಭಾಗ ವಹಿಸಿ ವಿಜೇತರಾದ ಸ್ಪರ್ಧಾಳುಗಳಿಗೆ ನಗದು ಬಹುಮಾನ ಪ್ರಶಸ್ತಿ ಪತ್ರ ಮತ್ತು ಫಲಕಗಳನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀ ಕರಣ ಮತ್ತು ಕ್ರೀಡಾ ಇಲಾಖೆಯ ಸಹಾ ಯಕ ನಿರ್ದೇಶಕರ ದೂ.ಸಂ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಬಿಎಂಟಿಸಿಯಲ್ಲಿ ಟಿಕೆಟ್‌ರಹಿತ ಪ್ರಯಾಣ

ಮಹಿಳಾ ಸೀಟುಗಳಲ್ಲಿ ಕುಳಿತವರಿಂದ 19 ಲಕ್ಷ ರೂ. ದಂಡ ವಸೂಲಿ

ಬೆಂಗಳೂರು: ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ)ಯು ಕಳೆದ ಮೂರು ತಿಂಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ ಮತ್ತು ಮಹಿಳೆಯರಿಗೆ ಮಾತ್ರ ಮೀಸಲಾದ ಆಸನಗಳಲ್ಲಿ ಪ್ರಯಾ ಣಿಸಿದ 10,069 ಪ್ರಯಾಣಿಕರಿಂದ 19 ಲಕ್ಷ ರೂ. ದಂಡವಾಗಿ ಸಂಗ್ರಹಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.



ಟಿಕೆಟ್ ಇಲ್ಲದೆ ಪ್ರಯಾಣಿಸುವ ಪ್ರಯಾ ಣಿಕರನ್ನು ಪತ್ತೆಹಚ್ಚಲು ಬಿಎಂಟಿಸಿಯ ತಪಾಸಣಾ ಸಿಬ್ಬಂದಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಬಸ್‌ಗಳ ತಪಾಸಣೆಯನ್ನು ತೀವ್ರಗೊಳಿಸಿದ್ದಾರೆ ಎಂದು ಹೇಳಿದ್ದಾರೆ.

ಬಿಎಂಟಿಸಿ ಪ್ರಕಾರ, ಆಗಸ್ಟ್, ಸೆಪ್ಟೆಂ ಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ, ತಪಾಸಣಾ ಸಿಬ್ಬಂದಿ 57,219 ಟ್ರಿಪ್ ಗಳನ್ನು ಪರಿಶೀಲಿಸಿದ್ದಾರೆ ಮತ್ತು 8,891 ಟಿಕೆಟ್‌ರಹಿತ ಪ್ರಯಾಣಿಕರಿಗೆ ದಂಡ ವಾಗಿ 17,96,030 ರೂ. ದಂಡ ವಿಧಿಸಿ ದ್ದಾರೆ ಮತ್ತು ಕರ್ತವ್ಯ ಲೋಪಕ್ಕಾಗಿ ಕಂಡಕ್ಟರ್‌ಗಳ ವಿರುದ್ಧ 5,268 ಪ್ರಕರಣ ಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ. ಅದೇ ಅವಧಿಯಲ್ಲಿ, ಅವರು ಮಹಿಳಾ ಪ್ರಯಾಣಿಕರಿಗೆ ಮೀಸ ಲಾದ ಸೀಟುಗಳನ್ನು ಅಕ್ರಮಿಸಿ ಕೊಂಡಿದ್ದಕ್ಕಾಗಿ 1,178 ಪುರುಷ ಪ್ರಯಾಣಿ ಕರಿಗೆ ದಂಡ ವಿಧಿಸಿದ್ದಾರೆ ಮತ್ತು 1988ರ MV ಕಾಯಿದೆಯ KMV (ಕರ್ನಾಟಕ ಮೋಟಾರು ವಾಹನ) ನಿಯಮಗಳಿಗೆ ಅನುಸಾರವಾಗಿ 1,17,800 ರೂ. ದಂಡ ಸಂಗ್ರಹಿಸಿದ್ದಾರೆ. ಒಟ್ಟಾರೆ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ, 10,069 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ ಮತ್ತು 19,13,830 ರೂ ದಂಡ ಸಂಗ್ರಹಿಸಲಾಗಿದೆ" ಎಂದು ಬಿಟಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ನಿರ್ದೇಶಕರಿಗೆ ಅಭಿನಂದನೆ...



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದ ಜನಸ್ಪಂದನ ಟ್ರಸ್ಟ್ ವತಿಯಿಂದ ನೈರುತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ನಿರ್ದೇಶಕರಾದ ಮಂಜೇಗೌಡ, ಭೈರಪ್ಪ, ಚಂದ್ರಶೇಖರ್, ವಿಜಯ್ ಕುಮಾರ್, ಅನ್ನಪೂರ್ಣ, ಪಾರ್ತಿಬನ್, ರಘು, ಗಿರೀಶ್, ಬಸವರಾಜು, ಅನ್ಬು, ವಿಲಿಯಂ ಜಾರ್ಜ್, ನರ್ತನ, ದಿವಾಕರ್, ಧೃವ, ಕುಮಾರ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಮೇಯರ್ ಭೈರಪ್ಪ, ಮಾಜಿ ಉಪಮೇಯರ್ ಸಿದ್ದರಾಜು, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಜೆ.ಗೋಪಿ, ಶೋಭಾ ಸುನೀಲ್, ಮಂಜುಳಾ ಮಾನಸ, ಪಲ್ಲವಿ ಬೇಗಂ, ವಿ.ರಾಮಸ್ವಾಮಿ, ಸೆನೆಟ್ ಮಾಜಿ ಸದಸ್ಯ ಗೋಪಿನಾಥ್, ಕುಮಾರ್‌ಗೌಡ, ವಿಜಯ್‌ಕುಮಾರ್, ರಾಕೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಡು–ನುಡಿ ಉಳಿಯಬೇಕಾದರೆ ನಮ್ಮಲ್ಲಿನ ಅನ್ಯರಿಗೆ ಕನ್ನಡ ಕಲಿಸಬೇಕು

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ಬೆಟ್ಟಕೋಟೆ ಸಲಹೆ

ಮೈಸೂರು, ನ.28(ಎಸ್‌ಪಿಎನ್)–ಕರ್ನಾಟಕದ ಗಡಿನಾಡು ಹಾಗೂ ವಿವಿಧ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕನ್ನಡ ಶಾಲೆಗಳಿದ್ದರೂ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಆಸಕ್ತಿ ತೋರುತ್ತಿಲ್ಲ. ವಿದ್ಯಾರ್ಥಿಗಳ ಈ ಮನಸ್ಥಿತಿಯಿಂದ ಕನ್ನಡ ಶಾಲೆಗಳ ಸಂಪೂರ್ಣ ಬಂದ್ ಆಗುತ್ತಿವೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಡಾ.ನಾಗೇಶ್.ವಿ.ಬೆಟ್ಟಕೋಟೆ ತೀವ್ರ ಆತಂಕ ವ್ಯಕ್ತಪಡಿಸಿದರು.



ಕನ್ನಡ ರಾಜ್ಯೋತ್ಸವ ಅಂಗವಾಗಿ ಕನ್ನಡವೇ ಸತ್ಯ' ಹಾಗೂ ವಿವಿಧ ಕ್ಷೇತ್ರದ ಸಾಧಕರಾದ ಹಿರಿಯ ಸುಗಮ ಸಂಗೀತ ಗಾಯಕ ಪ್ರೊ.ಎಸ್.ಮಲ್ಲಣ್ಣ, ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೀಬೋರ್ಡ್ ವಾದಕ ಗಣೇಶ್‌ಭಟ್, ಹಿನ್ನೆಲೆ ಗಾಯಕ ಜಯರಾಮ್ ರಾಜು ಅವರನ್ನು ಸನ್ಮಾನಿಸಲಾಯಿತು.

> ❝ ಮೈಸೂರಿನ ಅಪಾರ್ಟ್ ಮೆಂಟ್‌ಗಳಲ್ಲಿ ವಾಸಿಸುವ ಬಹುತೇಕ ಮಂದಿ ಹಿಂದಿ, ಇಂಗ್ಲಿಷ್ ನಲ್ಲಿ ಮಾತನಾಡುವವರಿದ್ದಾರೆ. ಇಂತ ಹವರಿಗೆ ಕನ್ನಡ ಕಲಿಸುವ ಕೆಲಸವಾಗ ಬೇಕು. ಈ ಕೆಲಸವನ್ನು ನಾನು ವಾಸ ಮಾಡುತ್ತಿರುವ ಅಪಾರ್ಟ್‌ಮೆಂಟ್ ನಲ್ಲಿ ಆರಂಭಿಸಿದ್ದೇನೆ. ನೀವೂ ಇಂತಹ ಕೆಲಸಕ್ಕೆ ಮುಂದಾಗಬೇಕು ಹಾಗೂ ಕನ್ನಡ ಪರ ಒಲವು ಹೊಂದಿರುವವರು ಕನ್ನಡ ಉಳಿವಿಗೆ ಶಪಥ ಮಾಡಬೇಕು.
>
> **–ನಾ.ದಾಮೋದರ ಶೆಟ್ಟಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರು**

ಮೈಸೂರು ನಾದಬ್ರಹ್ಮ ಸಭಾಂಗಣದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ಜಿಲ್ಲಾ ಘಟಕದ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ವರ ನಟ ಡಾ.ರಾಜ್‌ಕುಮಾರ್ ಹಾಡಿರುವ ಭಾವಗೀತೆಗಳ ಗಾಯನ 'ಕನ್ನಡವೇ ಸತ್ಯ' ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ, ಮಾತನಾಡಿದರು.

ಗಡಿನಾಡಿನಲ್ಲಿ ಕನ್ನಡ ಶಾಲೆಗಳಿದ್ದರೂ ಪ್ರವೇಶಾತಿ ಪಡೆಯಲು ವಿದ್ಯಾರ್ಥಿಗಳು ಆಸಕ್ತಿ ತೋರುತ್ತಿಲ್ಲ. ವಿದ್ಯಾರ್ಥಿಗಳಿದ್ದರೂ ಶಿಕ್ಷಕರ ಹುದ್ದೆ ಖಾಲಿ ಇವೆ. ಅಲ್ಲದೆ, ಸರ್ಕಾರಿ ಶಾಲೆಗಳಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಕಲಿಸಲು ಅನುಮತಿ ನೀಡಿದೆ. ಅಂತೆಯೇ ಹೊಸದಾಗಿ ಶಾಲೆಗಳನ್ನು ಆರಂಭಿಸುವ ಖಾಸಗಿ ಸಂಸ್ಥೆಗಳಿಗೆ 1ನೇ ತರಗತಿಯಿಂದ ಆಂಗ್ಲಮಾಧ್ಯಮಕ್ಕೆ ಅನುಮತಿ ನೀಡುತ್ತಿರುವ ಹಿನ್ನೆಲೆಯಲ್ಲಿ ಕನ್ನಡ ಮಾಧ್ಯಮ ಬೋಧಿಸುವ ಸರ್ಕಾರಿ ಶಾಲೆಗಳು ವರ್ಷಕ್ಕೆ 100–200 ಶಾಲೆ ಗಳು ಮುಚ್ಚುವ ಹಂತ ತಲುಪಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಶಾಲೆಗಳಿಗೆ ನಾವೇ ಮಕ್ಕಳನ್ನು ದಾಖಲು ಮಾಡದಿದ್ದರೆ, ಸುಂದರ ಭಾಷೆ, ಶಾಸ್ತ್ರೀಯ ಸ್ಥಾನಮಾನ ಪಡೆದಿರುವ ಮಾತೃ ಭಾಷೆ ಉಳಿಯುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು, ಈಗಾಗಲೇ ಬೃಹತ್ ಬೆಂಗಳೂರಿನಲ್ಲಿ ಬಹುತೇಕ ಕನ್ನಡ ಶಾಲೆಗಳು ಮುಚ್ಚಿಹೋಗಿವೆ. ಮೈಸೂರಿ ನಲ್ಲೂ ಅದೇ ಹಾದಿಯಲ್ಲಿದೆ. ಇದರ ಬಗ್ಗೆ ಕನ್ನಡ ಪರ ಸಂಘ–ಸಂಸ್ಥೆಗಳು, ಕನ್ನಡ ಪ್ರಾಧ್ಯಾಪಕರು, ಚಿಂತಕರು ಗಂಭೀರವಾಗಿ ಚರ್ಚಿಸಬೇಕು ಎಂದು ಸಲಹೆ ನೀಡಿದರು.

ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಕನ್ನಡ ಭಾಷೆ ಮಾತನಾಡುವವರೇ ಇಲ್ಲ ದಿದ್ದಾಗ ಪೋಷಕರು ತಾನೇ ಕನ್ನಡ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಲು ಸ್ವಲ್ಪ ಯೋಚನೆ ಮಾಡುತ್ತಾರೆ. ರಷ್ಯಾ, ಚೀನಾ ಹಾಗೂ ಇತರೆ ವಿದೇಶಗಳಲ್ಲಿ ಇಂಗ್ಲಿಷ್ ಭಾಷೆಯ ಪ್ರಭಾವ ಎಷ್ಟೇ ಇದ್ದರೂ ತಮ್ಮ ತಮ್ಮ ನೆಲಮೂಲ ಭಾಷೆಯಲ್ಲೇ ಶಿಕ್ಷಣ ನೀಡುತ್ತಿದ್ದಾರೆ ಎಂದು ಉದಾಹರಣೆ ನೀಡಿದರು.

ಮಕ್ಕಳಿಗೆ ಕೌಶಲಾಧಾರಿತ ಶಿಕ್ಷಣ, ಉದ್ಯೋಗ, ವ್ಯಾವಹಾರಿಕ ಶಿಕ್ಷಣಕ್ಕೆ ಮಕ್ಕಳೇ ಹೆಚ್ಚಿನ ಒತ್ತು ನೀಡುತ್ತಿರುವ ಹಿನ್ನೆಲೆಯಲ್ಲಿ ಮಾತೃಭಾಷೆ ಕನ್ನಡಕ್ಕೆ ಈ ಗತಿ ಬಂದಿದೆ. ಇಂದಿನ ಪೀಳಿಗೆಯಲ್ಲಿ ಮಾತೃ ಭಾಷೆಗೆ ತಿರಸ್ಕಾರ ಮನೋಭಾವ ಬೆಳೆಯಲು ಕಾರಣವಾದರೂ ಏನು ಎಂಬುದನ್ನು ತಜ್ಞರ ಸಮಿತಿ ಅಧ್ಯಯನ ನಡೆಸುವ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.

ಹಿರಿಯ ಸಾಧಕರಿಗೆ ಸನ್ಮಾನ: ಈ ವೇಳೆ ಹಿರಿಯ ಸುಗಮ ಸಂಗೀತ ಗಾಯಕ ಪ್ರೊ.ಎಸ್.ಮಲ್ಲಣ್ಣ, ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ(ಜಯಕವಿ) ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೀಬೋರ್ಡ್ ವಾದಕ ಗಣೇಶ್‌ಭಟ್, ಹಿನ್ನೆಲೆಗಾಯಕ ಬಿ.ಎಸ್.ಜಯರಾಮ್ ರಾಜು ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ ವಿ.ಬೈರಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ನಾ.ದಾಮೋದರ ಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ, ಹಿರಿಯ ಗಾಯಕ ಶ್ರೀನಗರ ಶ್ರೀನಿವಾಸ್ ಉಡುಪ, ಪರಿಷತ್‌ನ ಉಪಾಧ್ಯಕ್ಷ ಎಸ್.ಗಂಗಾಧರಪ್ಪ, ಕಾರ್ಯದರ್ಶಿ ಸಿರಿ ಬಾಬು ಸೇರಿದಂತೆ ಇತರರಿದ್ದರು. ಹಿರಿಯ ಗಾಯಕರಾದ ಮೈಸೂರು ಜಯರಾಂ, ಪ್ರೊ.ಎ.ಡಿ.ಶ್ರೀನಿವಾಸ್, ಎನ್.ಬೆಟ್ಟೇ ಗೌಡ, ರಾಜೇಶ್ ಪಡಿಯಾರ್, ಡೇವಿಡ್, ಡಾ.ವೈ.ಡಿ.ರಾಜಣ್ಣ, ಇಂದ್ರಾಣಿ ಅನಂತ ರಾಮ್, ರಶ್ಮಿ ಚಿಕ್ಕಮಗಳೂರು, ಸಿಂಚನ, ಶ್ರೀಧರ್, ಜೈರಾಜ್, ರವಿರಾಜ್ ಹಾಸು, ದೀಪಕ್, ಇಂದುಶೇಖರ್, ಪ್ರದೀಪ್‌ಕಿಗ್ಗಲ್, ರೋಶನ್ ಸೂರ್ಯ, ವಿನ್ಸೆಂಟ್, ಗೌರವ್ ಸುಧಾ ಮುರಳಿ ನಿರೂಪಿಸಿದರು.

ಮೂರು ಹೆಣ್ಣು ಕರುಗಳಿಗೆ ಜನ್ಮ ನೀಡಿದ ಹಸು

ಪಾಂಡವಪುರ ಬಳಿ ವಿಸ್ಮಯ



ಪಾಂಡವಪುರದ ಡಿಂಕಾ ಗ್ರಾಮದಲ್ಲಿ ಮೂರು ಹೆಣ್ಣು ಕರುಗಳಿಗೆ ಜನ್ಮ ನೀಡಿದ ಹಸು ಹಾಗು ಮೂರು ಕರುಗಳು

ಪಾಂಡವಪುರ,ನ.28– ತಾಲೂಕಿನ ಡಿಂಕಾ ಗ್ರಾಮದಲ್ಲಿ ಹಸುವೊಂದು ಮೂರು ಹೆಣ್ಣು ಕರುಗಳಿಗೆ ಜನ್ಮ ನೀಡಿರುವ ವಿಸ್ಮಯಕಾರಿ ಘಟನೆ ಗುರುವಾರ ನಡೆದಿದೆ.

ಡಿಂಕಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಉಪಾಧ್ಯಕ್ಷ, ರೈತ ಶಿವಪ್ಪ ಎಂಬುವರಿಗೆ ಸೇರಿದ ಹಸುವೇ ಮೂರು ಕರುಗಳಿಗೆ ಜನ್ಮ ನೀಡಿದೆ.

ಶಿವಪ್ಪ ಎಂಬುವರಿಗೆ ಸೇರಿದ ಹಸು ಇದು ಐದನೇ ಸೂಲು (ಐದನೇ ಬಾರಿಗೆ ಕರು ಹಾಕಿರುವುದು)ನಲ್ಲಿ ಮೂರು ಕರುಗಳಿಗೆ ಜನ್ಮ ನೀಡಿದ್ದು, ಮೂರು ಕರುಗಳು ಸಹ ಆರೋಗ್ಯವಾಗಿವೆ. ವಿಶೇಷವೆಂದರೆ ಮೂರು ಕರುಗಳು ಸಹ ಹೆಣ್ಣು ಕರುಗಳಾಗಿದ್ದು ಇದೊಂದು ವಿಶೇಷ, ವಿಸ್ಮಯಕಾರಿ ಪ್ರಕರಣವಾಗಿದೆ. ಯಾವುದೇ ಹಸುಗಳು ಒಂದು ಅಥವಾ ಎರಡು ಕರುಗಳನ್ನು ಹಾಕುವುದು ಸಾಮಾನ್ಯ, ಮೂರು ಕರುಗಳಿಗೆ ಜನ್ಮ ನೀಡಿರುವುದು ವಿಶೇಷವಾಗಿದೆ. ಹಸು ಮೂರು ಕರುಗಳನ್ನು ಹಾಕಿರುವುದನ್ನು ನೋಡಲು ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿ ವೀಕ್ಷಣೆ ಮಾಡುತ್ತಿದ್ದಾರೆ. ಅಲ್ಲದೆ ಪಶು ಸಂಗೋಪನೆ ಇಲಾಖೆಯ ಅಧಿಕಾರಿಗಳು ಸಹ ಭೇಟಿಕೊಟ್ಟು ವೀಕ್ಷಣೆ ಮಾಡಿ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಬಾರ್ ಅಂಡ್ ರೆಸ್ಟೋರೆಂಟ್ ಲೈಸೆನ್ಸ್‌ಗೆ 20 ಲಕ್ಷ ಲಂಚ

ಅಬಕಾರಿ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಎಸ್ಪಿಗೆ ಕಾಂಗ್ರೆಸ್ ಕಾರ್ಯಕರ್ತ ದೂರು

ಮೃಷ್ಟಾನ್ನ ಬೇಡ, ಗೃಹಲಕ್ಷ್ಮಿಯನ್ನಾದರೂ ಕೊಡು; ಲಂಚಕ್ಕೆ ಹೊಸ ನಮೂನೆ ಬೇಡಿಕೆ

ಮಂಡ್ಯ, ನ.28– ಬಾರ್ ಅಂಡ್ ರೆಸ್ಟೋರೆಂಟ್ ಪರವಾನಗಿ ನೀಡಲು ಅಬಕಾರಿ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟ ಆರೋಪ ಕೇಳಿ ಬಂದಿದ್ದು, ಅಬಕಾರಿ ಇಲಾಖೆಯ ಜಿಲ್ಲಾ ಅಧಿಕಾರಿ ರವಿಶಂಕರ್ ಹಾಗೂ ಇನ್ಸ್‌ಪೆಕ್ಟರ್ ಶಿವಶಂಕರ್ ವಿರುದ್ಧ ಬಾರ್ ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಲೋಕಾಯುಕ್ತ ಎಸ್ಪಿಗೆ ದೂರು ಸಲ್ಲಿಸಿದ್ದಾರೆ.

ದೂರು ಸಲ್ಲಿಕೆ ವೇಳೆ ಆಡಿಯೋ ಮತ್ತು ವಿಡಿಯೋ ಸಾಕ್ಷ್ಯವನ್ನು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಅಬಕಾರಿ ಲೈಸೆನ್ಸ್ ಪಡೆಯಲು ಹಾಗೂ ಬಾರ್ ನಡೆಸಲು ಹಣ ನೀಡಬೇಕೆಂದು ಬಾರ್ ಮಾಲೀಕರು ಇತ್ತೀಚೆಗೆ ಇಲಾಖೆಯ ವಿರುದ್ಧವೇ ಭ್ರಷ್ಟಾಚಾರದ ಆರೋಪ ಮಾಡಿ, ರಾಜ್ಯಾದ್ಯಂತ ಮದ್ಯದಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸುವುದಾಗಿ ಹೇಳಿಕೆ ನೀಡಿದ್ದ ಬೆನ್ನಲ್ಲೇ ಇದೀಗ ಮಂಡ್ಯ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರದ ಕರ್ಮಕಾಂಡ ಬಯಲಾಗಿರುವುದು ಇಲಾಖೆಯಲ್ಲಿನ ಭ್ರಷ್ಟತೆಯನ್ನು ಬಟಾಬಯಲು ಮಾಡಿದೆ.

ಮದ್ದೂರು ತಾಲೂಕಿನ ಚಂದೂಪುರ



ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತ ಪುನೀತ್ ಎಂಬುವವರು ಸಿಎಲ್ 7 ಪರವಾನಗಿ ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ತಮ್ಮ ತಾಯಿ ಲಕ್ಷ್ಮಮ್ಮರ ಹೆಸರಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದರು. ಆದರೆ ಅಬಕಾರಿ ಇಲಾಖೆ ಅಧಿಕಾರಿಗಳು ಅರ್ಜಿಯನ್ನು ತಿರಸ್ಕರಿಸಿದ್ದರು. ಅನಂತರ ಖುದ್ದಾಗಿ ಇಲಾಖೆಗೆ ತೆರಳಿ ಅರ್ಜಿ ಸಲ್ಲಿಕೆ ಮಾಡಿದ್ದು, ಈ ವೇಳೆ 40 ಲಕ್ಷ ರೂ ಲಂಚ ನೀಡಲು ಅಧಿಕಾರಿಗಳು ಬೇಡಿಕೆ ಇಟ್ಟಿದ್ದು, ಕೊನೆಯಲ್ಲಿ 20 ಲಕ್ಷವನ್ನಾದರೂ ನೀಡಬೇಕು ಎಂದು ಒತ್ತಡ ಹಾಕಿದ್ದಾರೆಂಬ ಆರೋಪ ಕೇಳಿ ಬಂದಿದೆ. ಇದರಿಂದ ಬೇಸತ್ತ ಪುನೀತ್ ಅಬಕಾರಿ ಇಲಾಖೆಯ ಜಿಲ್ಲಾಧಿಕಾರಿ ರವಿಶಂಕರ್ ಹಾಗೂ ಇನ್ಸ್‌ಪೆಕ್ಟರ್ ಶಿವಶಂಕರ್ ವಿರುದ್ಧ ಲೋಕಾಯುಕ್ತ ಎಸ್ಪಿಗೆ ದೂರು ಸಲ್ಲಿಸಿದ್ದಾರೆ.

ದೂರುದಾರ ಪುನೀತ್ ನೀಡಿರುವ ದೂರಿನಲ್ಲಿ ಮದ್ದೂರು ತಾಲೂಕು ಚಂದೂಪುರ ಬಳಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ತಾಯಿ ಹೆಸರಿನಲ್ಲಿ ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದೆ. ಆದರೆ ಇಲಾಖೆಯ ಅಧಿಕಾರಿಗಳ ಅನುಮತಿ ಪಡೆದು ಅರ್ಜಿ ಸಲ್ಲಿಸಿಲ್ಲ ಎಂದು ತಿರಸ್ಕೃತ ಮಾಡಿದ್ದರು. ಅನಂತರ ಖುದ್ದಾಗಿ ಅರ್ಜಿ ಸಲ್ಲಿಕೆ ಮಾಡಿದ್ದೆ. ಇನ್ಸ್‌ಪೆಕ್ಟರ್ ಶಿವಶಂಕರ್ ಅವರು, ಹಿರಿಯ ಅಧಿಕಾರಿಗಳಿಗೆ ಮಾಮೂಲು ನೀಡಬೇಕಾಗುತ್ತದೆ ಎಂದು ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಿದ್ದಾರೆ.

ಅಬಕಾರಿ ಜಿಲ್ಲಾಧಿಕಾರಿ ರವಿಶಂಕರ್ ಸಿಬ್ಬಂದಿಗೆ ಏನು ನೀಡಬೇಕು ಅದನ್ನು ನೀಡಿ ಎಂದು ನಮಗೆ ತಿಳಿಸಿದ್ದು, ಅನಂತರ ಅಧಿಕಾರಿಗಳು 40 ಲಕ್ಷ ಹಣಕ್ಕಾಗಿ ಬೇಡಿಕೆ ಇಟ್ಟರು. ಅದಕ್ಕೆ ಒಪ್ಪದಿದ್ದಾಗ 30 ಲಕ್ಷ ಆನಂತರ 20 ಲಕ್ಷ ನೀಡು ಎಂದು ಹೇಳಿದ್ದರು. ಇದಕ್ಕೆ ಒಪ್ಪದಿದ್ದಾಗ ನನ್ನ ಅರ್ಜಿಯನ್ನು ತಿರಸ್ಕಾರ ಮಾಡಿದ್ದಾರೆ. ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಆಡಿಯೋದಲ್ಲೇನಿದೆ?: ಈಗಾಗಲೇ ಹೇಳಿದಂತೆ 40 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದ ರವಿಶಂಕರ್ ವೀಡಿಯೋದಲ್ಲಿ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗನ ವಿಚಾರ ಪ್ರಸ್ತಾಪಿಸಿ, ಅಬಕಾರಿ ಇಲಾಖೆಯಲ್ಲಿ ಲೈಸೆನ್ಸ್ ಕೊಡುವುದಕ್ಕೆ ಹಣ ನೀಡಬೇಕೆಂದು ಹೇಳುತ್ತಾ ಮೊಬೈಲ್ ಆಫ್ ಮಾಡಿಸಿ ಲಂಚ ಕೇಳಿದ್ದರಂತೆ. ಪ್ರಾರಂಭದಲ್ಲಿ 40 ಲಕ್ಷ, ಕೊನೆಗೆ 20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರೆಂದು ಲೋಕಾಯುಕ್ತಕ್ಕೆ ಸಲ್ಲಿಸಿರುವ ದೂರಿನಲ್ಲಿ ಗಂಭೀರ ಆರೋಪ ಮಾಡಲಾಗಿದೆ.

ಮೃಷ್ಟಾನ್ನ ಬೇಡ, ಗೃಹಲಕ್ಷ್ಮೀ ಆದರೂ ಕೊಡು ಎಂದು ಬೇಡಿಕೆ ಇಟ್ಟಿದ್ದು, ಹಣದಲ್ಲಿ ಅಧೀನ ಅಧಿಕಾರಿಗಳು, ಸಿಬ್ಬಂದಿಗೂ ಕೊಡಬೇಕು. ಇಲ್ಲ ಅಂದರೆ ನಾನೇ ಪಾರ್ಟ್ನರ್ ಅಂದುಕೊಳ್ತಾರೆ ಎಂದು ಅಬಕಾರಿ ಡಿಸಿ ಹೇಳಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಗಾಯಕ ಕಿಕ್ಕೇರಿ ಕೃಷ್ಣಮೂರ್ತಿಗೆ ಆಸ್ಟ್ರೇಲಿಯಾದಲ್ಲಿ ಸನ್ಮಾನ



ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅವರಿಗೆ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕಿಕ್ಕೇರಿ ಕನ್ನಡಿಗರ ಬಳಗದಿಂದ ಗೌರವಿಸಲಾಯಿತು. ಕಿಕ್ಕೇರಿ ಮೂಲದ ಕೊರಟಿಕೆರೆ ಜಯಲಕ್ಷ್ಮಿ, ರವಿ ಅತ್ರೇಯಸ್, ಮಂಜಣ್ಣ ಅಂಗೀರಸ್, ಅನಿಲ್‌ಕುಮಾರ್ ಭಾಗವಹಿಸಿದ್ದರು.

ನಾಡು, ನುಡಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಪ್ರತಿಯೊಬ್ಬರ ಕರ್ತವ್ಯ

ಜಿಲ್ಲಾಧಿಕಾರಿ ಡಾ.ಕುಮಾರ ಅಭಿಮತ



ಮಂಡ್ಯ, ನ.28– ಸಾಹಿತ್ಯ ಸಮ್ಮೇಳನ ನಾಡು, ನುಡಿಯ ಅಭಿಮಾನದ ಪ್ರತೀಕವಾಗಿದೆ. ಕನ್ನಡ ನಾಡು, ನುಡಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಯಾವುದೇ ಗೊಂದಲವಿಲ್ಲದೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸೋಣ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಕರೆ ನೀಡಿದರು.

ಅವರು ಇಂದು ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸುವ ಸಂಬಂಧ ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಡಿಸೆಂಬರ್ 20, 21 ಹಾಗೂ 22 ರಂದು 3 ದಿನಗಳ ಕಾಲ ನಡೆಯಲಿದೆ. ಇದು ಕೇವಲ ಸರ್ಕಾರ, ಸಾಹಿತ್ಯ ಪರಿಷತ್ ಹಾಗೂ ಜಿಲ್ಲಾಡಳಿತದ ಹಬ್ಬವಾಗಿರದೆ ಪ್ರತಿ ಮನೆಯ ಹಬ್ಬವಾಗಿದೆ. ನಮ್ಮೆಲ್ಲರ ಮನೆಯ ಹಬ್ಬವನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರ ಸಹಕಾರ ಮುಖ್ಯ ಎಂದರು.

ಗೋಷ್ಠಿಗೆ ಸಲಹೆ: ಸಮ್ಮೇಳನದಲ್ಲಿ ನಡೆಯುವ ಗೋಷ್ಠಿಗೆ ಸಂಬಂಧಿಸಿದಂತೆ ಸಮಿತಿಗಳು ಹಾಗೂ ಅನೇಕ ಸಾಹಿತಿಗಳು ಹಲವಾರು ಸಲಹೆಗಳನ್ನು ನೀಡಿದ್ದು, ಸಮ್ಮೇಳನದಲ್ಲಿ ಹೆಣ್ಣು ಭ್ರೂಣ ಹತ್ಯೆ, ಬಾಲ್ಯವಿವಾಹದ ಬಗ್ಗೆ ಅರಿವು ಮೂಡಿಸುವ ಗೋಷ್ಠಿ, ಮಕ್ಕಳ ಸಾಹಿತ್ಯ ಹಾಗೂ ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾದ್ದರಿಂದ ಕೃಷಿಯ ತಾಂತ್ರಿಕತೆಯನ್ನೊಳಗೊಂಡಂತೆ ರೈತರಿಗೆ ಅನುಕೂಲವಾಗುವ ಮಾಹಿತಿಯ ಬಗ್ಗೆ ವಿಚಾರಗೋಷ್ಠಿಯನ್ನು ಏರ್ಪಡಿಸುವ ಸಂಬಂಧ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಿಗೆ ತಿಳಿಸಲಾಗಿದೆ ಎಂದರು.

ಮೆರವಣಿಗೆ ಸಿದ್ಧತೆ: ಸಮ್ಮೇಳನದಲ್ಲಿ ಮೆರವಣಿಗೆಗೆ ಸಂಬಂಧಿಸಿದಂತೆ ಅನೇಕ ಸಿದ್ಧತೆಗಳು ನಡೆಯುತ್ತಿದ್ದು, ವಿವಿಧ ಜಿಲ್ಲೆಗಳಿಂದ ಸಾಕಷ್ಟು ಕಲಾತಂಡಗಳು ಆಗಮಿಸಲಿವೆ. ಸಮ್ಮೇಳನದ ಮೊದಲ ದಿನವಾದ ಡಿಸೆಂಬರ್ 20 ರಂದು ಬೆಳಿಗ್ಗೆ 7 ಗಂಟೆಗೆ ಮೆರವಣಿಗೆಯು ನಗರದಲ್ಲಿ ಶುರುವಾಗಿ ಬೆಳಿಗ್ಗೆ 10 ಗಂಟೆಗೆ ವೇದಿ ಕೆಯ ಬಳಿ ಸಮಾವೇಶಗೊಳ್ಳಲಿದೆ ಎಂದರು.

ಸಾಧಕರಿಗೆ ಸನ್ಮಾನ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವಾಗಿರುವುದರಿಂದ ಕರ್ನಾಟಕದ, ಬೇರೆ ರಾಜ್ಯ ಹಾಗೂ ಬೇರೆ ದೇಶದಲ್ಲಿರುವ ಅನೇಕ ಕನ್ನಡಿಗ ಸಾಧಕರುಗಳನ್ನು ಗುರುತಿಸಿ 87 ಜನ ಸಾಧಕರಿಗೆ ಸನ್ಮಾನಿಸಿ, ಗೌರವಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಕ್ಕೆ ಈಗಾಗಲೇ ಚಿಂತನೆ ನಡೆಸಲಾಗಿದೆ ಎಂದರು.

ನೋಂದಣಿ ಪ್ರಕ್ರಿಯೆ: ಸಮ್ಮೇಳನಕ್ಕೆ ಆಗಮಿಸುವವರಿಗೆ ಆನ್‌ಲೈನ್ ನೋಂದಣಿ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಜಿಲ್ಲೆಯಲ್ಲಿ ಪ್ರಮುಖ ಬೆಳೆಯಾದ ಕಬ್ಬಿನಿಂದ ತಯಾರಿಸಿದ ಅರ್ಧ ಕೆಜಿ ಬೆಲ್ಲವನ್ನು ನೋಂದಣಿಯಾದ ಪ್ರತಿನಿಧಿಗಳಿಗೆ ನೀಡಲಾಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಕಸಾಪ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ, ಗೌರವ ಕಾರ್ಯದರ್ಶಿ ಹರ್ಷ ಪಣ್ಣೆದೊಡ್ಡಿ, ಕೃಷ್ಣೇಗೌಡ ಹುಸ್ಕೂರು, ಕೋಶಾಧ್ಯಕ್ಷ ಅಪ್ಪಾಜಪ್ಪ, ಚಂದ್ರುಲಿಂಗು, ಧನಂಜಯ, ಭಾಸ್ಕರ್, ಸುಜಾತ ಕೃಷ್ಣ ಸೇರಿದಂತೆ ವಿವಿಧ ಸಂಘ ಸಂಸ್ಥೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಿ.4 ರಂದು ವಿವಿಧ ಇಲಾಖೆಗಳ ಕೆಲಸ ಕಾರ್ಯಗಳ ಕುರಿತು ಸಭೆ

ಮಂಡ್ಯ,ನ.28– ಮಂಡ್ಯ ನಗರಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಲು ವಿವಿಧ ಇಲಾಖೆಗಳಾದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕೊಳಗೇರಿ ಅಭಿವೃದ್ಧಿ ಮಂಡಳಿ, ನಗರಾಭಿವೃದ್ಧಿ ಇಲಾಖೆ ಮತ್ತು ಅರಣ್ಯ ಇಲಾಖೆಗಳಿಂದ ಕೈಗೊಳ್ಳಬೇಕಾದ ಕೆಲಸ ಕಾರ್ಯಗಳ ಕುರಿತು ಚರ್ಚಿಸಲು ಸಭೆಯನ್ನು ಡಿ.4 ರಂದು ಬೆಳಿಗ್ಗೆ 11 ಗಂಟೆಗೆ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಒಂದನೇ ಪುಟದಿಂದ

ಮುಖ್ಯಮಂತ್ರಿಯೇ ಚಾನ್ಸಲರ್

ನಿಧಿಗೆ ಹೋಗುತ್ತದೆ. ಇದು ಕಾರ್ಪಸ್ ಅನ್ನು ದೊಡ್ಡದಾಗಿಸಲು ಸಾಧ್ಯವಾಗುತ್ತದೆ. ಈಗ ಕಾರ್ಪಸ್ ಫಂಡ್ ವಾರ್ಷಿಕವಾಗಿ 80 ಕೋಟಿ ರೂ. ಸಂಗ್ರಹವಾಗುತ್ತಿದ್ದು, ಇನ್ನು ಮುಂದೆ ವಾರ್ಷಿಕ 200 ಕೋಟಿ ರೂ.ಗೆ ಹೆಚ್ಚಾಗಲಿದೆ ಎಂದರು.

ಕರ್ನಾಟಕ ಅಂತರ್ಜಲ ನಿಯಮಾವಳಿ ಮತ್ತು ಅಭಿವೃದ್ಧಿ ನಿಯಂತ್ರಣ ಮತ್ತು ನಿರ್ವಹಣೆ ತಿದ್ದುಪಡಿ ವಿಧೇಯಕಕ್ಕೂ ಇಂದು ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಮಸೂದೆಯು ತೆರೆದ ಬೋರ್‌ವೆಲ್‌ಗಳ ಮೇಲೆ ನಿಗಾ ಇಡುವ ಗುರಿಯನ್ನು ಹೊಂದಿದೆ. ಕೊಳವೆ ಬಾವಿ ನಿಷ್ಕ್ರಿಯ ಆಗಿದ್ದರೆ ಮುಚ್ಚುವುದು ಕಡ್ಡಾಯ. ಶಿಕ್ಷೆ ಹಾಗೂ ದಂಡ ವಿಧಿಸಲು ವಿಧೇಯಕದಲ್ಲಿ ಅವಕಾಶವಿದೆ ಎಂದರು.

ಪ್ರವಾಸೋದ್ಯಮಕ್ಕೆ ಕಾಯಕಲ್ಪ

ಪಡೆದು ಕಾಮಗಾರಿ ನಡೆಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು. ಸಭೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ವಿಶೇಷಾಧಿಕಾರಿ ಬಿ.ಎನ್.ಕೃಷ್ಣಯ್ಯ, ಪುರಾತತ್ವ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ರಾಘವೇಂದ್ರ, ಶ್ರೀ ರಂಗನಾಥಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಉಮಾ, ಶ್ರೀನಿಮಿಷಾಂಭ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಶ್ರೀರಂಗಪಟ್ಟಣ ಪುರಸಭೆ ಮುಖ್ಯಾಧಿಕಾರಿ ರಾಜಣ್ಣ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮಾಜಿ ಆಯುಕ್ತ ಕಾಂತರಾಜು ವಿಚಾರಣೆ

ಭೂಮಿ ಪರಿಹಾರದ ಬಗ್ಗೆ ವಿಚಾರಣೆ ನಡೆಸಿದರು ಎಂದರು. 2017, ಡಿಸೆಂಬರ್‌ನಲ್ಲಿ ನಡೆದ ಪ್ರಾಧಿಕಾರದ ಸಭೆಯಲ್ಲಿ ಪಾರ್ವತಿ ಅವರಿಗೆ ಅಭಿವೃದ್ಧಿಪಡಿಸದ ಭೂಮಿ ನೀಡಲು ತೆಗೆದುಕೊಂಡ ತೀರ್ಮಾನದ ಬಗ್ಗೆ ಮಾಹಿತಿ ಕೇಳಿದರು. ಅಂದಿನ ಸಭೆಯಲ್ಲಿ ಏನು ನಿರ್ಧಾರ ಮಾಡಲಾಯಿತು ಎಂಬ ಬಗ್ಗೆ ಕಡತದಲ್ಲಿರುವ ಮಾಹಿತಿಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ ಎಂದು ತಿಳಿಸಿದರು.

ಲೋಕಾಯುಕ್ತರ ತನಿಖೆ ಪ್ರಗತಿಯಲ್ಲಿರುವ ಕಾರಣ ನಾನು ಹೆಚ್ಚೇನು ಹೇಳುವುದಿಲ್ಲ. ಅಧಿಕಾರಿಯಾಗಿ ನನಗೂ ಕೆಲವು ನಿರ್ಬಂಧಗಳಿರುವ ಕಾರಣ ಹೆಚ್ಚಿನ ಮಾಹಿತಿ ಕೊಡಲು ಸಾಧ್ಯವಿಲ್ಲ ಎಂದು ಕಾಂತರಾಜು ಸ್ಪಷ್ಟಪಡಿಸಿದರು.

ನಾಳೆ ಮುಡಾ ಸಾಮಾನ್ಯ ಸಭೆ

ಸಾರ್ವಜನಿಕ ಕೆಲಸಗಳನ್ನು ಪುನಾರಂಭಿಸುವ ಕುರಿತಂತೆಯೂ ಸಭೆಯಲ್ಲಿ ಚರ್ಚಿಸಲಾಗುತ್ತದೆ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ. ಹೊಸ ಬಡಾವಣೆಗಳ ನಕ್ಷೆ ಅನುಮೋದನೆ ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳ ನಿವೇಶನ ಬಿಡುಗಡೆ, ಭೂ ಉಪಯೋಗ ಬದಲಾವಣೆ, ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡುವುದೂ ಸೇರಿದಂತೆ ಹಲವು ವಿಷಯಗಳು ಶನಿವಾರದ ಸಾಮಾನ್ಯ ಸಭೆ ಮುಂದೆ ಬರಲಿದ್ದು, ಚರ್ಚಿಸಿ ಮಹತ್ವದ ನಿರ್ಣಯ ಕೈಗೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

240 ಬಡಾವಣೆ ಹಸ್ತಾಂತರ: ಈಗಾಗಲೇ ಮೂಲ ಸೌಕರ್ಯಗಳೊಂದಿಗೆ ಶೇ.100ರಷ್ಟು ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳನ್ನು ನಾಳೆ(ನ.29) ಮೈಸೂರು ಮಹಾನಗರ ಪಾಲಿಕೆ, ಹೂಟಗಳ್ಳಿ, ಬೋಗಾದಿ, ಶ್ರೀರಾಂಪುರ, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ, ನಗರ ಸಭೆಗಳಿಗೆ 240 ವಸತಿ ಬಡಾವಣೆಗಳನ್ನು ಹಸ್ತಾಂತರಿಸಲಾಗುವುದು ಎಂದು ಮುಡಾ ಆಯುಕ್ತ ಎ.ಎನ್.ರಘುನಂದನ್ ತಿಳಿಸಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರ ನಿರ್ದೇಶನದಂತೆ ಮುಡಾ ವ್ಯಾಪ್ತಿಯ 940 ಬಡಾವಣೆಗಳನ್ನು ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭಿಸಿದ್ದು, ಅವುಗಳ ಖಾತೆ, ಪ್ಲಾನ್ ಅಪ್ರೂವಲ್, ಸಿಡಿ ಪಟ್ಟಿಗಳನ್ನು ಸಿದ್ಧಪಡಿಸಲಾಗಿದ್ದು, ಮೊದಲ ಹಂತದಲ್ಲಿ 240 ಬಡಾವಣೆಗಳ ಹಸ್ತಾಂತರಕ್ಕೆ ಸರ್ಕಾರ ಅನುಮತಿ ನೀಡಿರುವುದರಿಂದ ನಾಳೆ (ಶುಕ್ರವಾರ) ಅಧಿಕೃತವಾಗಿ ಪ್ರಕ್ರಿಯೆ ನಡೆಯಲಿದೆ ಎಂದು ಅವರು ತಿಳಿಸಿದರು.

ಪರಿಸ್ಥಿತಿ ಬಂದಿಲ್ಲ, ಬರುವುದೂ ಇಲ್ಲ

ಉನ್ನತ ಶಿಕ್ಷಣ ಇಲಾಖೆ ಸಚಿವನಾಗಿ ಕೆಲಸ ಮಾಡಿರುವ ಅನುಭವವಿದೆ ಎಂದು ಹೇಳಿದರು. ನಮ್ಮ ತಂದೆ ಪಟೇಲರ ವಿರುದ್ಧ ಯಾವುದೇ ಪ್ರಕರಣವಿರಲಿಲ್ಲ. ನನ್ನ ತಂದೆ ಪಟೇಲ ರಾದರೂ ಪೊಲೀಸ್ ಠಾಣೆ ಮೆಟ್ಟಿಲೇರಿರಲಿಲ್ಲ. ನಾನು ಸಾರ್ವಜನಿಕ ಬದುಕಿಗೆ ಬಂದು 54 ವರ್ಷವಾಗಿದ್ದು, ಈತನಕ ಯಾರೂ ಕೂಡ ನನ್ನ ವಿರುದ್ಧ ಯಾವುದೇ ದೂರು ನೀಡಿಲ್ಲ. ರಾಜಕೀಯವಾಗಿ ಕೂಡ ಯಾವುದೇ ಆಪಾದನೆ ಮಾಡಿಲ್ಲ ಎಂದು ಜಿ.ಟಿ.ದೇವೇಗೌಡರು ತಮ್ಮ ಪೂರ್ವಾಶ್ರಮದ ಬಗ್ಗೆ ವಿವರ ನೀಡಿದರು. ನನ್ನ ಮಗ ಕೂಡ 2010ರಿಂದ ಸಾರ್ವಜನಿಕರ ಸೇವೆಯಲ್ಲಿ ಇದ್ದಾನೆ. ಆತನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ. ನಾವು ಎಂದೂ ದಬ್ಬಾಳಿಕೆ ಮಾಡಿಲ್ಲ, ಯಾರನ್ನು ಏಕ ವಚನದಲ್ಲಿ ನಿಂದನೆ ಮಾಡಿಲ್ಲ. ಇದರಿಂದ ಸ್ವತಃ ಸಿದ್ದರಾಮಯ್ಯ ಅವರೇ ನನ್ನನ್ನು ಪ್ರಶಂಸಿಸಿದ್ದಾರೆ ಎಂದು ಹೇಳಿದರು.

ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ

ಏಪ್ರಿಲ್ 17ರ ತನಕ ಪರೀಕ್ಷೆ ನಡೆಯಲಿದೆ ಎಂದು ತಾತ್ಕಾಲಿಕ ವೇಳಾಪಟ್ಟಿಯಲ್ಲಿ ಕೆಎಸ್‌ಇಎಬಿ ತಿಳಿಸಿದೆ.

ಮೊದಲ ಭಾಷೆ ಎಂದರೆ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಇಂಗ್ಲಿಷ್ (ಎನ್‌ಸಿಆರ್‌ಟಿ), ಸಂಸ್ಕೃತ ಭಾಷೆಗಳು. ದ್ವಿತೀಯ ಭಾಷೆ ಎಂದರೆ ಇಂಗ್ಲಿಷ್, ಕನ್ನಡ ಭಾಷೆಗಳು. ತೃತೀಯ ಭಾಷೆ ಎಂದರೆ ಹಿಂದಿ, ಕನ್ನಡ, ಇಂಗ್ಲಿಷ್, ಪರ್ಷಿಯನ್, ಅರೇಬಿಕ್, ತುಳು, ಉರ್ದು, ಸಂಸ್ಕೃತ, ಕೊಂಕಣಿ, ಎನ್‌ಎಸ್‌ಕ್ಯೂಎಫ್ ವಿಷಯಗಳ ಪರೀಕ್ಷೆ ನಡೆಯಲಿದೆ.

ತಾತ್ಕಾಲಿಕ ವೇಳಾಪಟ್ಟಿ ವಿವರ: 2025ರ ಮಾರ್ಚ್ 24ರ ಸೋಮವಾರ–ಗಣಿತ ಶಾಸ್ತ್ರ, ಮಾರ್ಚ್ 28ರ ಶುಕ್ರವಾರ – ಇಂಗ್ಲಿಷ್ (ದ್ವಿತೀಯ ಭಾಷೆ), ಏಪ್ರಿಲ್ 1ರ ಮಂಗಳವಾರ – ವಿಜ್ಞಾನ, ಏಪ್ರಿಲ್ 4ರ ಶುಕ್ರವಾರ – ಸಮಾಜ ಶಾಸ್ತ್ರ, ಏಪ್ರಿಲ್ 7ರ ಸೋಮವಾರ–ಕನ್ನಡ (ಮೊದಲ ಭಾಷೆ), ಏಪ್ರಿಲ್ 11ರ ಶುಕ್ರವಾರ – ಹಿಂದಿ (ತೃತೀಯ ಭಾಷೆ) ಪರೀಕ್ಷೆಗಳು ನಡೆಯಲಿವೆ ಎಂದುಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ತಿಳಿಸಿದೆ. ಕರ್ನಾಟಕದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಕಾಯಂಗೊಳಿಸುವ ವಿಚಾರವೂ ನಿನ್ನೆ ನಡೆದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಸಭೆಯಲ್ಲಿ ಚರ್ಚೆಗೆ ಒಳಗಾಗಿದೆ. ಇದಲ್ಲದೆ, ಪರೀಕ್ಷಾ ಸಿದ್ಧತೆ ವಿಚಾರವೂ ಚರ್ಚೆಗೆ ಬಂದಿದ್ದು, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಡಿಸೆಂಬರ್ ಮೊದಲು ಇಲ್ಲವೇ ಎರಡನೇ ವಾರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು ಅಧಿಕೃತ ವೇಳಾಪಟ್ಟಿ ಬಿಡುಗಡೆ ಮಾಡುವ ಸಾಧ್ಯತೆ ಇದ್ದು, ಆಗ ಅಭ್ಯರ್ಥಿಗಳು ದಿನಾಂಕ, ಸಮಯ ಪರಿಶೀಲಿಸಬೇಕು. ಈಗ ಬಿಡುಗಡೆಯಾಗಿರುವುದು ತಾತ್ಕಾಲಿಕ ವೇಳಾಪಟ್ಟಿಯಷ್ಟೆ, ಇದು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಿದ್ಧತೆ ಅನುಕೂಲವಾಗಲಿ ಎಂದು ಪ್ರಕಟಿಸುವ ವೇಳಾಪಟ್ಟಿ ಎಂದು ಮೂಲಗಳು ತಿಳಿಸಿವೆ.

8 ಸಚಿವರಿಗೆ ಕೊಕ್ ಸಾಧ್ಯತೆ

ಇದರ ಬೆನ್ನಲ್ಲೇ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ವಿರುದ್ಧವೂ ಆರೋಪ ಕೇಳಿ ಬಂದಿದೆ. ಆದರೆ, ಇದರ ವಿರುದ್ಧ ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಹೋರಾಟವನ್ನು ನಡೆಸಿಲ್ಲ. ಆದರೆ ಈ ಭ್ರಷ್ಟಾಚಾರ ಆರೋಪವೂ ಆರ್.ಬಿ. ತಿಮ್ಮಾಪೂರ ಅವರಿಗೆ ಹಿನ್ನಡೆ ಆಗುವ ಸಾಧ್ಯತೆ ಅಲ್ಲಗಳೆಯುವ ಹಾಗಿಲ್ಲ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಬಗ್ಗೆಯೂ ಕೆಲವು ಶಾಸಕರಲ್ಲಿ ಅಸಮಾಧಾನ ಇದೆ. ಅಷ್ಟೇ ಅಲ್ಲದೆ ಈಡಿಗ ಸಮುದಾಯದ ಮಧು ಬಂಗಾರಪ್ಪ ಅವರ ಬದಲಾಗಿ ಮತ್ತೊಬ್ಬ ಈಡಿಗ ಸಮುದಾಯಕ ನಾಯಕರಿಗೆ ಸಚಿವ ಸ್ಥಾನ ಕೊಡುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಹೈಕಮಾಂಡ್ ಯಾವ ನಡೆಯನ್ನು ಅನುರಿಸುತ್ತದೆ ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಅದೇ ರೀತಿಯಲ್ಲಿ ಸಂಪುಟದಲ್ಲಿ ಮುಸ್ಲಿಂ ಶಾಸಕರೊಬ್ಬರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಹೀಂಖಾನ್‌ಗೆ ಕೊಕ್ ನೀಡುವ ಸಾಧ್ಯತೆ ಇದೆ. ರಹೀಂ ಖಾನ್ ಬದಲಾಗಿ ತನ್ವೀರ್ ಸೇಠ್ ಅಥವಾ ಎನ್.ಎ.ಹ್ಯಾರಿಸ್ ಅವರಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸುವ ಸಾಧ್ಯತೆ ಇದೆ ಎನ್ನ ಲಾಗುತ್ತಿದೆ. ಸದ್ಯ ಸಂಪುಟ ಪುನಾರಚನೆಯ ಮಾತುಗಳು ಕೇಳಿ ಬರುತ್ತಿದ್ದರೂ ಮುಂದಿನ ಬಜೆಟ್ ಅಧಿವೇಶನದ ಬಳಿಕವೇ ಈ ನಿಟ್ಟಿನಲ್ಲಿ ಪ್ರಕ್ರಿಯೆಗಳು ಶುರುವಾಗುವ ಸಾಧ್ಯತೆ ಇಲ್ಲ. ಸದ್ಯ ಸರ್ಕಾರ ಆಡಳಿತಕ್ಕೆ ಬಂದು ಒಂದೂವರೆ ವರ್ಷ ಆಗಿದೆ ಯಷ್ಟೇ, ಈ ಹಿನ್ನೆಲೆಯಲ್ಲಿ ಹೊಸ ವರ್ಷದ ಬಜೆಟ್ ಅಧಿವೇಶನ ಮುಗಿದ ಬಳಿಕ ಸಂಪುಟ ಪುನಾರಚನೆ ಪ್ರಯತ್ನಕ್ಕೆ ಹೈಕಮಾಂಡ್ ಮುಂದಾಗಲಿದೆ.

ಕೊಕ್ ಸಾಧ್ಯತೆ ಲಿಸ್ಟ್‌ನಲ್ಲಿ ಸಚಿವರು: ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವ), ರಹೀಂಖಾನ್ (ಪೌರಾಡಳಿತ ಮತ್ತು ಹಜ್), ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿವಾನಂದ ಪಾಟೀಲ್ (ಸಕ್ಕರೆ), ವೆಂಕಟೇಶ್ ಪಿರಿಯಾಪಟ್ಟಣ (ಪಶುಸಂಗೋಪನೆ), ಶರಣಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ), ಡಿ.ಸುಧಾಕರ್ (ಸಾಂಖ್ಯಿಕ ಮತ್ತು ಯೋಜನೆ), ಶರಣಬಸಪ್ಪ ದರ್ಶನಾ ಪುರ (ಸಣ್ಣ ಕೈಗಾರಿಕೆ, ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆ).

ಪ್ರಿಯಾಂಕಾ ಪ್ರಮಾಣ ವಚನ

ತನ್ನ ತಾಯಿ ಸೋನಿಯಾ ಗಾಂಧಿ, ಸಹೋದರ ರಾಹುಲ್ ಗಾಂಧಿ ಮತ್ತು ಪತಿ ರಾಬರ್ಟ್ ವಾದ್ರಾ ಅವರೊಂದಿಗೆ ಸಂಸತ್ ಭವನಕ್ಕೆ ಆಗಮಿಸಿದ್ದರು. ಅಲ್ಲದೆ, ಪ್ರಿಯಾಂಕಾ ಅವರ ಮಕ್ಕಳಿಬ್ಬರೂ ಸಂಸತ್‌ಗೆ ಆಗಮಿಸಿದ್ದರು. ಇತ್ತೀಚೆಗೆ ಪ್ರಕಟಗೊಂಡ ವಯನಾಡ್ ಲೋಕಸಭಾ ಉಪ ಚುನಾವಣೆಯಲ್ಲಿ 4 ಲಕ್ಷಕ್ಕೂ ಹೆಚ್ಚು ಮತಗಳ ದಾಖಲೆ ಅಂತರದಿಂದ ಗೆಲುವು ಸಾಧಿಸಿರುವ ಪ್ರಿಯಾಂಕಾ ಗಾಂಧಿ, ಆ ಮೂಲಕ ಪ್ರಪ್ರಥಮ ಬಾರಿಗೆ ಚುನಾಯಿತ ಪ್ರತಿನಿಧಿಯಾಗಿದ್ದಾರೆ. ಇಲ್ಲಿಯವರೆಗೆ ಪಕ್ಷ ಸಂಘಟನೆಯಲ್ಲಿ ತಮ್ಮ ಸಹೋದರ ರಾಹುಲ್ ಗಾಂಧಿಗೆ ನೆರವು ನೀಡುತ್ತಾ ಬಂದಿದ್ದ ಪ್ರಿಯಾಂಕಾ ಗಾಂಧಿ, ಇದೀಗ ಲೋಕಸಭೆಯಲ್ಲೂ ತಮ್ಮ ಸಹೋದರನಿಗೆ ಸಾಥ್ ನೀಡಲಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯ ಮನೆ ಮನೆಗೆ ತಲುಪಿಸಲು ಕರೆ

- ವಿಭಾಗ ಮಟ್ಟದ ಕಾಯಕ ಬಂಧುಗಳ ತರಬೇತುದಾರರ ತರಬೇತಿ ಕಾರ್ಯಕ್ರಮ
- ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಪ್ರತಿನಿಧಿಗಳು ಭಾಗಿ



ಮೈಸೂರಿನ ಓಡಿಪಿ ಸಂಸ್ಥೆಯಲ್ಲಿ ವಿಭಾಗ ಮಟ್ಟದ ಕಾಯಕ ಬಂಧುಗಳ ತರಬೇತುದಾರರ ತರಬೇತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಗ್ರಾಮ ಸ್ವರಾಜ್ ಅಭಿಯಾನ ರಾಜ್ಯ ಸಂಚಾಲಕಿ ಕೆ. ಚಿತ್ರಾವತಿ, ಆರ್‌ಎಲ್‌ಎಚ್‌ಪಿಯ ಸರಸ್ವತಿ, ಪ್ರತಿಭೆಯ ಸಂಸ್ಥೆಯ ಪ್ರಸನ್ನಮೂರ್ತಿ, ನಿಸರ್ಗದ ಪ್ರಭು, ಜನಜಾಗೃತಿ ಸಂಸ್ಥೆಯ ವಿ.ಎನ್. ಮೂರ್ತಿ, ಜನರಕ್ಷ ಸಂಸ್ಥೆಯ ಕೃಷ್ಣೇಗೌಡ, ಟಾರ್ಡೋ ಸಂಸ್ಥೆಯ ಡಾ.ಮೋಹನ್ ಕೋಟೆಕೆರೆ ಇದ್ದಾರೆ.

ಮೈಸೂರು, ನ.28– ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಮನೆ ಮನೆಗೆ ತಲುಪಿಸುವಂತೆ ಗ್ರಾಮ ಸ್ವರಾಜ್ ಅಭಿಯಾನದ ರಾಜ್ಯ ಸಂಚಾಲಕಿ ಕೆ.ಚಿತ್ರಾವತಿ ಕರೆ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತಾಲಯ, ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ನಾಗರಿಕ ಸಮಾಜ ಸೇವಾ ಸಂಸ್ಥೆಗಳ ಒಕ್ಕೂಟವಾದ ಗ್ರಾಮ ಸ್ವರಾಜ್ ಅಭಿಯಾನ– ಕರ್ನಾಟಕ ಸಂಯುಕ್ತವಾಗಿ ಬನ್ನಿಮಂಟಪದ ಓಡಿಪಿ ಸಂಸ್ಥೆಯಲ್ಲಿ ಏರ್ಪಡಿಸಿರುವ ವಿಭಾಗ ಮಟ್ಟದ ಕಾಯಕ ಬಂಧುಗಳ ತರಬೇತುದಾರರ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಜೀಂ ಪ್ರೇಮಜೀ ಅವರ ಕನಸಿನ ಕೂಸು ಈ ತರಬೇತಿ. ಅವರ ಆರ್ಥಿಕ ನೆರವಿನಿಂದ ರಾಜ್ಯಾದ್ಯಂತ ತರಬೇತಿ ನಡೆಸಲಾಗುತ್ತಿದೆ. ಆದ್ದರಿಂದ ಕಾಯಕ ಬಂಧುಗಳು ಆದಿವಾಸಿಗಳು, ವಿಕಲಚೇತನರು, ಹಿರಿಯ ನಾಗರಿಕರು ಸೇರಿದಂತೆ ಎಲ್ಲಾ ವರ್ಗದ ಜನತೆಗೆ ಯೋಜನೆಯನ್ನು ತಲುಪಿಸಬೇಕಾಗಿದೆ ಎಂದರು.

ಆರ್‌ಎಲ್‌ಎಚ್‌ಪಿ ಅಧ್ಯಕ್ಷೆ ಸರಸ್ವತಿ ಮಾತನಾಡಿ, ಒ ಯೋಜನೆ ಆರಂಭವಾಗಿ 19 ವರ್ಷಗಳು ಕಳೆದಿದ್ದರೂ ಕೂಡ ಎಷ್ಟೋ ಮಂದಿಗೆ ಸರಿಯಾದ ಮಾಹಿತಿಯೇ ಇಲ್ಲ. ಪ್ರತಿಯೊಬ್ಬರಿಗೂ ಬದುಕುವ ಹಕ್ಕು ಇರುವುದರಿಂದ ಜನ ಕೆಲಸಕ್ಕಾಗಿ ವಲಸೆ ಹೋಗದೆ ಇರುವ ಕಡೆಯೇ ಇದ್ದುಕೊಂಡು ಕೆಲಸ ಮಾಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ಆದ್ದರಿಂದ ಯೋಜನೆಯ ಲಾಭವನ್ನು ಮನೆಮನೆಗೆ ತಲುಪಿಸಿ, ಜನರ ಮನವೊಲಿಸಿ ಎಂದು ಅವರು ಸಲಹೆ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆ ಆರಂಭವಾದಾಗ ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಕರ್ನಾಟಕದ ಜೊತೆಗೆ ಪಕ್ಕದ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳು ಪೈಪೋಟಿ ನಡೆಸಿದ್ದವು. ಆದರೆ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದಾಗಿ ಜನ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ನಿರಾಸಕ್ತಿ ತೋರಿಸುತ್ತಿದ್ದಾರೆ. ಕನಿಷ್ಠ ಕೂಲಿಯೊಂದಿಗೆ ನೂರು ದಿನಗಳು ಉದ್ಯೋಗ ಸಿಗುವುದರಿಂದ ಕಾಯಕ ಬಂಧುಗಳು ಜನರಿಗೆ ಮನವರಿಕೆ ಮಾಡಿಕೊಡಬೇಕು. ಜೊತೆಗೆ ಸಮುದಾಯ, ವೈಯಕ್ತಿಕ ಕಾಮಗಾರಿಗಳಿಗೂ ಖಾತ್ರಿ ಯೋಜನೆಯ ಲಾಭ ಪಡೆಯಬಹುದು ಎಂಬುದನ್ನು ತಿಳಿಸಬೇಕು ಎಂದರು. ಮೈಸೂರು ಪ್ರತಿಭೆ ಸಂಸ್ಥೆಯ ನಿರ್ದೇಶಕ ಜಿ.ಪ್ರಸನ್ನಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿ, ಸುಮಾರು 60 ಸಭೆಗಳು, 50 ಆನ್ ಲೈನ್ ಸಭೆಗಳಲ್ಲಿ ವಿವರವಾಗಿ ಚರ್ಚಿಸಿದ ನಂತರ ಈ ಯೋಜನೆ ರೂಪಿಸಲಾಗಿದೆ. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಒಳಗೊಳ್ಳುವಿಕೆಯ ಮೂಲಕ ಉದ್ಯೋಗ ಖಾತ್ರಿ ಪ್ರಯೋಜನ ಪಡೆಯುವುದನ್ನು ಶೇ.30 ರಷ್ಟು ಹೆಚ್ಚಿಸುವುದು ಇದರ ಉದ್ದೇಶವಾಗಿದೆ ಎಂದರು.

ಎಚ್.ಡಿ. ಕೋಟೆ ನಿಸರ್ಗ ಸಂಸ್ಥೆಯ ನಿರ್ದೇಶಕ ಪ್ರಭು ಸ್ವಾಗತಿಸಿದರು. ಮಳವಳ್ಳಿ ಜನರಕ್ಷ ಸಂಸ್ಥೆಯ ನಿರ್ದೇಶಕ ಕೃಷ್ಣೇಗೌಡ ಇದ್ದರು. ಗುಂಡ್ಲುಪೇಟೆ ಟಾರ್ಡೋ ಸಂಸ್ಥೆಯ ನಿರ್ದೇಶಕ ಡಾ. ಮೋಹನ್ ಕೋಟೆಕೆರೆ ವಂದಿಸಿದರು. ಮೈಸೂರು ಜನಜಾಗೃತಿ ಸಂಸ್ಥೆಯ ವಿ.ಎನ್. ಮೂರ್ತಿ ನಿರೂಪಿಸಿದರು. ಪ್ರತಿಭೆ ಸಂಸ್ಥೆಯ ಕೆ.ಎಂ. ಶಿವರಾಜು ಪ್ರಾರ್ಥಿಸಿದರು. ಹತ್ತು ದಿನಗಳ ಈ ತರಬೇತಿಯಲ್ಲಿ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಕಲಬುರಗಿ ಸೆಂಟ್ರಲ್ ಜೈಲ್ ಅಧೀಕ್ಷಕಿ ಕಾರು ಸ್ಫೋಟಿಸುವ ಬೆದರಿಕೆ!

ಕಲಬುರಗಿ, ನ.28– ಕಲಬುರಗಿ ಸೆಂಟ್ರಲ್ ಜೈಲು ಮುಖ್ಯ ಅಧೀಕ್ಷಕಿ ಅನಿತಾ ಅವರ ಕಾರು ಸ್ಫೋಟಿಸುವುದಾಗಿ ಅನಾಮಧೇಯ ವ್ಯಕ್ತಿಯಿಂದ ಆಡಿಯೋ ಸಂದೇಶ ಬಂದಿರುವುದು ಆತಂಕಕ್ಕೆ ಕಾರಣವಾಗಿದೆ. ಕಾರು ಸ್ಫೋಟಿಸುವ ಮೂಲಕ ಅನಿತಾ ಹತ್ಯೆಗೆ ಸಂಚು ಹೂಡಲಾಗಿದೆಯೇ ಎಂಬ ಅನುಮಾನ ಇದೀಗ ಬಲವಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ ತನ್ನ ಕಾರನ್ನು ಸ್ಫೋಟಿಸುವುದಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಮೂಲಕ ಆಡಿಯೋ ಸಂದೇಶ ರವಾನಿಸಿದ್ದಾನೆ ಎಂದು ಆರ್.ಅನಿತಾ ಗುರುವಾರ ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಯಾವುದೇ ದೂರು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಯಾರೋ ನನ್ನ ಕಾರನ್ನು ಸ್ಫೋಟಿಸುವುದಾಗಿ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಆಡಿಯೋ ಸಂದೇಶ ಕಳುಹಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಪ್ರಕಟಿಸದೆ ಬಡಾವಣೆ ಹಸ್ತಾಂತರ ನಿಯಮಬಾಹಿರ

ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಕ್ಷೇಪ

ಮೈಸೂರು, ನ.28(ಬಿಎಲ್‌ಯು)– ರಾಜ್ಯಪತ್ರದಲ್ಲಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಪ್ರಕಟವಾಗದೆ ಮೈಸೂರಿನ ಬಡಾವಣೆಗಳನ್ನು ಮುಡಾ ಹಸ್ತಾಂತರ ಮಾಡುವುದು ನಿಯಮಬಾಹಿರ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೈಸೂರಿನಲ್ಲಿ 900ಕ್ಕೂ ಹೆಚ್ಚು ಬಡಾವಣೆಗಳಿದ್ದು, ಈಗ 240 ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲು ಮುಂದಾಗಿರುವ ಮುಡಾ ಕ್ರಮ ಸರಿಯಲ್ಲ ಎಂದು ಆಕ್ಷೇಪಿಸಿದ್ದಾರೆ.

ಈಗಾಗಲೇ ನಿಯಮಬಾಹಿರವಾಗಿ ಹಸ್ತಾಂತರವಾಗಿರುವ ವಿಜಯನಗರ 3ನೇ ಹಂತದಲ್ಲಿ ಖಾತೆ, ಕಂದಾಯ ನಿಗದಿ ಮಾಡಿ ನಕ್ಷೆ ನೀಡಲು ಸಾಧ್ಯವಾಗುತ್ತಿಲ್ಲ. ಇಲ್ಲಿ ನಗರಪಾಲಿಕೆ ನಿರ್ವಹಣೆ ಮಾಡಬಹುದೇ ಹೊರತು, ಅಭಿವೃದ್ಧಿ ಮಾಡಲು ನಿಯಮಾನುಸಾರ ಅವಕಾಶವಿಲ್ಲ. ಆದ ಕಾರಣ ರಾಜ್ಯಪತ್ರದಲ್ಲಿ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿ ಪ್ರಕಟವಾಗದೆ ಬಡಾವಣೆ ಹಸ್ತಾಂತರ ಮಾಡಿದರೆ ಅದು ನಿಯಮ ಬಾಹಿರವಾಗುತ್ತದೆ ಎಂದು ಹೇಳಿದ್ದಾರೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ನಗರಪಾಲಿಕೆಯಲ್ಲಿ 400 ಕೋಟಿವರೆಗೆ ಗುತ್ತಿಗೆದಾರರು ಕೆಲಸ ಪೂರ್ಣಗೊಳಿಸಿದ್ದಾರೆ. ಆದರೆ ಬಿಲ್ ಪಾವತಿ ಮಾಡಲು ಪಾಲಿಕೆಯಲ್ಲಿ ಹಣ ಇಲ್ಲ. ಈ ಹಣ ಕೊಡಲು ನಗರಪಾಲಿಕೆಗೆ ಎರಡು ವರ್ಷ ಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ



ಹೊಸದಾಗಿ ಹಲವು ಬಡಾವಣೆಗಳನ್ನು ಹಸ್ತಾಂತರ ಮಾಡಿದರೆ ಅವುಗಳ ಅಭಿವೃದ್ಧಿ ಮಾಡಲು ಹಣ ಎಲ್ಲಿ ತರುವುದು ಎಂದು ಪ್ರಶ್ನಿಸಿದ್ದಾರೆ.

ಈಗಾಗಲೇ ಹಸ್ತಾಂತರ ಮಾಡಿರುವ ಬಡಾವಣೆಗಳಲ್ಲಿ ಸಮರ್ಪಕ ಕುಡಿಯುವ ನೀರು, ಗುಣಮಟ್ಟದ ರಸ್ತೆ ಸೇರಿದಂತೆ ಮೂಲ ಸೌಕರ್ಯಗಳಿಲ್ಲ. ಇಂತಹ ಬಡಾವಣೆಗಳನ್ನು ಸ್ಥಳಿಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಿದರೆ ಇವುಗಳನ್ನು ಅಭಿವೃದ್ಧಿ ಮಾಡಲು ಸ್ಥಳೀಯ ಸಂಸ್ಥೆಗಳಿಗೆ ಹಣದ ಮೂಲ ಯಾವುದು ಎಂದು ಮರು ಪ್ರಶ್ನಿಸಿದ್ದಾರೆ.

ಬಡಾವಣೆ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳಿಗೆ ಆದಾಯದ ಮೂಲವಿಲ್ಲ. ಸರ್ಕಾರದಿಂದ ಕೂಡ ಅನುದಾನ ದೊರೆಯುತ್ತಿಲ್ಲ. ಇದರಿಂದ ಹಸ್ತಾಂತರಗೊಂಡ ಬಡಾವಣೆ ಅಭಿವೃದ್ಧಿ ಕಾಣುವುದಾದರೂ ಹೇಗೆ ಎಂದು ಪ್ರಶ್ನೆ ಮಾಡಿದ್ದಾರೆ.

ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ 2.20 ಲಕ್ಷ ಆಸ್ತಿಗಳಿದ್ದು, ಸುಮಾರು 30 ಸಾವಿರಕ್ಕೂ ಹೆಚ್ಚು ಖಾಲಿ ನಿವೇಶನಗಳಿವೆ. ಇನ್ನು ನಗರದ ಹೊರಭಾಗದ ಮುಡಾ ಹಾಗೂ ಮುಡಾ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿ 2 ಲಕ್ಷ ನಿವೇಶನಗಳಿಗೆ ಅನುಮತಿ ನೀಡಲಾಗಿದೆ. ಇದರಲ್ಲಿ 1.5 ಲಕ್ಷ ಖಾಲಿ ನಿವೇಶನಗಳಿವೆ. ಈಗ ಇವುಗಳನ್ನು ಹಸ್ತಾಂತರ ಮಾಡಿದರೆ ಅಭಿವೃದ್ಧಿ ಕಾಣುವುದು ಅಸಾಧ್ಯ ಎಂದು ಸಂದೇಶ್ ಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮಿಗಳು ನಿವೇಶನ ಖರೀದಿಸಿ ಲಾಭ ಮಾಡಲು ಖಾಲಿ ಬಿಟ್ಟಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ನಿವೇಶನಕ್ಕಾಗಿ 92 ಸಾವಿರಕ್ಕೂ ಹೆಚ್ಚು ಜನರು ಅರ್ಜಿ ಸಲ್ಲಿಸಿ ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಈ ಹಿನ್ನೆಲೆ ಮುಡಾ ಮೊದಲು ಸೂರಿಲ್ಲದವರಿಗೆ ನಿವೇಶನ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಮೂಲ ಸೌಕರ್ಯ ಕಲ್ಪಿಸಿ ಬಡಾವಣೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಿದ ನಂತರವಷ್ಟೆ ನಗರಪಾಲಿಕೆ ಸೇರಿದಂತೆ ಇತರೆ ಸ್ಥಳಿಯ ಸಂಸ್ಥೆಗಳಿಗೆ ಬಡಾವಣೆಗಳನ್ನು ಮುಡಾ ಹಸ್ತಾಂತರ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಮುಡಾ ಹಗರಣ ದಿಕ್ಕು ತಪ್ಪಿಸುವ ಅಥವಾ ಯಾರದೋ ಹಿತಾಸಕ್ತಿಗಾಗಿ ಬಡಾವಣೆಗಳನ್ನು ತರಾತುರಿಯಲ್ಲಿ ಹಸ್ತಾಂತರ ಮಾಡಲಾಗುತ್ತಿದೆ ಎಂಬ ಅನುಮಾನ ಕಾಡಿದೆ. ಆದ ಕಾರಣ ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಬಡಾವಣೆ ಹಸ್ತಾಂತರ ವಿಚಾರವನ್ನು ಸಮಗ್ರವಾಗಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಸಿದ್ದರಾಮಯ್ಯ ವಿರುದ್ಧ ಬಿಜೆಪಿ–ಜೆಡಿಎಸ್ ಸಂಚು

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆರೋಪ



ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆಆರ್ ಕ್ಷೇತ್ರದ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು,ನ.28(ಪಿಎಂ)– ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯರನ್ನು ಕೆಳಗಿಳಿಸಲು ಬಿಜೆಪಿ ಮತ್ತು ಜೆಡಿಎಸ್ ಸಂಚು ರೂಪಿಸಿವೆ. ಪ್ರಾಮಾಣಿಕ ಮತ್ತು ದಕ್ಷ ರಾಜಕಾರಣಿಯಾದ ಸಿದ್ದರಾಮಯ್ಯ ಬೆಂಬಲಕ್ಕೆ ನಿಲ್ಲುವ ನಿಟ್ಟಿನಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಿಂದ (ಕೆಆರ್ ಕ್ಷೇತ್ರ) ಹೆಚ್ಚಿನ ಸಂಖ್ಯೆಯಲ್ಲಿ ಡಿ.5ರಂದು ಹಾಸನದಲ್ಲಿ ನಡೆಯುವ ಸಮಾವೇಶದಲ್ಲಿ ಭಾಗವಹಿಸಬೇಕಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಬೆಂಬಲಿಸಿ ವಿವಿಧ ಪ್ರಗತಿಪರ ಸಂಘಟನೆಗಳು ಹಾಗೂ ಇತರೆ ಎಲ್ಲಾ ವರ್ಗಗಳ ಒಕ್ಕೂಟಗಳ ವತಿಯಿಂದ ಡಿ.5ರಂದು ಹಾಸನದಲ್ಲಿ ಆಯೋಜಿಸಿರುವ 'ಸ್ವಾಭಿಮಾನಿ ಸಮಾವೇಶ' ಸಂಬಂಧ ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆಆರ್ ಕ್ಷೇತ್ರದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯನವರ ರಾಜಕೀಯ ಜೀವನ ತೆರೆದ ಪುಸ್ತಕ. ಅವರು ತಮ್ಮ ಅಧಿಕಾರಾವಧಿಯಲ್ಲಿ ಜನಪರ ಕಾರ್ಯಕ್ರಮಗಳನ್ನು ನೀಡಿ ಇತಿಹಾಸ ನಿರ್ಮಿಸಿದ್ದಾರೆ. ಇದರ ಹೊರತು ಸ್ವಾರ್ಥ ರಾಜಕಾರಣ ಮಾಡಿಲ್ಲ. ಸಿದ್ದರಾಮಯ್ಯನವರು ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಉನ್ನತ ಸ್ಥಾನಮಾನ ಅಲಂಕರಿಸಿದ್ದರು. ಹೀಗಿದ್ದರೂ ಈವರೆಗೆ ಅವರಿಗೆ ಒಂದು ಸ್ವಂತ ಮನೆ ಹೊಂದಲಾಗಲಿಲ್ಲ. ಇದು ಅವರ ಪ್ರಾಮಾಣಿಕತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಹೇಳಿದರು.

ಇಡೀ ದೇಶವೇ ಕರ್ನಾಟಕದತ್ತ ತಿರುಗಿ ನೋಡುವಂತೆ ಸಿದ್ದರಾಮಯ್ಯ ಆಡಳಿತ ನೀಡುತ್ತಿದ್ದಾರೆ. ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದೆ ಶುದ್ಧಹಸ್ತರಾಗಿದ್ದಾರೆ. ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳಲ್ಲಿ ಅಧಿಕಾರ ನಡೆಸಲು ಬಿಡದೆ ಆಪರೇಷನ್ ಕಮಲ, ಇಡಿ, ಐಟಿ, ಸಿಬಿಐನಂತಹ ಸಂಸ್ಥೆಗಳನ್ನು ಬಳಸಿಕೊಂಡು ಕಟ್ಟಿಹಾಕುವ ಕೆಲಸ ಮಾಡಲಾಗುತ್ತಿದೆ. ಆದರೆ ಸಿದ್ದರಾಮಯ್ಯನವರು ಇಂತಹ ಗೊಡ್ಡು ಬೆದರಿಕೆಗಳಿಗೆ ಹೆದರದೇ ಸ್ವಚ್ಛ ಆಡಳಿತ ನೀಡುತ್ತಿದ್ದಾರೆ. ಇದರಿಂದ ವಿಚಲಿತರಾದ ಬಿಜೆಪಿ ಮತ್ತು ಜೆಡಿಎಸ್‌ನವರು ನಿರಂತರವಾಗಿ ಸಿದ್ದರಾಮಯ್ಯನವರ ವಿರುದ್ಧ ಸುಳ್ಳು ಆರೋಪದಲ್ಲಿ ನಿರತರಾಗಿದ್ದಾರೆ ಎಂದು ದೂರಿದರು. ಸಿದ್ದರಾಮಯ್ಯ ಅವರ ಜೊತೆಯಲ್ಲಿ ಕರ್ನಾಟಕದ ಏಳು ಕೋಟಿ ಜನತೆ ಇದ್ದಾರೆ. ಅವರ ಅಧಿಕಾರದಲ್ಲಿ ರಾಜ್ಯದ ಪ್ರತಿಯೊಂದು ಮನೆಯಲ್ಲೂ ಸವಲತ್ತು ಪಡೆದ ಫಲಾನುಭವಿಗಳು ಇದ್ದಾರೆ. ಹೀಗಾಗಿ ಯಾರೆನೇ ಪಿತೂರಿ ಮಾಡಿದರೂ ಸಿದ್ದರಾಮಯ್ಯನವರ ಶಕ್ತಿ, ವರ್ಚಸ್ಸು ಮತ್ತಷ್ಟು ಹೆಚ್ಚಾಗುತ್ತಿದೆ. ಇದಕ್ಕೆ ಉಪಚುನಾವಣೆ ಫಲಿತಾಂಶವೇ ಸಾಕ್ಷಿ. ಮೂರು ಕ್ಷೇತ್ರದಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದಾರೆ. ನಾವೆಲ್ಲರೂ ಹಾಸನದ ಸಮಾವೇಶದಲ್ಲಿ ಸ್ವ ಇಚ್ಛೆಯಿಂದ ಅಸಂಖ್ಯಾತ ಸಂಖ್ಯೆಯಲ್ಲಿ ಭಾಗವಹಿಸಬೇಕಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಸ್ವಾಭಿಮಾನದಿಂದ ಸಮಾವೇಶದಲ್ಲಿ ನಾವೆಲ್ಲಾ ಭಾಗಿಯಾಗಬೇಕು. ಆ ದಿನ ಇತಿಹಾಸದಲ್ಲಿ ಉಳಿಯುವಂತಾಗಬೇಕು. ನುಡಿದಂತೆ ನಡೆದಂತಹ ಸಿದ್ದರಾಮಯ್ಯನವರು ಕಳೆದ ಅವಧಿಯಲ್ಲಿ ಬಹುತೇಕ ಭರವಸೆಗಳನ್ನು ಈಡೇರಿಸಿದರು. ಸಮ ಸಮಾಜದ ನಿರ್ಮಾಣಕ್ಕಾಗಿ ಬಸವಾದಿ ಶರಣರ ಹಾದಿಯಲ್ಲಿ ನಡೆಯುತ್ತಿದ್ದಾರೆ. ಅವರ ವಿರುದ್ಧ ನಡೆಯುತ್ತಿರುವ ಕುತಂತ್ರಕ್ಕೆ ತಕ್ಕ ಉತ್ತರ ಕೊಡಬೇಕಿದೆ ಎಂದು ತಿಳಿಸಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ನಗರಾಧ್ಯಕ್ಷ ಟಿ.ಎಸ್.ರವಿಶಂಕರ್, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತ ಚಿಕ್ಕಣ್ಣ, ಮಾಜಿ ಉಪ ಮೇಯರ್ ಸಿದ್ದರಾಜು, ವಿ.ರಾಮಸ್ವಾಮಿ, ಕೆಪಿಸಿಸಿ ಮಾಜಿ ಸದಸ್ಯೆ ವೀಣಾ, ಪಾಲಿಕೆ ಮಾಜಿ ಸದಸ್ಯರಾದ ಜೆ.ಗೋಪಿ, ಶೋಭಾ ಸುನೀಲ್, ಪಲ್ಲವಿ ಬೇಗಂ, ಕೆ.ವಿ.ಮಲ್ಲೇಶ್, ಮುಖಂಡರಾದ ಮಂಜುಳಾ ಮಾನಸ, ಗೋಪಿನಾಥ್, ರವಿಶಂಕರ್, ಡಾ.ಸುಜಾತ ರಾವ್, ಜೋಗಿ ಮಹೇಶ್, ಗುಣಶೇಖರ್, ವಿಶ್ವನಾಥ್(ವಿಶ್ವ), ಎಂ.ಕೆ.ಅಶೋಕ್, ಭವ್ಯ, ಚಂದ್ರಕಲಾ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಾಜಿ ಶಾಸಕ ಉಮಾಪತಿಗೆ ಜೈಲು

ಬೆಂಗಳೂರು, ನ.28– ಸರ್ಕಾರಕ್ಕೆ ಆಸ್ತಿ ವಿವರ ಸಲ್ಲಿಕೆ ವೇಳೆ ತಪ್ಪು ಮಾಹಿತಿಯನ್ನು



ನೀಡಿ ವಂಚನೆ ಮಾಡಿದ ಆರೋಪದಲ್ಲಿ ಹೊಳಲ್ಕೆರೆ ಕ್ಷೇತ್ರದ ಶಾಸಕ ಮಾಜಿ ಶಾಸಕ ಎ.ವಿ.ಉಮಾಪತಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ 3 ತಿಂಗಳು ಜೈಲು ಶಿಕ್ಷೆ ಹಾಗೂ 1 ಸಾವಿರ ರೂ. ದಂಡವನ್ನು ವಿಧಿಸಿ ಆದೇಶ ಹೊರಡಿಸಲಾಗಿದೆ.

ಹೊಳಲ್ಕೆರೆ ಕ್ಷೇತ್ರದ ಮಾಜಿ ಶಾಸಕ ಎ.ವಿ.ಉಮಾಪತಿ ಅವರು 2004–05 ಹಾಗೂ 2005–06ರ ಸಾಲಿನ ಆಸ್ತಿ ವಿವರದಲ್ಲಿ ತಪ್ಪು ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮತ್ತೊಬ್ಬ ಮಾಜಿ ಶಾಸಕ ತಿಪ್ಪೇರುದ್ರಪ್ಪ ಅವರು ಲೋಕಾಯುಕ್ತ ಇಲಾಖೆಗೆ ದೂರು ಸಲ್ಲಿಸಿದ್ದರು. ತನಿಖೆ ಮಾಡಿದ್ದ ಲೋಕಾಯುಕ್ತ ಇಲಾಖೆ ತನಿಖಾ ವರದಿಯನ್ನು ಸಲ್ಲಿಸಿತ್ತು. ಈ ತನಿಖಾ ವರದಿ ಅನ್ವಯ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಎನ್.ಶಿವಕುಮಾರ್ ಅವರು ಮಾಜಿ ಶಾಸಕ ಎ.ವಿ.ಉಮಾಪತಿಗೆ ಅವರಿಗೆ ಶಿಕ್ಷೆಯನ್ನು ಪ್ರಕಟಿಸಿ ಆದೇಶ ಹೊರಡಿಸಿದ್ದಾರೆ.

ಮಾಜಿ ಶಾಸಕ ಎ.ವಿ.ಉಮಾಪತಿಗೆ ಅವರಿಗೆ 3 ತಿಂಗಳ ಕಾಲ ಜೈಲು ಶಿಕ್ಷೆ ಹಾಗೂ 1 ಸಾವಿರ ರೂ. ದಂಡವನ್ನು ವಿಧಿಸಲಾಗಿದೆ. ಇದೀಗ ಉಮಾಪತಿ ಅವರನ್ನು ಪೊಲೀಸರು ಯಾವುದೇ ಕ್ಷಣದಲ್ಲಾದರೂ ಬಂಧಿಸಿ ಜೈಲಿಗೆ ಕಳಿಸಬಹುದು.

ಯುಜಿಡಿ ನೀರು ಉಕ್ಕಿ ಹರಿದು ಸಾಂಕ್ರಾಮಿಕ ರೋಗ ಭೀತಿ

ಮೈಸೂರು, ನ.28(ಎಂಕೆ)– ಮೈಸೂರಿನ ಕನಕಗಿರಿಯ ಬೇಸ್ತರ ಬಡಾವಣೆ 8ನೇ ಕ್ರಾಸ್‌ನಲ್ಲಿ ಕಳೆದೆರಡು ತಿಂಗಳಿಂದ ಯುಜಿಡಿ ನೀರು ಉಕ್ಕಿ ಹರಿಯುತಿದ್ದು, ನಿವಾಸಿಗಳಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ.

ಪ್ರತಿನಿತ್ಯ ಜನದಟ್ಟಣೆಯಿಂದ ಕೂಡಿರುವ ರಸ್ತೆಯಲ್ಲಿ ಕಳೆದ ಎರಡು ತಿಂಗಳಿಂದ ದಿನಪೂರ್ತಿ ಯುಜಿಡಿ ಮ್ಯಾನ್‌ಹೋಲ್‌ನಿಂದ ಕೊಳಚೆ ನೀರು ಉಕ್ಕಿ ಹರಿಯುತ್ತಿದ್ದು, ದುರ್ವಾಸನೆ ಜೊತೆಗೆ ಸಾಂಕ್ರಾಮಿಕ ರೋಗಗಳು ಹರಡುವ ಆತಂಕ ಎದುರಾಗಿದೆ ಎಂದು ನಿವಾಸಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಯುಜಿಡಿ ಸಮಸ್ಯೆ ಜೊತೆಗೆ ರಸ್ತೆ ಸಹ ಸಂಪೂರ್ಣವಾಗಿ ಗುಂಡಿ ಬಿದ್ದಿದ್ದು, ಶಾಲಾ–ಕಾಲೇಜು ಮಕ್ಕಳು, ವಾಹನ ಸವಾರರು, ಅಡುಗೆ ಅನಿಲ ಸಾಗಿಸುವ ಗೂಡ್ಸ್ ವಾಹನಗಳು ಸೇರಿದಂತೆ ಇನ್ನಿತರೆ ವಾಹನಗಳ ಸಂಚಾರಕ್ಕೂ ತೀವ್ರ ತೊಂದರೆಯಾಗಿದೆ. ಗುಂಡಿಗಳಲ್ಲಿ ಕೊಳಚೆ ನೀರು ನಿಂತು ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಸಂಜೆ ವೇಳೆಯಂತೂ ಈ ರಸ್ತೆಯಲ್ಲಿ ತಿರುಗಾಡುವುದಕ್ಕೆ ಭಯವಾಗುತ್ತದೆ ಎಂದು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡಿದ್ದಾರೆ.

ಯುಜಿಡಿ ಮ್ಯಾನ್‌ಹೋಲ್ ಹಾಗೂ ರಸ್ತೆ ದುರಸ್ಥಿ ಮಾಡುವಂತೆ ಹಲವು ಬಾರೀ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಗಂಟೆಗೊಂದು, ಗಳಿಗೆಗೊಂದು ಎಂಬಂತೆ ಅಧಿಕಾರಿಗಳು ಮಾತನಾಡುತ್ತಾರೆ. ಪಾಲಿಕೆಯವರ ಬೇಜಾಬ್ದಾರಿ ವರ್ತನೆಯಿಂದ ನಿತ್ಯ ನರಕ ಅನುಭವಿಸುವಂತಾಗಿದೆ ಎಂದು ಕಿಡಿಕಾರಿದ್ದಾರೆ.

ಕೂಡಲೇ ಗಮನ ಹರಿಸಿ: ಸದ್ಯಕ್ಕೆ ಪಾಲಿಕೆ ಸದಸ್ಯರಿಲ್ಲ. ಹಾಗಾಗಿ ಕೂಡಲೇ ಕೆ.ಆರ್.ಕ್ಷೇತ್ರದ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ನಮ್ಮ ಚಿಂತಾಜನಕ ಪರಿಸ್ಥಿತಿಯನ್ನು ನೋಡಿ, ಸಮಸ್ಯೆಗಳನ್ನು ಬಗೆಹರಿಸಬೇಕು. ಅಲ್ಲದೆ ಪಾಲಿಕೆ ಅಧಿಕಾರಿಗಳಿಗೂ ಸಮಸ್ಯೆಗಳಿಗೆ ಸ್ಪಂಧಿಸುವಂತೆ ತಿಳಿಹೇಳಬೇಕು ಎಂದು ಮನವಿ ಮಾಡಿದ್ದಾರೆ.



ಬಂದರು ಒಪ್ಪಂದಕ್ಕೆ ಕೇರಳ–ಅದಾನಿ ಸಂಸ್ಥೆ ಸಹಿ

ತಿರುವನಂತಪುರಂ: ಕೇರಳ ರಾಜ್ಯ ಸರ್ಕಾರ ಮತ್ತು ಅದಾನಿ ವಿಝಿಂಜಂ ಪೋರ್ಟ್ ಪ್ರೈವೇಟ್ ಲಿಮಿಟೆಡ್ ಬಂದರು ಒಪ್ಪಂದಕ್ಕೆ ಸಹಿ ಹಾಕಿವೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಈ ಒಪ್ಪಂದ ಅಂತರರಾಷ್ಟ್ರೀಯ ಬಂದರಿನ ಭವಿಷ್ಯದ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ. ಅದರ ಮೊದಲ ಹಂತ ಮುಂದಿನ ತಿಂಗಳು ಕಾರ್ಯಾರಂಭ ಮಾಡಲಿದೆ ಎಂದು ಸಿಎಂ ತಿಳಿಸಿದ್ದಾರೆ. ಸಹಿ ಮಾಡಿದ ಒಪ್ಪಂದದ ಪ್ರಕಾರ ಕೇರಳದ ಕಡಲ ಮೂಲಸೌಕರ್ಯದಲ್ಲಿ ಪರಿವರ್ತಕ ಹಂತವಾಗಿ ರೂಪಿಸಲಾದ ಯೋಜನೆ 2ನೇ ಮತ್ತು 3ನೇ ಹಂತಗಳು 2028ರ ವೇಳೆಗೆ ಪೂರ್ಣಗೊಳ್ಳಲಿದೆ.

ಈ ಹಂತಗಳು 10,000 ಕೋಟಿ ರೂ.ಗಳ ಹೆಚ್ಚುವರಿ ಹೂಡಿಕೆಯನ್ನು ಒಳಗೊಂಡಿದ್ದು, ಬಂದರಿನ ಸಾಮರ್ಥ್ಯವನ್ನು 30 ಲಕ್ಷ ಇಪ್ಪತ್ತು ಅಡಿ ಸಮಾನ ಘಟಕಗಳಿಗೆ ವಿಸ್ತರಿಸುತ್ತದೆ. ಕೋವಿಡ್–19 ಸಾಂಕ್ರಾಮಿಕ ಮತ್ತು MT ಚಂಡಮಾರುತದಂತಹ ನೈಸರ್ಗಿಕ ವಿಕೋಪಗಳು ಮತ್ತು ಪ್ರವಾಹದಂತಹ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಯೋಜನೆ ಸಮಯವನ್ನು 5 ವರ್ಷಗಳವರೆಗೆ ವಿಸ್ತರಿಸಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ. ವಿಳಂಬದಿಂದಾಗಿ 219 ಕೋಟಿ ದಂಡ ವಿಧಿಸಲಾಗಿದ್ದು, ರಾಜ್ಯಕ್ಕೆ 43.8 ಕೋಟಿ ರೂ. ಉಳಿದ ಮೊತ್ತವನ್ನು 2028 ರವರೆಗೆ ತಡೆಹಿಡಿಯಲಾಗುತ್ತದೆ.

ಕಾಂಗ್ರೆಸ್‌ನಿಂದ ಆರ್.ಜಿ.ನರಸಿಂಹ ಅಯ್ಯಂಗಾರ್‌ಗೆ ಶ್ರದ್ಧಾಂಜಲಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಇತ್ತೀಚೆಗೆ ನಿಧನರಾದ ಕಾಂಗ್ರೆಸ್‌ನ ಹಿರಿಯ ಮುಖಂಡರೂ ಆದ ಮಾಜಿ ಮೇಯರ್ ಆರ್.ಜಿ.ನರಸಿಂಹ ಅಯ್ಯಂಗಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ನ.28(ಪಿಎಂ)– ಮೈಸೂರು ನಗರ ಕಾಂಗ್ರೆಸ್ ಹಾಗೂ ಕಾಂಗ್ರೆಸ್‌ನ ಮಾಜಿ ಮೇಯರ್‌ಗಳ ಒಕ್ಕೂಟದ ವತಿಯಿಂದ ಇತ್ತೀಚೆಗೆ ನಿಧನರಾದ ಕಾಂಗ್ರೆಸ್‌ನ ಹಿರಿಯ ಮುಖಂಡರೂ ಆದ ಮಾಜಿ ಮೇಯರ್ ಆರ್.ಜಿ.ನರಸಿಂಹ ಅಯ್ಯಂಗಾರ್ ಅವರಿಗೆ ಗುರುವಾರ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ನರಸಿಂಹ ಅಯ್ಯಂಗಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ನುಡಿ ನಮನ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ಮಾಜಿ ಮೇಯರ್ ಮೋದಮಣಿ ಮಾತನಾಡಿ, ನರಸಿಂಹ ಅಯ್ಯಂಗಾರ್ ಅವರ ನಿಧನದಿಂದ ಕಾಂಗ್ರೆಸ್‌ಗೆ ತುಂಬಲಾರದ ನಷ್ಟ ಉಂಟಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರು ನಗರದ ಅಭಿವೃದ್ಧಿ ಬಗ್ಗೆ ಕಾಳಜಿ ಹೊಂದಿದ್ದ ನರಸಿಂಹ ಅಯ್ಯಂಗಾರ್, ನಗರದ ಪ್ರಗತಿ ಕುರಿತಂತೆ ದೂರದೃಷ್ಟಿ ಹೊಂದಿದ್ದರು. ಅವರ ಅಭಿವೃದ್ಧಿಯ ಚಿಂತನೆಗಳನ್ನು ನಾವು ಮುಂದುವರೆಸಬೇಕು. ಸರಳ ಜೀವಿಯಾಗಿದ್ದ ಅವರು ಬರವಣಿಗೆ ಮತ್ತು ಭಾಷೆಯಲ್ಲಿ ಹಿಡಿತ ಹೊಂದಿದ್ದರು ಎಂದು ಸ್ಮರಿಸಿದರು.

ಮಾಜಿ ಮೇಯರ್ ದಕ್ಷಿಣ ಮೂರ್ತಿ ಮಾತನಾಡಿ, ನಗರದ ಅಭಿವೃದ್ಧಿ ಬಗ್ಗೆ ನರಸಿಂಹ ಅಯ್ಯಂಗಾರ್ ಅಪಾರ ಕಾಳಜಿ ಹೊಂದಿದ್ದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಪಕ್ಷದ ಬಗ್ಗೆ ನರಸಿಂಹ ಅಯ್ಯಂಗಾರ್ ಅಪಾರ ಕಳಕಳಿ ಹೊಂದಿದ್ದರು. ಅವರೊಬ್ಬ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದರು. ಅವರ ಅಗಲಿಕೆ ಅತೀವ ನೋವು ತಂದಿದೆ. ಅವರ ಆತ್ಮಕ್ಕೆ ಶಾಂತಿ ದೊರಕಿ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ದೊರಕಲಿ ಎಂದು ಪ್ರಾರ್ಥಿಸಿದರು.

ಬಳಿಕ ಪಕ್ಷ ಸಂಘಟನೆ ಕುರಿತು ಸಭೆ ನಡೆಸಲಾಯಿತು. ಕೆಪಿಸಿಸಿ ಉಪಾಧ್ಯಕ್ಷರಾಗಿ, ಮೈಸೂರು ನಗರ ಕಾಂಗ್ರೆಸ್ ಉಸ್ತುವಾರಿಯಾಗಿ ನೂತನವಾಗಿ ನೇಮಕವಾಗಿರುವ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಪಕ್ಷ ಸಂಘಟನೆ ಕುರಿತಂತೆ ನಗರ ಕಾಂಗ್ರೆಸ್‌ನ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಭೆ ನಡೆಸಿದರು. ಅಂತೆಯೇ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿಯಾಗಿ ನೂತನವಾಗಿ ನೇಮಕಗೊಂಡಿರುವ ಹೆಚ್.ತ್ಯಾಗರಾಜ್ ಹಾಜರಿದ್ದರು.


ಮಾಜಿ ಮೇಯರ್‌ಗಳಾದ ಚಿಕ್ಕಣ್ಣ, ಪುಷ್ಪಲತ ಚಿಕ್ಕಣ್ಣ, ಪುಷ್ಪಲತ ಜಗನ್ನಾಥ್, ಬಿ.ಕೆ.ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ಎಂ.ಶಿವಣ್ಣ, ಈಶ್ವರ ಚಕ್ಕಡಿ, ಡೈರಿ ವೆಂಕಟೇಶ್, ಕಾಂಗ್ರೆಸ್ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಕಾಂಗ್ರೆಸ್ ವಕ್ತಾರ ಕೆ.ಮಹೇಶ್ ಮತ್ತಿತರರು ಹಾಜರಿದ್ದರು.

ನಾಳೆಯಿಂದ 2 ದಿನ ವಿಶ್ವ ಪಾವನ ಯುವ ವಿಚಾರಗೋಷ್ಠಿ

ಮೈಸೂರು,ನ.28(ಪಿಎಂ)– ಸೋಸಲೆ ಶ್ರೀ ವ್ಯಾಸತೀರ್ಥ ಮಹಾಸಂಸ್ಥಾನ ಮಠದ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿ ಪರಿಷದ್ ವತಿಯಿಂದ ನ.30 ಮತ್ತು ಡಿ.1ರಂದು ವಿಶ್ವ ಪಾವನ ಯುವ ವಿಚಾರ ಗೋಷ್ಠಿ ಆಯೋಜಿಸಲಾಗಿದೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ವಿದ್ಯಾಪೀಠದ ಆವರಣದಲ್ಲಿ ನ.30ರಂದು ಬೆಳಗ್ಗೆ 9.30ಕ್ಕೆ ವಿಚಾರಗೋಷ್ಠಿಯನ್ನು ತಿರುಪತಿ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಜಿ.ಎಸ್.ಆರ್.ಕೃಷ್ಣಮೂರ್ತಿ ಉದ್ಘಾಟಿಸಲಿದ್ದಾರೆ. ವಿದ್ಯಾರ್ಥಿ ಪರಿಷದ್ ಪದಾಧಿಕಾರಿಗಳಾದ ಡಿ.ವಿಶ್ವಪ್ನ, ಡಿ.ಕೆ.ಶ್ರೀಹರಿ, ಮಹೇಂದ್ರ ಭಾಗವಹಿಸಲಿದ್ದಾರೆ. ವಿದ್ಯಾಪೀಠದ ಪ್ರಾಚಾರ್ಯ ಸುಘೋಷ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ನಂತರ ನಡೆಯಲಿರುವ ಮೊದಲ ಗೋಷ್ಠಿಯು ಜಿ.ಎಸ್.ಆರ್.ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನೆರವೇರಲಿದೆ. ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳು ಅಲಂಕಾರ ಶಾಸ್ತ್ರದ ಬಗ್ಗೆ ವಿಚಾರ ಮಂಡಿಸಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ನಡೆಯುವ 2ನೇ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಖ್ಯಾತ ವಿದ್ವಾಂಸ ಡಾ.ವೀರನಾರಾಯಣ ಪಾಂಡುರಂಗಿ ವಹಿಸಲಿದ್ದಾರೆ. ಮೀಮಾಂಸ ಕುರಿತು ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ವಿದ್ಯಾರ್ಥಿಗಳು, ವೇದ ಕುರಿತು ಶ್ರೀರಂಗಂನ ತ್ರಯೀ ವಿದ್ಯಾ ಗುರುಕುಲದ ವಿದ್ಯಾರ್ಥಿಗಳು, ಸಂಸ್ಕೃತ ಶಾಸ್ತ್ರ ಪಠಣೆ–ನವೀನೋಪಾಯ ಕುರಿತು ಬೆಂಗಳೂರಿನ ಆತ್ಮಾಶ್ರಮ ವಿದ್ಯಾಪೀಠದ ವಿದ್ಯಾರ್ಥಿಗಳು ವಿಚಾರ ಮಂಡಿಸಲಿದ್ದಾರೆ. ಧರ್ಮಶಾಸ್ತ್ರ ಗ್ರಹಣ ವಿಚಾರದ ಬಗ್ಗೆ ಮಂತ್ರಾಲಯದ ಶ್ರೀಗುರು ಸಾರ್ವಭೌಮ ವಿದ್ಯಾಪೀಠದ ಯುವ ವಿದ್ವಾಂಸರು, ಜ್ಯೋತಿಷ್ಯ ಶಾಸ್ತ್ರ–ಪ್ರಶ್ನೆ ಶಾಸ್ತ್ರ ಸುತ್ರಾಣಂ ಮಹತ್ವಂ ಕುರಿತು



ಶ್ರೀವಿದ್ಯಾಶ್ರೀಶ ತೀರ್ಥ ಸ್ವಾಮೀಜಿ

ಉಡುಪಿಯ ಎಸ್‌ಎಂಎಸ್‌ಪಿ ಕಾಲೇಜಿನ ವಿದ್ಯಾರ್ಥಿಗಳು ವಿಷಯ ಪ್ರಸ್ತಾಪಿಸಲಿದ್ದಾರೆ.

ಡಿ.1ರಂದು ಬೆಳಗ್ಗೆ 10ಕ್ಕೆ ನಡೆಯುವ 3ನೇ ಗೋಷ್ಠಿಯಲ್ಲಿ ಹಿರಿಯ ವಿದ್ವಾಂಸ ಪ್ರೊ.ಕೆ.ಇ. ದೇವನಾಥನ್ ಮತ್ತು ವಿದ್ವಾನ್ ಹರಿದಾಸಭಟ್ ಅಧ್ಯಕ್ಷತೆ ವಹಿಸಲಿದ್ದಾರೆ. ನ್ಯಾಯಶಾಸ್ತ್ರ ಕುರಿತು ಬೆಂಗಳೂರಿನ ನಿಜಕಾಮಧೇನು ಗುರು ಕುಲದ ವಿದ್ಯಾರ್ಥಿಗಳು, ವ್ಯಾಕರಣಶಾಸ್ತ್ರ ಕುರಿತು ಬೆಂಗಳೂರಿನ ಜಯತೀರ್ಥ ವಿದ್ಯಾಪೀಠದ ಯುವ ವಿದ್ಯಾರ್ಥಿಗಳು, ವೇದಾಂತ ವ್ಯಾಪ್ತಿ ಕುರಿತು ಶಿರಸಿ ಸಮೀಪದ ಸೋದೆಯ ಭಾವಿ ಸಮೀರ ಗುರುಕುಲದ ವಿದ್ಯಾರ್ಥಿಗಳು ವಿಷಯ ಮಂಡನೆ ಮಾಡಲಿದ್ದಾರೆ.

ಸಮಾರೋಪ ಸಮಾರಂಭ: ಡಿ.1ರಂದು ಮಧ್ಯಾಹ್ನ 2.30ಕ್ಕೆ ವಿಚಾರ ಗೋಷ್ಠಿಯ ಸಮಾರೋಪ ಸಮಾರಂಭ ನಡೆಯಲಿದೆ. ಸೋಸಲೆ ಸಂಸ್ಥಾನದ ಪೀಠಾಧಿಪತಿ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಹಿರಿಯ ಪಂಡಿತರಾದ ಬಿ.ಎಸ್.ಶೇಷಗಿರಿ ಆಚಾರ್ಯ, ಡಾ.ಸಿ.ಹೆಚ್.ಶ್ರೀನಿವಾಸ ಮೂರ್ತಿ ಆಚಾರ್ಯ, ವಿದ್ವಾನ್ ಹರಿದಾಸಭಟ್, ಪ್ರೊ.ಕೆ.ಇ.ದೇವನಾಥನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿದ್ಯಾರ್ಥಿ ಪರಿಷದ್ ಪದಾಧಿಕಾರಿಗಳಾದ ಅರ್ಜುನಸಿಂಹ ಮತ್ತು ಎಂ.ಗೋಪಾಲ ಉಪಸ್ಥಿತರಿರಲಿದ್ದಾರೆ ಎಂದು ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ಪ್ರಕಟಣೆ ತಿಳಿಸಿದೆ.

ಕನ್ನಡ ರಾಜ್ಯೋತ್ಸವ...



ಮೈಸೂರಿನ ಚಾಮುಂಡೇಶ್ವರಿ ರೈಲ್ವೆ ಬಡಾವಣೆಯ ಲಿಟಲ್ ಚಾಂಪ್ ಶಾಲೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ರಂಗಕರ್ಮಿ ರಾಜಶೇಖರ ಕದಂಬ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಎಂ.ಕೆ.ಶ್ರೀಧರ್, ಶಾಲೆಯ ಮುಖ್ಯೋಪಾಧ್ಯಾಯಿನಿ ರೂಪ, ಶಾಲೆಯ ಶಿಕ್ಷಕಿಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಮನರಂಜನೆ ಕಾರ್ಯಕ್ರಮ ನಡೆಯಿತು


ದೇಶ - ವಿದೇಶ

ಅಮೇರಿಕಾದಲ್ಲಿ 6 ಜನರಿದ್ದ ವಿಮಾನ ಪತನ; ಪ್ರಯಾಣಿಕರಿಗೆ ಶೋಧ

ಅಮೆರಿಕಾ: ಮಧ್ಯ ಅಮೆರಿಕದ ಕೋಸ್ಟರಿಕಾದಲ್ಲಿ 6 ಮಂದಿ ಪ್ರಯಾಣಿಸುತ್ತಿದ್ದ ವಿಮಾನ ಪತನಗೊಂಡಿದೆ. ಸದ್ಯ ವಿಮಾನದಲ್ಲಿದ್ದವರ ಗುರುತು ಪತ್ತೆಯಾಗಿಲ್ಲ. ಕೋಸ್ಟರಿಕಾದ ರಾಜಧಾನಿ ಸ್ಯಾನ್ ಜೋಸ್‌ನ ಆಗ್ನೇಯಕ್ಕೆ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗಿದೆ. ಶೋಧ ಮತ್ತು ರಕ್ಷಣಾ ಅಧಿಕಾರಿಗಳು ಬೆಟ್ಟದ ಮೇಲೆ ಅವಶೇಷಗಳನ್ನು ಕಂಡುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನವನ್ನು ಪರ್ವತದ ತುದಿಯಲ್ಲಿ ಗುರುತಿಸಲಾಗಿದೆ. ಕೋಸ್ಟರಿಕಾದ ಉತ್ತರ ಕೆರಿಬಿಯನ್ ಕರಾವಳಿಯಲ್ಲಿರುವ ಟೋರ್ಟುಗುರೊದಿಂದ ವಿಮಾನವು ಟೇಕ್ ಆಫ್ ಆಗಿದ್ದು ಸ್ಯಾನ್ ಜೋಸ್‌ಗೆ ಹೋಗುತ್ತಿತ್ತು ಎಂದು ವರದಿಯಾಗಿದೆ. ನಾಗರಿಕ ವಿಮಾನಯಾನ ಉಪನಿರ್ದೇಶಕ ಲೂಯಿಸ್ ಮಿರಾಂಡಾ ಇದನ್ನು ಖಚಿತಪಡಿಸಿದ್ದಾರೆ. ಆದರೆ ಪ್ರಯಾಣಿಕರ ಸ್ಥಿತಿ ಅಥವಾ ಅವರ ಗುರುತಿನ ಬಗ್ಗೆ ಹೆಚ್ಚಿನ ಮಾಹಿತಿ ಇನ್ನೂ ಬಂದಿಲ್ಲ. ಈ ವಿಚಾರದಲ್ಲಿ ಕೋಸ್ಟರಿಕಾದ ರೆಡ್‌ಕ್ರಾಸ್ ಸಂಸ್ಥೆಯು ಮಧ್ಯಾಹ್ನ 3 ಗಂಟೆ ಸುಮಾರಿಗೆ ವಿಮಾನ ಪತ್ತೆಯಾಗಿದೆ. ಸೆಸ್ನಾ 206 8.6 ಮೀಟರ್ ಉದ್ದ ಮತ್ತು 11 ಮೀಟರ್ ರೆಕ್ಕೆಗಳನ್ನು ಹೊಂದಿರುವ ಲಘು ವಿಮಾನವಾಗಿದೆ ಎಂದು ಹೇಳಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಕಡಿಮೆ ದೂರದ ಪ್ರಯಾಣಕ್ಕೆ ಬಳಸಲಾಗುತ್ತದೆ.

ಪರಮಾಣು ಸಾಮರ್ಥ್ಯದ ಕ್ಷಿಪಣಿ ಜಲಾಂತರ್ಗಾಮಿ ನೌಕೆಯಿಂದ ಯಶಸ್ವಿ ಉಡಾವಣೆ

ನವದೆಹಲಿ: ಭಾರತೀಯ ನೌಕಾಪಡೆಯು ಹೊಸ



ದಾಗಿ ಸೇರ್ಪಡೆಗೊಂಡ ಪರಮಾಣು ಜಲಾಂತರ್ಗಾಮಿ ಐಎನ್‌ಎಸ್ ಅರಿಘಾಟ್‌ನಿಂದ 3,500 ಕಿಮೀ ಕೆ–4 ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಪರೀಕ್ಷಿಸಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ. ಬೋಟ್ ಅನ್ನು ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್ ನಿರ್ವಹಿಸುತ್ತದೆ ಎಂದು ತಿಳಿಸಿದೆ. ಯಶಸ್ವಿ ಕೆ–4 ಕ್ಷಿಪಣಿ ಪರೀಕ್ಷೆಯು ಭಾರತದ ಎರಡನೇ–ಸ್ಟ್ರೈಕ್ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ನೌಕಾಪಡೆಯು ಈಗ ಕ್ಷಿಪಣಿ ವ್ಯವಸ್ಥೆಯ ಹೆಚ್ಚಿನ ಪರೀಕ್ಷೆಗಳನ್ನು ನಡೆಸಲಿದೆ. ಐಎನ್‌ಎಸ್ ಅರಿಹಂತ್ ಮತ್ತು ಅರಿಘಾಟ್ ಭಾರತೀಯ ನೌಕಾಪಡೆಯ ಶಸ್ತ್ರಾಗಾರದಲ್ಲಿರುವ ಎರಡು ಪರಮಾಣು ಜಲಾಂತರ್ಗಾಮಿ ನೌಕೆಗಳು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸುವ ಸಾಮರ್ಥ್ಯವನ್ನು ಹೊಂದಿವೆ. ಬ್ಯಾಲಿಸ್ಟಿಕ್ ಕ್ಷಿಪಣಿ ಪರೀಕ್ಷೆಯನ್ನು ಪೂರ್ಣ ಶ್ರೇಣಿಗಾಗಿ ಮಾಡಲಾಯಿತು. ವಿವರಗಳನ್ನು ವಿಶ್ಲೇಷಿಸಲಾಗುತ್ತಿದೆ ಮತ್ತು ಸಂಪೂರ್ಣ ವಿಶ್ಲೇಷಣೆ ನಂತರ ನಿಖರವಾದ ವಿವರಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ಉನ್ನತ ಮಿಲಿಟರಿಗೆ ತಿಳಿಸಲಾಗುವುದು ಎಂದು ರಕ್ಷಣಾ ಮೂಲಗಳು ತಿಳಿಸಿವೆ. ಈ ಪರೀಕ್ಷೆಯನ್ನು ಬಂಗಾಳ ಕೊಲ್ಲಿಯಲ್ಲಿ ನಡೆಸಲಾಯಿತು

ಬಾಂಗ್ಲಾದೇಶದಲ್ಲಿ ಹಿಂದೂ ಮಂದಿರ ಮೇಲೆ ದಾಳಿ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂ ಧಾರ್ಮಿಕ



ಮುಖಂಡ ಹಾಗೂ ಇಸ್ಕಾನ್ ಸದಸ್ಯ ಚಿನ್ಮಯ ಕೃಷ್ಣದಾಸ್ ಪ್ರಭು ಅವರ ಬಂಧನದ ಬೆನ್ನಲ್ಲೇ ಹಿಂದೂ ಮಂದಿರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದೆ. ದುಷ್ಕರ್ಮಿಗಳ ಗುಂಪು ಚಿತ್ತಗಾಂಗ್‌ನ ಫ್ರಿಂಜಿ ಬಜಾರ್‌ನಲ್ಲಿರುವ ಲೋಕನಾಥ ಮಂದಿರದ ಮೇಲೆ ದಾಳಿ ನಡೆಸಿದೆ. ದುಷ್ಕರ್ಮಿಗಳು ದೊಣ್ಣೆ ಹಿಡಿದುಕೊಂಡು ದಾಳಿ ನಡೆಸುವುದು ಹಾಗೂ ಕಲ್ಲು ತೂರಾಟ ನಡೆಸಿದ ವಿಡಿಯೋವನ್ನು ಇಸ್ಕಾನ್ ಭಾರತ ಘಟಕದ ವಕ್ತಾರ ರಾಧಾರಮಣ ದಾಸ್ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ವಿಡಿಯೋದ ಪೋಸ್ಟ್ ಅನ್ನು ಪ್ರಧಾನಿ ನರೇಂದ್ರ ಮೋದಿ, ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಅವರ ಸಂಪುಟ ಸೇರಿಕೊಳ್ಳಲಿರುವ ತುಳಸಿ ಗಬ್ಬಾರ್ಡ್ ಅವರಿಗೆ ಟ್ಯಾಗ್ ಮಾಡಿ, ಬಾಂಗ್ಲಾದೇಶದಲ್ಲಿ ಹಿಂದೂಗಳ ರಕ್ಷಣೆಗೆ ಧಾವಿಸುವಂತೆ ಮನವಿ ಮಾಡಿದ್ದಾರೆ. ಇಸ್ಕಾನ್ ಬಾಂಗ್ಲಾದೇಶ ಘಟಕದ ಪ್ರಧಾನ ಕಾರ್ಯದರ್ಶಿ ಚಾರು ಚಂದ್ರದಾಸ್ ಚಿನ್ಮಯ್ ಕೃಷ್ಣದಾಸ್ ಬಂಧನ ಹಾಗೂ ಹಿಂದೂಗಳ ಮೇಲಿನ ದಾಳಿ ಖಂಡಿಸಿದ್ದು, ಅಲ್ಪಸಂಖ್ಯಾತರ ರಕ್ಷಣೆಗೆ ಬಾಂಗ್ಲಾದೇಶ ಸರಕಾರ ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ.

ದೆಹಲಿಯ ಪ್ರಶಾಂತ್ ವಿಹಾರ್ ಪ್ರದೇಶದಲ್ಲಿ ಮತ್ತೆ ಸ್ಫೋಟ

ನವದೆಹಲಿ: ದೆಹಲಿಯ ಪ್ರಶಾಂತ್ ವಿಹಾರ್ ಪ್ರದೇಶದಲ್ಲಿ



ಸಿಹಿ ಅಂಗಡಿ ಹಾಗೂ ಪಿವಿಆರ್ ಬಳಿ ಗುರುವಾರ ಸ್ಫೋಟ ಸಂಭವಿಸಿದೆ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

ರೋಹಿಣಿಯ ಪ್ರಶಾಂತ್ ವಿಹಾರ್‌ನ ಬನ್ಸಿ ಸ್ವೀಟ್ ಶಾಪ್ ಬಳಿ ಸ್ಫೋಟ ಸಂಭವಿಸಿತ್ತು. ಬೆಳಗ್ಗೆ 11.48ಕ್ಕೆ ಕರೆ ಸ್ವೀಕರಿಸಿದ ನಂತರ ನಾಲ್ಕು ಅಗ್ನಿಶಾಮಕ ಟೆಂಡರ್‌ಗಳು ಸ್ಥಳಕ್ಕೆ ಧಾವಿಸಿದವು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೂಲಗಳ ಪ್ರಕಾರ, ಅ.20ರಂದು ರೋಹಿಣಿಯಲ್ಲಿ ಸಿಆರ್‌ಪಿಎಫ್ ಶಾಲೆಯ ಸ್ಫೋಟದಲ್ಲಿ ಕಂಡುಬಂದ ರೀತಿಯ ಬಿಳಿ ಪುಡಿಯಂತಹ ವಸ್ತುವು ಸ್ಥಳದಲ್ಲಿ ಪತ್ತೆಯಾಗಿದೆ. ಬಾಂಬ್ ಡಾಟಾ ವಿಶ್ಲೇಷಣೆಗಾಗಿ ಎನ್‌ಎಸ್‌ಜಿ ತಂಡವನ್ನು ಕೋರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಸ್ಫೋಟದ ತನಿಖೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ದೆಹಲಿ ಪೊಲೀಸರಿಗೆ ನೆರವು ನೀಡಲಿದೆ ಎಂದು ಮೂಲಗಳು ತಿಳಿಸಿವೆ. ಅ.20ರಂದು, ದೆಹಲಿಯ ರೋಹಿಣಿ ಪ್ರದೇಶದ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಶಾಲೆಯ ಬಳಿ ನಿಗೂಢ ಸ್ಫೋಟ ಸಂಭವಿಸಿತ್ತು. ಕೆಲವು ಕಾರುಗಳು ಶಾಲೆಯ ಗೋಡೆಗೆ ಭಾಗಶಃ ಹಾನಿಯಾಯಿತು ಅದೃಷ್ಟವಶಾತ್ ಘಟನೆಯಲ್ಲಿ ಯಾರಿಗೂ ಗಾಯಗಳಾಗಿರಲಿಲ್ಲ.

ರುವಾಂಡದಿಂದ ಲಷ್ಕರ್ ಉಗ್ರ ರೆಹಮಾನ್ ಖಾನ್ ಭಾರತಕ್ಕೆ ಗಡಿಪಾರು

ರುವಾಂಡ: ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆಗೆ ಕುಮ್ಮಕ್ಕು ನೀಡಿದ್ದ ಲಷ್ಕರ್ ಇ ತೊಯ್ಬಾ ಸಂಘಟನೆಯ ಉಗ್ರ ಸಲ್ಮಾನ್ ರೆಹಮಾನ್ ಖಾನ್‌ನನ್ನು ರುವಾಂಡದಿಂದ ಭಾರತಕ್ಕೆ ಗಡಿಪಾರು ಮಾಡಿಸುವಲ್ಲಿ



ಸಿಬಿಐ, ಎನ್‌ಐಎ ಮತ್ತು ಇಂಟರ್‌ಪೋಲ್ ಯಶಸ್ವಿಯಾಗಿವೆ.

ಸಲ್ಮಾನ್ ರೆಹಮಾನ್ ಖಾನ್ ನಿಷೇಧಿತ ಭಯೋತ್ಪಾದಕ ಸಂಘಟನೆಯ ಸದಸ್ಯ ಎಂದು ಗುರುತಿಸಲಾಗಿದೆ. ಈತ ಉದ್ಯಾನ ನಗರಿ ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆಗೆ ಬೆಂಬಲ ನೀಡುವ ನಿಟ್ಟಿನಲ್ಲಿ ಶಸ್ತ್ರಾಸ್ತ್ರ, ಸ್ಫೋಟಕಗಳು ಹಾಗೂ ಮದ್ದುಗುಂಡುಗಳನ್ನು ಸರಬರಾಜು ಮಾಡಿರುವುದಾಗಿ ವರದಿ ತಿಳಿಸಿದೆ.

ಬೆಂಗಳೂರು ಜೈಲಿನ ಭಯೋತ್ಪಾದನೆ ಸಂಚಿನ ಪ್ರಕರಣದಲ್ಲಿ ಸಲ್ಮಾನ್ ಶಾಮೀಲಾಗಿದ್ದು, ಎನ್‌ಐಎ, ಇಂಟರ್‌ಪೋಲ್ ತನಿಖೆ ವೇಳೆ, ಬೆಂಗಳೂರಿನಲ್ಲಿ ಉಗ್ರ ಚಟುವಟಿಕೆ ನಡೆಸಲು ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿರುವ ಮಾಹಿತಿ ಬಯಲಿಗೆ ಬಂದಿತ್ತು. ರುವಾಂಡ ಇನ್ವೆಸ್ಟಿಗೇಷನ್ ಬ್ಯುರೋದ ಸಹಕಾರದೊಂದಿಗೆ ಇಂಟರ್‌ಪೋಲ್ ಮತ್ತು ನ್ಯಾಷನಲ್ ಸೆಂಟ್ರಲ್ ಬ್ಯುರೋ ಸಲ್ಮಾನ್ ರೆಹಮಾನ್ ಖಾನ್‌ನನ್ನು ರುವಾಂಡ ರಾಜಧಾನಿ ಕಿಗಾಲಿಯಲ್ಲಿ ಬುಧವಾರ (ನ.27) ಬಂಧಿಸಿತ್ತು.

ವಿರಾಜಪೇಟೆ ಕ್ಷೇತ್ರಕ್ಕೆ 5 ಕೋಟಿ ಅನುದಾನ ಬಿಡುಗಡೆ



ವಿರಾಜಪೇಟೆಯ ವಿದ್ಯಾನಗರದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

ವಿರಾಜಪೇಟೆ, ನ.28–ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆಯಿಂದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ 5 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕು ರಸ್ತೆ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದರು.

ಪಟ್ಟಣದ 9ನೇ ವಾರ್ಡ್‌ನ ವಿದ್ಯಾನಗರದಲ್ಲಿ 45 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಮಂಜುನಾಥ ಹಾಗೂ ವಿಜಯನಗರದಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಹಾಗೂ ಪೆರುಂಬಾಡಿ ಚೆಕ್‌ಪೋಸ್ಟ್‌ನಿಂದ ಮಾಕುಟ್ಟ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ವರ್ಷ ಅತೀ ಮಳೆಯಿಂದಾಗಿ ಪಟ್ಟಣ ಹಾಗೂ ಗ್ರಾಮೀಣ ಭಾಗದ ರಸ್ತೆಗಳು ಹೆಚ್ಚು ಹಾನಿಯಾಗಿದ್ದು, ಶೀಘ್ರದಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಹಂತ ಹಂತವಾಗಿ ನಡೆಸಲಾಗುವುದು. ಕಳೆದ 15–20 ವರ್ಷಗಳಿಂದ ಕ್ಷೇತ್ರದ ಅನೇಕ ರಸ್ತೆಗಳು ಅಭಿವೃದ್ಧಿಯಾಗಿಲ್ಲ. ಸಾರ್ವಜನಿಕರು ಎಲ್ಲಿ, ಯಾವ ಕೆಲಸ ಆಗಬೇಕು ಎಂದು ಸಲಹೆ ನೀಡಿ ಸಹಕರಿಸಬೇಕು ಎಂದರು. ಇದೇ ವೇಳೆ 9ನೇ ವಾರ್ಡ್ ಸದಸ್ಯ ಮಹ್ಮದ್ ರಫಿ, ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಅಕ್ರಮ–ಸಕ್ರಮ ಸಮಿತಿ ಅಧ್ಯಕ್ಷ ಆರ್.ಕೆ.ಸಲಾಂ, ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಉಪಾಧ್ಯಕ್ಷೆ ಫಸಿಹಾ ತಬಸುಮ್, ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಎಸ್.ಹೆಚ್.ಮತೀನ್, ಡಿ.ಪಿ.ರಾಜೇಶ್, ಅಸಿಫ್ ಮನ್ನಾ, ಮುಖಂಡರಾದ ಮುಜಾಮಿಲ್, ಜುಬೇರ್, ಸರಿನ್ ಚಂಗಪ್ಪ ಮತ್ತಿತರರು ಹಾಜರಿದ್ದರು.

ರಸ್ತೆ ದುರಸ್ತಿಗೆ ಒತ್ತಾಯಿಸಿ ಆಟೋ ಚಾಲಕರ ಪ್ರತಿಭಟನೆ



ಅಮ್ಮತ್ತಿ–ಪಾಲಿಬೆಟ್ಟ ರಸ್ತೆ ಸರಿಪಡಿಸುವಂತೆ ಒತ್ತಾಯಿಸಿ ಆಟೋ ಚಾಲಕರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ನ.28– ಅಮ್ಮತ್ತಿಯಿಂದ ಪಾಲಿಬೆಟ್ಟಕ್ಕೆ ತೆರಳುವ ರಸ್ತೆ ಸರಿಪಡಿಸುವಂತೆ ಒತ್ತಾಯಿಸಿ ಆಟೋ ಚಾಲಕರು ಅಮ್ಮತ್ತಿ ಬಸ್ ನಿಲ್ದಾಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಅಮ್ಮತ್ತಿ–ಪಾಲಿಬೆಟ್ಟ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ಇದರಿಂದ ಈ ರಸ್ತೆಯಲ್ಲಿ ವಾಹನ ಸವಾರರು ಓಡಾಡಲು ಸಾಧ್ಯವಾಗುತ್ತಿಲ್ಲ. ಈ ರಸ್ತೆಯಲ್ಲಿ ಆಟೋ ಸಂಚರಿಸಿದರೆ ಆಟೋವನ್ನು ಗ್ಯಾರೇಜ್‌ನಲ್ಲಿ ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಗರ್ಭಿಣಿಯರನ್ನು ಈ ರಸ್ತೆಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರೆ ಆಟೋದಲ್ಲೇ ಹೆರಿಗೆ ಆಗಲಿದೆ. ಇಷ್ಟೊಂದು ಹದಗೆಟ್ಟಿರುವ ರಸ್ತೆಯನ್ನು ತಕ್ಷಣ ದುರಸ್ತಿ ಪಡಿಸುವಂತೆ ಆಗ್ರಹಿಸಿದರು.



ಬೆಳ್ಳಿ ಪದಕ ಪಡೆದ ವಿದ್ಯಾರ್ಥಿನಿ ಹೆಚ್.ಎಂ.ಜಿತಿಕಾ.

ಕರಾಟೆ : ಜಿತಿಕಾಗೆ ಬೆಳ್ಳಿ ಪದಕ

ಮಡಿಕೇರಿ, ನ.28– ಕೇರಳದ ಕಾಸರಗೋಡಿನಲ್ಲಿ ನಡೆದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಭಾಗಮಂಡಲದ ಕರಾಟೆ ತರಬೇತಿ ಕೇಂದ್ರದ ವಿದ್ಯಾರ್ಥಿನಿ ಹೆಚ್.ಎಂ.ಜಿತಿಕಾ ಬೆಳ್ಳಿ ಪದಕ ಗೆದ್ದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ಈಕೆ ಮಡಿಕೇರಿ ತಾಲೂಕಿನ ಚೆಟ್ಟಿಮಾನಿಯ ನಿವಾಸಿ ಮಂಜು ಹಾಗೂ ನಮಿತಾ ದಂಪತಿ ಪುತ್ರಿ. ಕರಾಟೆ ತರಬೇತುದಾರರಾದ ಕೆ.ಜೆ.ಇಮ್ಯಾನುಯಲ್, ರಾಯ್ ಜೋಸೆಫ್ ಹಾಗೂ ತರಬೇತಿ ಕೇಂದ್ರದ ನಿರ್ದೇಶಕ ನಾಗರಾಜ್ ಅವರ ತರಬೇತಿ ಪಡೆಯುತ್ತಿದ್ದಾಳೆ.

15 ಅಂಶ ಕಾರ್ಯಕ್ರಮ ಪ್ರಗತಿ ಸಾಧಿಸಿ

ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳಿಗೆ ಡಿಸಿ ವೆಂಕಟ್ ರಾಜಾ ಸೂಚನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿದರು.

> "ಶ್ರಮಶಕ್ತಿ, ಸ್ವಾವಲಂಬಿ ಸಾರಥಿ, ವೃತ್ತಿ ಪ್ರೋತ್ಸಾಹ, ಅರಿವು, ನೇರಸಾಲ, ಉನ್ನತ ಶಿಕ್ಷಣಕ್ಕೆ ಸಾಲ ಯೋಜನೆ ಹೀಗೆ ಹಲವು ಯೋಜನೆ ತಲುಪಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೂಲಕ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೌಲನಾ ಆಜಾದ್ ವಸತಿ ಶಾಲೆ ಅಭಿವೃದ್ಧಿ ಸಂಬಂಧಿಗೊಳಿಸಲಾಗುತ್ತಿದೆ.
>
> –ಆರ್.ಕೃಷ್ಣಮೂರ್ತಿ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

ಮಡಿಕೇರಿ, ನ.28–ಅಲ್ಪಸಂಖ್ಯಾತರ ಸಮುದಾಯಕ್ಕಾಗಿ ಜಾರಿಗೊಳಿಸಲಾಗಿರುವ ಪ್ರಧಾನಮಂತ್ರಿ 15 ಅಂಶದ ಕಾರ್ಯಕ್ರಮಗಳ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ವಿವಿಧ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ವಿವಿಧ ಇಲಾಖೆಯಡಿ ಅಲ್ಪಸಂಖ್ಯಾತರ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಕೂಡಲೇ ಸಾಧಿಸಬೇಕು. ಶೈಕ್ಷಣಿಕ ಸೌಲಭ್ಯ ಕಲ್ಪಿಸುವುದು, ತಂತ್ರಜ್ಞಾನ ತರಬೇತಿ ಮೂಲಕ ಕೌಶಲ ಕಾರ್ಯಕ್ರಮ ತಲುಪಿಸುವುದು, ಆರ್ಥಿಕ ಚಟುವಟಿಕೆ ಬಲಪಡಿಸುವುದು, ನಾಗರಿಕ ಸೇವಾ ತರಬೇತಿ, ವಸತಿ ಯೋಜನೆ, ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಿಸಲು ವಸತಿ ಯೋಜನೆ, ಹೀಗೆ ಹಲವು ಕಾರ್ಯಕ್ರಮಗಳನ್ನು ಅಲ್ಪಸಂಖ್ಯಾತರಿಗೆ ತಲುಪಿಸುವಂತೆ ನಿರ್ದೇಶಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಟರಾಜು ಮಾತನಾಡಿ, ಇಲಾಖೆಯಿಂದ ಪೂರಕ ಪೌಷ್ಟಿಕ ಆಹಾರ ಕಲ್ಪಿಸುವುದು, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ತಲುಪಿಸುವುದು ಸೇರಿದಂತೆ ಹಲವು ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ರಂಗಧಾಮಪ್ಪ ಮಾತನಾಡಿ, ಶಾಲೆಗಳಲ್ಲಿ ಸಮವಸ್ತ್ರ, ಉಚಿತ ಪಠ್ಯಪುಸ್ತಕ ವಿತರಣೆ, ವಿದ್ಯಾರ್ಥಿ ವೇತನ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ಸೂಕ್ಷ್ಮ ನೀರಾವರಿ, ಕೃಷಿ ಯಾಂತ್ರೀಕರಣ, ಬಿತ್ತನೆ ಬೀಜ ವಿತರಣೆ ಹೀಗೆ ಹಲವು ಕಾರ್ಯಕ್ರಮ ತಲುಪಿಸಲಾಗುತ್ತಿದೆ ಎಂದರು. ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮುತ್ತಪ್ಪ ಮಾತನಾಡಿ, ಇಲಾಖೆಯಿಂದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಜೇನು ಸಾಕಾಣಿಕೆ, ರಾಷ್ಟ್ರೀಯ ಖಾದ್ಯತೈಲ ಅಭಿಯಾನದಡಿ ತಾಳೆಬೆಳೆ ಯೋಜನೆ ಅನುಷ್ಠಾನ ಸಹಾಯಧನ ಯೋಜನೆ ತಲುಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬಿ.ಬಸಪ್ಪ, ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಸಚಿನ್ ಇಲಾಖೆ ಬಗ್ಗೆ ಮಾಹಿತಿ ನೀಡಿದರು. ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್, ಜಿಪಂ ಉಪ ಕಾರ್ಯದರ್ಶಿ ಧನರಾಜ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಲಿಂಗರಾಜು ದೊಡ್ಡಮನಿ, ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉಪನಿರ್ದೇಶಕ ರಘು, ಉದ್ಯೋಗ ವಿನಿಮಯಾಧಿಕಾರಿ ರೇಖಾ, ಖಾದಿ ಮತ್ತು ಗ್ರಾಮೋದ್ಯೋಗ ಅಧಿಕಾರಿ ಇತರರು ಇದ್ದರು.

ಕೇರಳ ಲಾಟರಿ ಮಾರುತ್ತಿದ್ದವನ ಬಂಧನ



ಲತೀಫ್



ವಶಪಡಿಸಿಕೊಂಡ ಕೇರಳ ಲಾಟರಿ.

ಮಡಿಕೇರಿ, ನ.28–ನಗರದಲ್ಲಿ ಕೇರಳ ಲಾಟರಿ ಮಾರುತ್ತಿದ್ದ ಆರೋಪಿಯನ್ನು ಸೆನ್ ಠಾಣಾ ಪೊಲೀಸರು ಬಂಧಿಸಿದ್ದಾರೆ. ಸುಂಟಿಕೊಪ್ಪ ನಿವಾಸಿ ಲತೀಫ್ (40) ಬಂಧಿತ. ಈತನಿಂದ 40 ರೂ. ಮುಖ ಬೆಲೆಯ 1800 ಲಾಟರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹಿಂಬದಿ ರಸ್ತೆಯಲ್ಲಿ ಲಾಟರಿ ಮಾರುತ್ತಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಗೆ ಮಾಹಿತಿ ಲಭಿಸಿತ್ತು.

ಈ ಹಿನ್ನೆಲೆಯಲ್ಲಿ ಸೆನ್ ಠಾಣೆಯ ಡಿವೈಎಸ್‌ಪಿ ರವಿ, ಡಿಸಿಆರ್‌ಬಿ ವೃತ್ತ ನಿರೀಕ್ಷಕ ಐ.ಪಿ.ಮೇದಪ್ಪ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಲಾಟರಿ ಸಹಿತ ಆರೋಪಿಯನ್ನು ಬಂಧಿಸಿದ್ದಾರೆ.

ಹೆಜ್ಜೇನು ದಾಳಿಯಿಂದ ವ್ಯಕ್ತಿಗೆ ಗಾಯ



ಹೆಜ್ಜೇನು ದಾಳಿ ಗಾಯಗೊಂಡ ರಮೇಶ್ ಆಸ್ಪತ್ರೆಗೆ ದಾಖಲಾಗಿರುವುದು.

ಮಡಿಕೇರಿ, ನ.28–ದನಗಳನ್ನು ಕಟ್ಟಲು ಹೋದ ವ್ಯಕ್ತಿ ಮೇಲೆ ಹೆಜ್ಜೇನು ದಾಳಿ ನಡೆಸಿರುವ ಘಟನೆ ಪೊನ್ನಂಪೇಟೆಯ ಬೆಳ್ಳೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ನಿವಾಸಿ ರಮೇಶ್ ಹೆಜ್ಜೇನು ದಾಳಿಯಿಂದ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ರಮೇಶ್ ಬೆಳಗ್ಗೆ ಎಂದಿನಂತೆ ತಮ್ಮ ಗದ್ದೆಯಲ್ಲಿ ದನಗಳನ್ನು ಕಟ್ಟಲು ತೆರಳಿದ್ದರು. ಈ ಸಂದರ್ಭ ಹೆಜ್ಜೇನು ದಾಳಿ ಮಾಡಿವೆ. ಹೆಜ್ಜೇನಿಂದ ತಪ್ಪಿಸಿಕೊಳ್ಳಲು ರಮೇಶ್ ಮನೆಯ ಕಡೆಗೆ ಓಡಿ ಬಂದಿದ್ದು, ಬಳಿಕ ಪ್ರಜ್ಞೆ ತಪ್ಪಿ ರಸ್ತೆ ಬದಿಯಲ್ಲಿ ಬಿದ್ದಿದ್ದಾರೆ.

ದನ ಕಟ್ಟಲು ಹೋದ ಪತಿ ತಡವಾದರೂ ಮನೆಗೆ ಬಂದಿಲ್ಲ ಎಂದು ಪತ್ನಿ ತಷ್ಮಾ ರಮೇಶ್ ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆದರೆ, ಕರೆ ಸ್ವೀಕರಿಸದಿದ್ದರಿಂದ ಗದ್ದೆಗೆ ಹುಡುಕಿಕೊಂಡು ಹೋಗಿದ್ದಾರೆ. ಈ ವೇಳೆ ಹೆಜ್ಜೇನು ದಾಳಿಯಿಂದ ರಮೇಶ್ ರಸ್ತೆಬದಿ ಬಿದ್ದಿರುವುದನ್ನು ಕಂಡಿದ್ದಾರೆ. ತಕ್ಷಣ ಪಕ್ಕದ ಮನೆ ನಿವಾಸಿ ಬಿದ್ದಪ್ಪ ಅವರಿಗೆ ಕರೆ ಮಾಡಿ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಬಂದ ಬಿದ್ದಪ್ಪ, ರಮೇಶ್ ಅವರನ್ನು ಪೊನ್ನಂಪೇಟೆ ರಾಮಕೃಷ್ಣ ಆಶ್ರಮದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ರಾಷ್ಟ್ರಕ್ಕೆ ಸಣ್ಣ ಕೈಗಾರಿಕೆಗಳ ಕೊಡುಗೆ ಅಪಾರ

ರಫ್ತು ಕುರಿತ ಅರಿವು ಕಾರ್ಯಕ್ರಮದಲ್ಲಿ ಕಾಸಿಯಾ ಅಧ್ಯಕ್ಷ ರಾಜಗೋಪಾಲ್ ಅಭಿಮತ



ಚಾಮರಾಜನಗರದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ರಫ್ತು ಕುರಿತ ಅರಿವು ಕಾರ್ಯಕ್ರಮವನ್ನು ಕಾಸಿಯಾ ಅಧ್ಯಕ್ಷ ಎಂ.ಜಿ ರಾಜಗೋಪಾಲ್ ಉದ್ಘಾಟಿಸಿದರು.

> "ಪ್ರತಿ ಜಿಲ್ಲೆಯಲ್ಲಿ ವರ್ಷಕ್ಕೆ 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸಿ ಹೊರ ಬರುತ್ತಿದ್ದಾರೆ. ಇವರಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವುದು ಅಥವಾ ಸ್ವತಃ ಅವರೇ ಸಣ್ಣ ಕೈಗಾರಿಕೆಗಳನ್ನು ಆರಂಭಿಸಲು ಮಾರ್ಗದರ್ಶನ ನೀಡಿ ಉದ್ಯೋಗಾವಕಾಶ ಸೃಷ್ಟಿಸುವುದು ಸರ್ಕಾರದ ಉದ್ದೇಶ. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ದೇಶದ ಕೈಗಾರಿಕಾ ಕ್ಷೇತ್ರದ ಬೆನ್ನೆಲುಬಾಗಿದೆ. ಬದಲಾಗುತ್ತಿರುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳನ್ನು ಸದೃಢಗೊಳಿಸುವುದು ಗುರಿಯಾಗಿದೆ.
>
> –ಟಿ.ದಿನೇಶ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ

ಚಾಮರಾಜನಗರ, ನ.28–ರಾಜ್ಯ ಹಾಗೂ ರಾಷ್ಟ್ರದ ಬೆಳವಣಿಗೆಗೆ ಸಣ್ಣ ಕೈಗಾರಿಕೆಗಳ ಕೊಡುಗೆ ಅಪಾರವಾಗಿದ್ದು, ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳು ಕೃಷಿ ಕ್ಷೇತ್ರದ ನಂತರ ಹೆಚ್ಚು ಉದ್ಯೋಗಾವಕಾಶಗಳನ್ನು ನೀಡುತ್ತಿವೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ ರಾಜಗೋಪಾಲ್ ತಿಳಿಸಿದರು.

ನಗರದ ಖಾಸಗಿ ರೆಸಾರ್ಟ್‌ನಲ್ಲಿ ಗುರುವಾರ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿಟಿಪಿಸಿ) ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ಸಹಯೋಗದಲ್ಲಿ ಎಂಎಸ್‌ಎಂಇಗಳ ಕಾರ್ಯಕ್ಷಮತೆ ಹೆಚ್ಚಳ ಮತ್ತು ವೇಗಗೊಳಿಸುವ (ರ್‍ಯಾಂಪ್) ಯೋಜನೆಯಡಿ ಆಯೋಜಿಸಿದ್ದ ಲೀನ್ ಯೋಜನೆ, ಝಡ್ ಇಡಿ ಹಾಗೂ ರಫ್ತು ಕುರಿತ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿಯಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ ಮಹತ್ತರವಾಗಿದೆ. ಜೊತೆಗೆ ಸಾಕಷ್ಟು ಉದ್ಯೋಗ ಅವಕಾಶ ಒದಗಿಸುತ್ತಿವೆ. ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುವುದರಿಂದ ದೇಶದ ಪ್ರಗತಿಗೆ ಸಹಕಾರಿಯಾಗಲಿದೆ. ಹೀಗಾಗಿ ಸಣ್ಣ ಕೈಗಾರಿಕೆಗಳು ಬೆಳವಣಿಗೆಯಾಗಬೇಕು ಎಂದರು.

ಜಿಲ್ಲೆಯ ನೈಸರ್ಗಿಕ, ಮಾನವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಕೈಗಾರಿಕೆಗಳ ಅಭಿವೃದ್ಧಿಯನ್ನು ಬಲವರ್ಧನೆಗೊಳಿಸಬೇಕಿದೆ. ಚಾಮರಾಜನಗರ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯಕ್ಕೆ ಮಾದರಿಯಾಗುವಂತಾಗಬೇಕು. ಕೈಗಾರಿಕೆಗಳ ಬೆಳವಣಿಗೆಗೆ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಹೇಳಿದರು.

ಸಣ್ಣ ಕೈಗಾರಿಕೆ ಕ್ಷೇತ್ರ ಬೆಳೆದು ರಫ್ತು ಹೆಚ್ಚಾಗಿ ಆಮದು ಕಡಿಮೆಯಾಗಬೇಕು. ವಿಶ್ವ ಬ್ಯಾಂಕ್ ಮತ್ತು ಸರ್ಕಾರ ಜೊತೆಗೂಡಿ ಎಂಎಸ್‌ಎಂಇಗಳ ಕಾರ್ಯಕ್ಷಮತೆ ಹೆಚ್ಚಳ ಹಾಗೂ ಆರ್‌ಎಎಂಪಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಯನ್ನು ತಂತ್ರಜ್ಞಾನ, ಮಾರುಕಟ್ಟೆ ವ್ಯವಸ್ಥೆಗೆ ತಕ್ಕಂತೆ ಪರಿವರ್ತನೆಗೊಳಿಸಬಹುದು ಎಂದರು.

ಜಿಲ್ಲಾ ಗ್ರಾನೈಟ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಎಂ.ಹೆಗ್ಡೆ ಮಾತನಾಡಿ, ಜಿಲ್ಲೆಯ ಕೈಗಾರಿಕಾ ಪ್ರದೇಶ ಅಭಿವೃದ್ಧಿಯಲ್ಲಿ ಮುಖ್ಯಮಂತ್ರಿಗಳ ಕೊಡುಗೆ ದೊಡ್ಡದಿದೆ. ಬಹಳಷ್ಟು ಕೈಗಾರಿಕೆಗಳು, ಜಿಲ್ಲೆಯಲ್ಲಿ ಸ್ಥಾಪನೆಯಾಗುತ್ತಿರುವುದು ಸಂತಸ. ಜಿಲ್ಲೆಯ ಜನತೆಗೆ ಉದ್ಯೋಗ ದೊರೆಯಲು ಸಹಕಾರಿಯಾಗಲಿದೆ. ಗ್ರಾನೈಟ್ ಮಾಲೀಕರ ಸಂಘ ಕೈಗಾರಿಕೆಗಳಲ್ಲಿ ಮಾನವ ಸಂಪನ್ಮೂಲಕ್ಕೆ ಬೇಕಾಗಿರುವ ಕೌಶಲ ತರಬೇತಿ ನೀಡುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಜಯಸಿಂಹ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ವಿ.ಪ್ರಭಾಕರ್, ಉಪಾಧ್ಯಕ್ಷ ಬಿ.ಆರ್.ಗಣೇಶ್ ರಾವ್, ಗ್ರಾಮೀಣ ಜಂಟಿ ಕಾರ್ಯದರ್ಶಿ ಎನ್.ಸತೀಶ್, ಖಜಾಂಚಿ ಹೆಚ್.ಮಂಜುನಾಥ್, ಜಿಲ್ಲಾಭಿವೃದ್ಧಿ ಉಪ ಸಮಿತಿ ಅಧ್ಯಕ್ಷ ಮಂಜುನಾಥ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗುಂಬಳ್ಳಿ ಗ್ರಾಪಂ ಅಧ್ಯಕ್ಷೆ ಮೀನಾಕ್ಷಿ ಪದಚ್ಯುತಿ



ಗುಂಬಳ್ಳಿ ಗ್ರಾಪಂ ಅಧ್ಯಕ್ಷೆ ಮೀನಾಕ್ಷಿ ವಿರುದ್ಧ ಸದಸ್ಯರು ಉಪವಿಭಾಗಾಧಿಕಾರಿ ಮಹೇಶ್ ಅಧ್ಯಕ್ಷತೆಯಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸಿದರು.

ಯಳಂದೂರು, ನ.28–ತಾಲೂಕಿನ ಗುಂಬಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮೀನಾಕ್ಷಿ ವಿರುದ್ಧ ಅವಿಶ್ವಾಸಗೊತ್ತುವಳಿ ಮಂಡಿಸಿ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಲಾಯಿತು.

ಗ್ರಾಪಂನಲ್ಲಿ ಒಟ್ಟು 20 ಸದಸ್ಯರಿದ್ದು, ಅಧ್ಯಕ್ಷೆ ಮೀನಾಕ್ಷಿ ಆಡಳಿತ ವೈಖರಿ ವಿರುದ್ಧ 14 ಸದಸ್ಯರು ಸಹಿ ಮಾಡಿ ಉಪವಿಭಾಗಾಧಿಕಾರಿ ಮಹೇಶ್ ಅವರಿಗೆ ಮನವಿ ಸಲ್ಲಿಸಿದರು. ಅದರಂತೆ ಬುಧವಾರ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡಿಸಲು ಸಭೆ ಕರೆಯಲಾಗಿತ್ತು. ವಿಶ್ವಾಸ ಗಳಿಸಲು ಮೀನಾಕ್ಷಿ ವಿಫಲರಾದ ಕಾರಣ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಲಾಯಿತು.

ಮುಂದಿನ ಅಧ್ಯಕ್ಷರ ಆಯ್ಕೆ ತನಕ ಉಪಾಧ್ಯಕ್ಷ ಶ್ರೀನಿವಾಸ್ ಅವರನ್ನು ಪ್ರಭಾರ ಅಧ್ಯಕ್ಷರಾಗಿ ನೇಮಕ ಮಾಡಿ ಉಪವಿಭಾಗಾಧಿಕಾರಿ ಮಹೇಶ್ ಆದೇಶಿಸಿದರು.

ಸಭೆಯಲ್ಲಿ ಗ್ರಾಪಂ ಸದಸ್ಯರಾದ ಕೊಮಾರನಪುರ ಚಂದ್ರಶೇಖರ್, ನಟರಾಜು, ಮಂಜುಳ ರವಿ, ಶಾಂತಮ್ಮ ಪುಟ್ಟಮಾದಯ್ಯ, ನಾಗುರಾಚಪ್ಪ, ಶಕುಂತಲ ಚಿಕ್ಕಣ್ಣ, ಪುಟ್ಟಮಾದೇವಿ ವೆಂಕಟೇಶ್, ಕೆ.ಮಾದೇಶ್, ವಿ.ಮಹೇಶ್, ಜ್ಯೋತಿ ಸೋಮಣ್ಣ, ಮಮತಾ, ರಾಜೇಂದ್ರ, ಶಿವಮ್ಮ ಹಾಜರಿದ್ದರು.

ಸಿಎಂ ಸ್ವಾಭಿಮಾನಿ ಸಮಾವೇಶ ಬೆಂಬಲಿಸಲು ಮನವಿ



ಚಾಮರಾಜನಗರ ತಾಲೂಕು ಕುರುಬರ ಸಂಘದ ಸಂಕೀರ್ಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಮಾವೇಶದ ಭಿತ್ತಿ ಪತ್ರ ಪ್ರದರ್ಶಿಸಲಾಯಿತು.

ಚಾಮರಾಜನಗರ, ನ.28–ವಿವಿಧ ಪ್ರಗತಿಪರ ಸಂಘಟನೆ ಹಾಗೂ ಇತರೆ ವರ್ಗಗಳ ಒಕ್ಕೂಟ ಡಿ.5ರಂದು ಹಾಸನದಲ್ಲಿ ಹಮ್ಮಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶವನ್ನು ಬೆಂಬಲಿಸುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಮನವಿ ಮಾಡಿದರು.

ನಗರದ ಜೋಡಿರಸ್ತೆಯ ತಾಲೂಕು ಕುರುಬರ ಸಂಘದ ಸಂಕೀರ್ಣದಲ್ಲಿ ನಡೆದ ಸಿಎಂ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸುದೀರ್ಘ 45 ವರ್ಷಗಳ ರಾಜಕಾರಣದಲ್ಲಿ ನಿಷ್ಕಳಂಕ ಹಾಗೂ ನೈತಿಕತೆಯ ಸಾಕ್ಷಿಪ್ರಜ್ಞೆಯಾಗಿರುವ ಸಿದ್ದರಾಮಯ್ಯನವರು 2ನೇ ಬಾರಿಗೆ ಮುಖ್ಯಮಂತ್ರಿಯಾಗಿ ಅತ್ಯಂತ ಸಮರ್ಥವಾಗಿ ಆಡಳಿತ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲ ರಾಜಕೀಯ ದುಷ್ಟ ಶಕ್ತಿಗಳು ಸಾಮಾನ್ಯ ವರ್ಗದವರನ್ನ ಸಿಎಂ ವಿರುದ್ಧ ಎತ್ತಿಕಟ್ಟಿ ಷಡ್ಯಂತರ ರೂಪಿಸುತ್ತಿವೆ ಎಂದು ಆರೋಪಿಸಿದರು.

ಇಂತಹ ಪರಿಸ್ಥಿತಿಯಲ್ಲಿ ಸರ್ವಜನಾಂಗದ ಸ್ವಾಭಿಮಾನಿ ನಾಯಕರಾದ ಸಿದ್ದರಾಮಯ್ಯನವರ ಪರವಾಗಿ ಗಟ್ಟಿಯಾಗಿ ನಿಲ್ಲಬೇಕು. ಆದ್ದರಿಂದ ಶೋಷಿತ, ಅಹಿಂದ ಹಾಗೂ ಇತರೆ ವರ್ಗಗಳು ಸಿದ್ದರಾಮಯ್ಯನವರಿಗೆ ಬೆಂಬಲ ಸೂಚಿಸುವ ಸಲುವಾಗಿ ಹಾಸನದಲ್ಲಿ ಬೃಹತ್ ಸ್ವಾಭಿಮಾನಿ ಸಮಾವೇಶ ಆಯೋಜಿಸಲಾಗಿದೆ. ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು

ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ನಂಜೇಗೌಡ, ತಾಲೂಕು ಅಧ್ಯಕ್ಷ ಆರ್.ಉಮೇಶ್ ಎಸ್‌ಪಿಕೆ, ಸಿದ್ದರಾಮಯ್ಯ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಬೆಳ್ಳೇಗೌಡ, ಅಹಿಂದ ಜಿಲ್ಲಾಧ್ಯಕ್ಷ ಮಹೇಶ ಹಳೇಪುರ, ಕಾರ್ಯಾಧ್ಯಕ್ಷ ಕೆರೆಹಳ್ಳಿ ರಾಜ್‌ಕುಮಾರ್, ಯಳಂದೂರು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೊಂಡೇಗೌಡ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಜಿಡಿಎಲ್ ಸುರೇಶ್, ನಿರ್ದೇಶಕ ಬಸಪ್ಪನಪಾಳ್ಯ ನಟರಾಜು, ಶಿವಲಿಂಗೇಗೌಡ ಮುತ್ತಿಗೆ, ಉಮೇಶ್, ರೇವಣ್ಣ, ಪುನೀತ್ ಕುಮಾರ್ ಇತರರು ಹಾಜರಿದ್ದರು.

ಅಮಚವಾಡಿಯಲ್ಲಿ ಚಿರತೆ ದಾಳಿಗೆ ಹಸು ಬಲಿ

ಚಾಮರಾಜನಗರ: ತಾಲೂಕಿನ ಅಮಚವಾಡಿಯಲ್ಲಿ ಗುರುವಾರ ಚಿರತೆ ದಾಳಿ ನಡೆಸಿ, ಹಸುವನ್ನು ಕೊಂದುಹಾಕಿದೆ.

ಗ್ರಾಮದ ಮಹದೇವ ನಾಯಕ ಅವರ ಬಲಿಯಾದ ಹಸು. ಮಹದೇವ ನಾಯಕ ಎಂದಿನಂತೆ ಹಸುವನ್ನು ತೋಟದಲ್ಲಿ ಮೇಯಲು ಬಿಟ್ಟಿದ್ದರು. ಈ ವೇಳೆ ಚಿರತೆ ದಿಢೀರನೆ ದಾಳಿ ನಡೆಸಿ ಹಸುವನ್ನು ಕೊಂದುಹಾಕಿದೆ. ನಂತರ ಹಸುವಿನ ಹಿಂದಿನ ಭಾಗವನ್ನು ತಿಂದುಹಾಕಿದೆ. ಇದನ್ನು ಕಂಡ ಅಕ್ಕಪಕ್ಕದಲ್ಲೇ ಇದ್ದ ರೈತರು ಕೂಗಾಡಿದ್ದಾರೆ. ಇದರಿಂದ ಚಿರತೆ ಹಸುವನ್ನು ಅಲ್ಲೇ ಬಿಟ್ಟು ಗುಡ್ಡದ ಕಡೆ ಪರಾರಿಯಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ.



ಅಮಚವಾಡಿಯಲ್ಲಿ ಚಿರತೆ ದಾಳಿ ನಡೆಸಿ ಹಸುವನ್ನು ಕೊಂದುಹಾಕಿರುವುದು.

ಕನ್ನಡ ರಾಜ್ಯೋತ್ಸವ ಆಚರಣೆ...



ಚಾಮರಾಜನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕಸ್ತೂರಿ ಕನ್ನಡ ಜನಪರ ಹೋರಾಟ ವೇದಿಕೆ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ವೇದಿಕೆ ಗೌರವಾಧ್ಯಕ್ಷ ಪಿ.ಲಿಂಗರಾಜು, ಜಿಲ್ಲಾಧ್ಯಕ್ಷ ಎಂ.ನಾಗಬಸವಣ್ಣ, ಕಾರ್ಯಾಧ್ಯಕ್ಷ ಕುಮಾರ್, ಉಪಾಧ್ಯಕ್ಷ ಮಹದೇವ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಅಬ್ಬಾಸ್, ಸಹ ಸಂಘಟನಾ ಕಾರ್ಯದರ್ಶಿ ಮಹಮ್ಮದ್ ಮುಹೀಬ್, ಕರವೇ ಜಿಲ್ಲಾಧ್ಯಕ್ಷ ಚಾ.ಗು.ನಾಗರಾಜ್, ಜನಹಿತ ಶಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಇತರರಿದ್ದರು.

ಡಿಸೆಂಬರ್‌ನಲ್ಲಿ ಮತ್ತೆ ಸ್ಟಾರ್‌ವಾರ್!

ಐದು ದಿನದ ಅಂತರದಲ್ಲಿ ಉಪೇಂದ್ರರ ಯುಐ, ಸುದೀಪ್‌ರ ಮ್ಯಾಕ್ಸ್ ತೆರೆಗೆ





ಉಪೇಂದ್ರ ನಟಿಸಿ, ನಿರ್ದೇಶಿಸಿರುವ ಯುಐ ಡಿ.20ಕ್ಕೆ ರಿಲೀಸ್ ಅಂತ ಈಗಾಗಲೇ ಅನೌನ್ಸ್ ಆಗಿದೆ. ಇದೀಗ ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಸಿನಿಮಾ ಕೂಡ ಡಿ.25ಕ್ಕೆ ರಿಲೀಸಾಗಲಿದೆ ಎಂದು ನಿರ್ಮಾಪಕ ಕಲೈಪುಲಿ ಎಸ್.ತನು ಪ್ರಕಟಿಸಿದ್ದಾರೆ. ಕೇವಲ ಐದು ದಿನಗಳ ಅಂತರದಲ್ಲಿ ಸುದೀಪ್‌ರ ಮ್ಯಾಕ್ಸ್ ಹಾಗೂ ಉಪೇಂದ್ರರ ಯುಐ ಸಿನಿಮಾಗಳು ರಿಲೀಸ್ ಆಗುತ್ತಿರೋದು ಈಗ ದೊಡ್ಡ ಸುದ್ದಿಯಾಗಿದೆ. ತಮಿಳಿನ ಹೆಸರಾಂತ ನಿರ್ಮಾಪಕ ಕಲೈಪುಲಿ ಎಸ್. ತನು ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಕ್ರಿಸ್‌ಮಸ್ ಹಬ್ಬಕ್ಕೇ ರಿಲೀಸ್ ಮಾಡಬೇಕೆನ್ನುವುದು ಅವರ ಆಸೆ. ಇದೀಗ ಈ ಎರಡೂ ಸಿನಿಮಾಗಳ ರಿಲೀಸ್ ಬಗ್ಗೆ ಗಾಂಧಿನಗರದ ಗಲ್ಲಿ ಗಲ್ಲಿಗಳಲ್ಲಿ ಚರ್ಚೆಯಾಗುತ್ತಿದೆ. ಚೇಂಬರ್ ಹಾಗೂ ನಿರ್ಮಾಪಕರ ಸಂಘ ಮುಂದೆ ನಿಂತು ಈ ಸಮಸ್ಯೆಯನ್ನು ಬಗೆಹರಿಸಬೇಕಿದೆ. ಸದ್ಯ ಸ್ಯಾಂಡಲ್ವುಡ್‌ನಲ್ಲಿ ಈ ಎರಡೂ ಸಿನಿಮಾಗಳ ಬಗ್ಗೆ ಚರ್ಚೆಯಂತೂ ನಡೆಯುತ್ತಿದೆ. ಒಂದುವೇಳೆ ಮ್ಯಾಕ್ಸ್ 25ಕ್ಕೇ ರಿಲೀಸಾದರೆ 5 ದಿನಗಳ ಹಿಂದಷ್ಟೇ ತೆರೆಕಂಡ ಯುಐ ಚಿತ್ರದ ಕಲೆಕ್ಷನ್‌ಗೆ ಹೊಡೆತ ಬೀಳಬಹುದಾಗಿದೆ. ಫಿಲಂ ಚೇಂಬರ್‌ನಲ್ಲಿ ಕೂಡ ಬಿಗ್‌ಸ್ಟಾರ್ ಸಿನಿಮಾಗಳು ಎರಡು ವಾರಗಳ ಅಂತರದಲ್ಲಿ ಬೇಕಾದರೆ ಬರಬಹುದು ಅನ್ನುವ ಒಳಒಪ್ಪಂದವಿದೆ. ಹಾಗೆ ನೋಡಿದರೆ ಯುಐ ರಿಲೀಸ್ ಡೇಟನ್ನು 2 ತಿಂಗಳ ಹಿಂದೆಯೇ ಪ್ರಕಟಿಸಲಾಗಿತ್ತು, ಮ್ಯಾಕ್ಸ್ ನಿರ್ಮಾಪಕರೇ ಇದ್ದಕ್ಕಿದ್ದ ಹಾಗೆ 2 ದಿನಗಳ ಹಿಂದೆ ರಿಲೀಸ್ ಡೇಟ್ ಪ್ರಕಟಿಸಿರುವುದು. ಒಂದು ವೇಳೆ ಯುಐ ಹಾಗೂ ಮ್ಯಾಕ್ಸ್ ಎರಡೂ ಸಿನಿಮಾಗಳು 5 ದಿನಗಳ ಅಂತರದಲ್ಲಿ ಬಿಡುಗಡೆಯಾದರೆ ಥೇಟರ್ ಸಮಸ್ಯೆಯೇನೂ ಆಗುವುದಿಲ್ಲ, ಎರಡೂ ಸಿನಿಮಾಗಳಿಗೂ ಬೇಕಿರುವಷ್ಟು ಥಿಯೇಟರ್‌ಗಳಿವೆ. ಆದರೆ ಎರಡೂ ಸಿನಿಮಾಗಳ ಕಲೆಕ್ಷನ್ ಮೇಲೆ ಪೆಟ್ಟು ಬೀಳುವುದಂತೂ ಗ್ಯಾರಂಟಿ. ಜೊತೆಗೆ ಹೊಸವರ್ಷ ಹಾಗೂ ಕ್ರಿಸ್ಮಸ್ ರಜೆ ಇರುವುದರಿಂದ ಎರಡೂ ಸಿನಿಮಾಗಳನ್ನು ನೋಡಲು ಜನ ಬರುತ್ತಾರೆ ಎಂಬ ಸಮಾಧಾನದ ಮಾತು ವಿತರಕರ ವಲಯದಿಂದ ಕೇಳಿ ಬರುತ್ತಿದೆ. ಆದರೆ, ಘೋಷಣೆಯಾಗಿರುವ ಮ್ಯಾಕ್ಸ್ ಚಿತ್ರದ ರಿಲೀಸ್ ಡೇಟ್ ಬಗ್ಗೆ ಕಿಚ್ಚ ಸುದೀಪ್ ಈವರೆಗೆ ಎಲ್ಲೂ ಹೇಳಿಕೆ ಕೊಟ್ಟಿಲ್ಲ. ಹಾಗೆ ನೋಡಿದರೆ ಯುಐ ಚಿತ್ರತಂಡ ಬಹಳ ಹಿಂದೆಯೇ ಚಿತ್ರದ ರಿಲೀಸ್ ಡೇಟ್‌ನ್ನು ಅನೌನ್ಸ್ ಮಾಡಿತ್ತು, ಈಗ ಇದ್ದಕ್ಕಿದ್ದಂತೆ ಪ್ರಕಟಿಸಿರುವುದು ಮ್ಯಾಕ್ಸ್ ಚಿತ್ರತಂಡ. ಇತ್ತೀಚೆಗೆ ಮ್ಯಾಕ್ಸ್ ನಿರ್ಮಾಪಕರು ಹಾಗೂ ಕಿಚ್ಚ ಸುದೀಪ್ ನಡುವಿನ ಸಂಬಂಧ ಹಳಸಿಹೋಗಿದೆ ಎನ್ನುವುದನ್ನು ಕಿಚ್ಚ ಸುದೀಪ್ ಅವರೇ ಬಿಗ್‌ಬಾಸ್ ವೇದಿಕೆಯಲ್ಲಿ ಬಹಿರಂಗವಾಗಿ ಹೇಳಿಕೊಂಡಿದ್ದರು. ಆ ನಿರ್ಮಾಪಕರು ಚಿತ್ರದ ರಿಲೀಸ್ ಬಗ್ಗೆ ನಾಯಕನಟ ಸುದೀಪ್ ಬಳಿ ಈವರೆಗೂ ಚರ್ಚಿಸಿಲ್ಲ, ಹಾಗೇನಾದರೂ ಚರ್ಚಿಸಿದ್ದರೆ ಸುದೀಪ್ ಅವರೇ ಸ್ವಲ್ಪ ಮುಂದಕ್ಕೆ ಹೋಗೋಣ ಎಂದು ಸಲಹೆ ನೀಡುತ್ತಿದ್ದರು.

ಮತ್ತೊಮ್ಮೆ ಜತೆಯಾದ ಮುಂಗಾರು ಮಳೆ ತಂಡ

'ಮನದ ಕಡಲು'

ಕಡಲ ಕಿನಾರೆಯ ಪ್ರೇಮಕಥೆ

18 ವರ್ಷಗಳ ಹಿಂದೆ ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆ ನಿರ್ಮಿಸಿದ ಮುಂಗಾರುಮಳೆ ಚಿತ್ರದ ನಿರ್ದೇಶಕ ಯೋಗರಾಜಭಟ್ ಹಾಗೂ ನಿರ್ಮಾಪಕ ಈ.ಕೃಷ್ಣಪ್ಪ ಮತ್ತೊಮ್ಮೆ ಜತೆಯಾಗಿ ಹೊಸ ಚಿತ್ರವೊಂದನ್ನು ನಿರ್ಮಿಸುತ್ತಿದ್ದಾರೆ. ಆ ಚಿತ್ರದ ಹೆಸರು ಕಡಲ ಕಿನಾರೆ. ಇದು ಕಡಲ ತೀರದಲ್ಲಿ ನಡೆಯುವ ಪ್ರೇಮಕಥೆಯಾಗಿದ್ದು, ವೈದ್ಯನೊಬ್ಬನ ಜೀವನದಲ್ಲಿ ನಡೆಯುವ ಎರಡು ಪ್ರೇಮ್ ಕಹಾನಿಗಳನ್ನು ಈ ಚಿತ್ರದಲ್ಲಿ ನಿರ್ದೇಶಕ ಯೋಗರಾಜ ಭಟ್ರು ಬಿಚ್ಚಿಡಲಿದ್ದಾರೆ. ಈ ಚಿತ್ರದಲ್ಲೂ ಸಹ ಸುಮುಖ. ಅಂಜಲಿ ಹಾಗೂ ರಾಶಿಕಾ ಎಂಬ ಮೂರು ಅಚ್ಚಕನ್ನಡದ ಪ್ರತಿಭೆಗಳನ್ನೇ ನಾಯಕ, ನಾಯಕಿಯರನ್ನಾಗಿ ಪರಿಚಯಿಸುತ್ತಿದ್ದಾರೆ. ಈಗಾಗಲೇ ಚಿತ್ರದ ಬಹುತೇಕ ಶೂಟಿಂಗ್ ಮುಗಿದಿದ್ದು, ಇದೀಗ ಅರಮನೆ ಆವರಣದಲ್ಲಿ ಟ್ರೈಬಲ್ ಏರಿಯಾ ಸೆಟ್‌ಹಾಕಿ ಅಲ್ಲಿ ಒಂದಷ್ಟು ಭಾಗದ ಶೂಟಿಂಗ್ ನಡೆಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಶೂಟಿಂಗ್ ವೀಕ್ಷಣೆ ಹಾಗೂ ಚಿತ್ರದ ಟೈಟಲ್ ಅನಾವರಣವನ್ನು ಚಿತ್ರತಂಡ ಹಮ್ಮಿಕೊಂಡಿತ್ತು. ದೊಡ್ಡಮಟ್ಟದಲ್ಲೇ ತೆರೆಗೆ ಬರುತ್ತಿರುವ ಈ ರೊಮ್ಯಾಂಟಿಕ್ ಲವ್‌ಸ್ಟೋರಿಗೆ 'ಮನದಕಡಲು' ಎಂಬ ಟೈಟಲ್ ಇಡಲಾಗಿದೆ. ಯೋಗರಾಜ ಭಟ್ಟರ ನಿರ್ದೇಶನದ ಹದಿನಾರನೇ ಚಿತ್ರ ಇದಾಗಿದ್ದು, ವಿ.ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ರಾಜಕಾರಣದಲ್ಲಿ ಬ್ಯುಸಿಯಾಗಿದ್ದ ಈ.ಕೃಷ್ಣಪ್ಪ ಅವರು ಈ ಚಿತ್ರದ ಮೂಲಕ ಮತ್ತೆ ನಿರ್ಮಾಣಕ್ಕೆ ಮರಳಿದ್ದಾರೆ. ಮುಂಗಾರುಮಳೆ ಬಳಿಕ ಅವರು ಮೊಗ್ಗಿನ ಮನಸು ಹಾಗೂ ಮತ್ತೆ ಮುಂಗಾರು ಎಂಬ ಚಿತ್ರಗಳನ್ನು ನಿರ್ಮಿಸಿದ್ದರು. ಹಿರಿಯನಟ ರಂಗಾಯಣ ರಘು ಈ ಚಿತ್ರದಲ್ಲಿ ಟಕಾರಿ ಎಂಬ ಆದಿವಾಸಿ ತಂಡದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಮಹಾರಾಷ್ಟ್ರದ ರಾಯಘಡ ಸಮೀಪದ ಸಮುದ್ರದ ನಡುವೆ ಇರುವ ಮರೂಡಕೋಟೆ ಎಂಬಲ್ಲಿ ಪ್ರಮುಖ ಭಾಗದ ಚಿತ್ರೀಕರಣ ನಡೆಸಲಾಗಿದೆ.




ಇದೊಂದು ತ್ರಿಕೋನ ಪ್ರೇಮಕಥೆಯೂ ಹೌದು. ಬೆಂಗಳೂರು, ಮಂಗಳೂರು ಅಲ್ಲದೆ ಮಹಾರಾಷ್ಟ್ರದಲ್ಲಿ ಈ ಕಥೆ ನಡೆಯಲಿದ್ದು, ಅಲ್ಲೆಲ್ಲ ಚಿತ್ರತಂಡ ಟ್ರಾವೆಲ್ ಮಾಡಿಕೊಂಡು ಬಂದಿದೆ. ಈ ಹಿಂದೆ ಫಿಸಿಕ್ಸ್ ಟೀಚರ್ ಎಂಬ ಚಿತ್ರದಲ್ಲಿ ನಟಿಸಿದ್ದ ಸುಮುಖ್, ಆ ಚಿತ್ರವನ್ನು ತಾವೇ ನಿರ್ದೇಶಿಸಿದ್ದರು. ಇದೀಗ ಯೋಗರಾಜ್ ಭಟ್ಟರ ಗರಡಿಯಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ತನ್ನ ಟೈಟಲ್‌ನಿಂದಲೇ ಕುತೂಹಲ ಮೂಡಿಸಿರೋ ಈ ಚಿತ್ರದ ಚಿತ್ರೀಕರಣ, ಬಹುತೇಕ ಮುಗಿದಿದ್ದು, ಚಿತ್ರವನ್ನು ಮುಂಗಾರು ಮಳೆ ರಿಲೀಸಾಗಿದ್ದ ಡಿಸೆಂಬರ್ ಕೊನೇ ವಾರವೇ ರಿಲೀಸ್ ಮಾಡಬೇಕೆಂಬ ಪ್ಲಾನ್ ಚಿತ್ರತಂಡಕ್ಕಿದೆ, ಈಗಾಗಲೇ 2 ದೊಡ್ಡ ಸಿನಿಮಾಗಳು ಅದೇ ಸಮಯಕ್ಕೆ ರಿಲೀಸ್ ಡೇಟ್ ಫಿಕ್ಸ್ ಮಾಡಿಕೊಂಡಿವೆ. ಹಾಗೇನಾದರೂ ಆದರೆ ಡಿಸೆಂಬರ್‌ನಲ್ಲಿ ದೊಡ್ಡ ಚಿತ್ರಗಳ ಜಾತ್ರೆಯೇ ನಡೆದಂಗಾಗುತ್ತದೆ.




ಕುಂಭಸಂಭವ ಮತ್ತೊಮ್ಮೆ ಪೊಲೀಸ್ ಆದ ಭೀಮನ ಪ್ರಿಯಾ

ದುನಿಯಾ ವಿಜಯ್ ಅಭಿನಯದ ಭೀಮ ಚಿತ್ರ ನೋಡಿದವರು ವಿಜಯ್ ಪಾತ್ರಕ್ಕಿಂತ, ಅದರಲ್ಲಿ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದ ರಂಗಭೂಮಿ ಪ್ರತಿಭೆ ಪ್ರಿಯಾ ಎಂಬ ಯುವತಿಯ ಗತ್ತು, ಡೈಲಾಗ್ ಡೆಲಿವರಿಯನ್ನು ಮೆಚ್ಚಿಕೊಂಡಿದ್ದರು. ಗಿರಿಜಾ ಎಂಬ ಪೊಲೀಸ್ ಪಾತ್ರದ ಮೂಲಕ ಕನ್ನಡಿಗರ ಮನಗೆದ್ದ ಪ್ರಿಯಾ ಈಗ ಟಿ.ಎನ್. ನಾಗೇಶ್ ನಿರ್ದೇಶನದ ಕುಂಭಸಂಭವ ಚಿತ್ರದಲ್ಲಿ ಮತ್ತೊಮ್ಮೆ ಪೊಲೀಸ್ ಅಧಿಕಾರಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಶ್ರೀಗಣಪತಿ ದೇವಸ್ಥಾನದಲ್ಲಿ ನೆರವೇರಿತು. 2023ರಲ್ಲಿ ಮಂಡ್ಯ ಸುತ್ತಮುತ್ತ ನಡೆದ ಭ್ರೂಣಹತ್ಯೆ ಪ್ರಕರಣದ ವಿಷಯವನ್ನಿಟ್ಟುಕೊಂಡು ಈ ಚಿತ್ರದ ಕಥೆ ಬರೆದಿದ್ದೇನೆ ಎಂದು ಹೇಳಿದ ನಿರ್ದೇಶಕ ಟಿ.ಎನ್.ನಾಗೇಶ್, ಕ್ರಿಶ್ ಜೋಷಿ ಅವರು ನನಗೆ ಕಥೆ ಬರೆಯುವಲ್ಲಿ ಸಹಕಾರ ನೀಡಿದ್ದಾರೆ. ಇದೊಂದು ಸಾಮಾಜಿಕ



ಸಮಸ್ಯೆಯ ಸುತ್ತ ನಡೆಯುವ ನೈಜ ಘಟನೆ ಆಧಾರಿತ ಚಿತ್ರ. ಭೀಮ ಖ್ಯಾತಿಯ ಪ್ರಿಯಾ, ಅರ್ಜುನ್‌ದೇವ್, ಮಧುಶ್ರೀ, ಶೋಭಿತ, ಕಮಲ್ ಚಿತ್ರದ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಮಿಲ್ಕಿಮೂನ್ ಮೂವೀಸ್ ಲಾಂಛನದಲ್ಲಿ ನಾಗಾನಾಯ್ಕ, ತಾರಾ ನಾಗೇಶ, ಸುನಂದಾ ಹೊಸಪೇಟೆ, ಕಮಲ್, ಡೇವಿಡ್ ರಾಯಪ್ಪ ಸೇರಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ವಲ್ಲಿ ಹಾಗೂ ನಿಂಗರಾಜು ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ಮೂರು ಹಾಡುಗಳಿರುವ ಕುಂಭಸಂಭವ ಚಿತ್ರಕ್ಕೆ ಎಂ.ಎನ್. ಕೃಪಾಕರ್ ಅವರ ಸಂಗೀತ ಸಂಯೋಜನೆಯಿದೆ, ಚಿತ್ರದ ಮೂರು ಸಾಹಸ ಸನ್ನಿವೇಶಗಳನ್ನು ಕೌರವ ವೆಂಕಟೇಶ್ ಕಂಪೋಜ್ ಮಾಡಲಿದ್ದಾರೆ. ಸಿದ್ದರಾಜು ಅವರ ಛಾಯಾಗ್ರಹಣ ಹಾಗೂ ಆಕಾಶ್ ಅವರ ಸಂಕಲನ ಈ ಚಿತ್ರಕ್ಕಿದ್ದು, ಕ್ರಿಶ್ ಜೋಶಿ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ. ಇಂದಿನಿಂದ ಮೊದಲ ಹಂತದ ಚಿತ್ರೀಕರಣ ಆರಂಭವಾಗಿ ಬೆಂಗಳೂರಿನಲ್ಲೇ ನಡೆಯಲಿದೆ ಎಂದರು. ನಂತರ ನಾಯಕಿ ಪ್ರಿಯಾ ತನ್ನ ಪಾತ್ರದ ಕುರಿತಂತೆ ಮಾತನಾಡುತ್ತ, ಈ ಚಿತ್ರದ ಕಥೆ ನನ್ನ ಮನಸಿಗೆ ಬಹಳ ಹತ್ತಿರವಾಯಿತು. ದಿನನಿತ್ಯ ನಮ್ಮ ಸುತ್ತಮುತ್ತ ನೋಡುತ್ತಿರುವ, ಯಾರಿಗೂ ಗೊತ್ತಾಗದ ಒಂದಷ್ಟು ವಿಷಯಗಳನ್ನಿಟ್ಟಿಕೊಂಡು ನಿರ್ದೇಶಕರು ಒಂದೊಳ್ಳೆ ಕಥೆಯನ್ನು ರೆಡಿ ಮಾಡಿದ್ದಾರೆ.

ಮೈಸೂರು ನಿರ್ದೇಶಕನ 'ಬೇರ ಹುಡುಕಿದ ಮರ' ಕಿರುಚಿತ್ರ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ



ಮೈಸೂರು ಮೂಲದ ನಿರ್ದೇಶಕ ನಾಗಭೂಷಣ ದೇಶಪಾಂಡೆ ತಮ್ಮ ಚೊಚ್ಚಲ ಕಿರುಚಿತ್ರ 'ಬೇರ ಹುಡುಕಿದ ಮರ' ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದ್ದಾರೆ. ಇದು ಇಂಡೋನೇಷ್ಯಾದಲ್ಲಿ ನಡೆಯುತ್ತಿರುವ 19ನೇ ಜೋಗ್ಜಾ-ನೆಟ್‌ಪಾಕ್ ಏಷ್ಯನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ (JAFF) ಲೈಟ್ ಆಫ್ ಏಷ್ಯಾ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿದೆ. ಇದೇ ಮೊದಲ ಬಾರಿಗೆ ಕನ್ನಡ ಕಿರುಚಿತ್ರವೊಂದು ಈ ಪ್ರತಿಷ್ಠಿತ ಸ್ಪರ್ಧೆಗೆ ಆಯ್ಕೆಯಾಗಿದ್ದು, ಕನ್ನಡ ಚಿತ್ರರಂಗ ಮಹತ್ವದ ಹಿರಿಮೆಗೆ ಪಾತ್ರವಾಗಿದೆ.

ನ.30ರಿಂದ ಡಿ.7ರವರೆಗೆ ಈ ಚಲನಚಿತ್ರೋತ್ಸವ ನಡೆಯಲಿದೆ. ಪ್ರತಿಷ್ಠಿತ ಪ್ರೇಗ್ ಚಲನಚಿತ್ರ ಶಾಲೆಯಲ್ಲಿ ಚಲನಚಿತ್ರ ನಿರ್ಮಾಣ ಕುರಿತು ತರಬೇತಿ ಪಡೆದಿರುವ ಇಂಜಿನಿಯರ್ ಆಗಿರುವ ಚಿತ್ರ ನಿರ್ಮಾಪಕ ದೇಶಪಾಂಡೆ, ಸಾಮಾಜಿಕ ಸಮಸ್ಯೆಯನ್ನು ಎತ್ತಿ ತೋರಿಸುವ ಈ




ನಿರ್ದೇಶಕ ನಾಗಭೂಷಣ ದೇಶಪಾಂಡೆ

ಪ್ರಾದೇಶಿಕ ಕಥೆಯನ್ನು ಹೊರತಂದಿದ್ದಾರೆ. ಚಿತ್ರವು ರೋಹಿತ್ ಸುತ್ತ ಆಳವಾದ ಭಾವನಾತ್ಮಕ ಮತ್ತು ಚಿಂತನೆ-ಪ್ರಚೋದಕ ಕಥೆಯನ್ನು ಹೇಳುತ್ತದೆ. 13 ವರ್ಷದ ರೋಹಿತ್, ತನ್ನ ಮುರಿದ ಕುಟುಂಬದ ಸವಾಲುಗಳನ್ನು ಪರಿಶೋಧಿಸುತ್ತಾನೆ. ಕಥೆಯು ಆಳವಾಗಿ ಕಾಡುತ್ತದೆ. ವಿಷಕಾರಿ ಪುರುಷತ್ವ ಮಹಿಳೆಯರಿಗೆ ಕಡಿಮೆ ಸ್ಥಾನಮಾನ ಕುರಿತು ವಿವರಿಸುತ್ತದೆ. ಮತ್ತು ಲಿಂಗ ಪಾತ್ರಗಳ ಬಗ್ಗೆ ಮಗುವಿನ ತಿಳುವಳಿಕೆಯನ್ನು ಜಾಗೃತಗೊಳಿಸುತ್ತದೆ. ಈ ಕಥೆಯು ವೈಯಕ್ತಿಕವಾಗಿದೆ. ಮೈಸೂರಿನಲ್ಲಿ ಬೆಳೆದ ನಾನು, ಚಿಕ್ಕ ಹುಡುಗರು ತಮ್ಮ ತಾಯಂದಿರ ಭಾವನಾತ್ಮಕ ಹೋರಾಟಗಳನ್ನು ಅರ್ಥ ಮಾಡಿಕೊಳ್ಳದೆ ತಮ್ಮ ತಂದೆಯ ಪರವಾಗಿ ನಿಲ್ಲುವ ಅನೇಕ ಕುಟುಂಬಗಳಿಗೆ ಸಾಕ್ಷಿಯಾಗಿದ್ದೇನೆ. ಈ ಚಿತ್ರವು ಆ ಪಿತೃಪ್ರಭುತ್ವದ ಆದರ್ಶಗಳನ್ನು ಪ್ರಶ್ನಿಸುವ ಗುರಿ ಹೊಂದಿದೆ ಮತ್ತು ಸಮಾಜದಲ್ಲಿ ಮೌನವಾಗಿರುವವರಿಗೆ ಧ್ವನಿಯನ್ನು ನೀಡುತ್ತದೆ ಎಂದು ದೇಶಪಾಂಡೆ ಹಂಚಿಕೊಂಡಿದ್ದಾರೆ.

'ಬೇರ ಹುಡುಕಿದ ಮರ' ಬೆಂಗಳೂರು ಅಂತಾರಾಷ್ಟ್ರೀಯ ಕಿರುಚಿತ್ರೋತ್ಸವ 2024 ರಲ್ಲಿ ಪ್ರಥಮ ಪ್ರದರ್ಶನವಾದಾಗಿನಿಂದ ಹೆಚ್ಚೆಚ್ಚು ಸದ್ದು ಮಾಡುತ್ತಿದೆ. ಇದು ಪ್ರೇಕ್ಷಕರು ಮತ್ತು ವಿಮರ್ಶಕರಿಂದ ಉತ್ತಮ ವಿಮರ್ಶೆ ಪಡೆದಿದೆ. ನಂತರ ದೆಹಲಿಯ ಯೆಲ್ಲೊಸ್ಟೋನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಯಶಸ್ವಿ ಪ್ರದರ್ಶನ ಕಂಡಿದೆ. ಎಂಈಈ ಗಾಗಿ ಚಿತ್ರದ ಆಯ್ಕೆಯು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಕನ್ನಡದ ಎಂಟ್ರಿಯನ್ನು ಸೂಚಿಸುತ್ತದೆ. ಜಾಗತಿಕ ಪ್ರೇಕ್ಷಕರಿಗೆ ಕನ್ನಡ ಕಥೆ ಹೇಳುವಿಕೆಯ ಪ್ರದರ್ಶನವಿರಲಿದೆ.

ಮೈಸೂರಿನಿಂದ ಅಂತಾರಾಷ್ಟ್ರೀಯ ಗಮನಸೆಳೆದ ದೇಶಪಾಂಡೆಯವರ ಪ್ರಯಾಣ ಪ್ರಾದೇಶಿಕ ಕಥೆಗಳ ಶಕ್ತಿಗೆ ಸಾಕ್ಷಿಯಾಗಿದೆ. ಇದು ಮೈಸೂರಿಗೆ ಹೆಮ್ಮೆಯ ಕ್ಷಣವನ್ನು ಮತ್ತು ಜಾಗತಿಕ ವೇದಿಕೆಯಲ್ಲಿ ಕನ್ನಡ ಕಿರುಚಿತ್ರಗಳಿಗೆ ಹೊಸ ಮಾನದಂಡವಾಗಿದೆ.

ಸಿನಿಪದಬಂಧ-553



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.ಅಶೋಕ್-ಜಯಮಾಲಾ ಅಭಿನಯದ "ಕಲ್ಯಾಣಿ"	4
4.ರವಿಚಂದ್ರನ್ ಅಭಿನಯದಲ್ಲಿ ಬಿಲ್ಲು ಹಿಡಿದು ಬಂದವನು	5
6.ಅನುಮಾನದಲ್ಲೂ ದೊರೆತ ಪ್ರಯೋಜನ	5
8.ಅನಂತ್‌ನಾಗ್ ಅಭಿನಯದಲ್ಲಿ ಅರಳಿದ ಬಿಳಿ ಬಣ್ಣದ ಪುಷ್ಪ	5
10."ಹೋದೆಯಾ ದೂರ ಓ ಜೊತೆಗಾರ...", ಹಾಡಿನ ಗಾಯಕಿ	5
15.ಜಗ್ಗೇಶ್ ನಮ್ಮ ದೇಶದ ಕರೆನ್ಸಿಯೊಂದಿಗಿದ್ದಾನೆ	5
17.ರವಿಚಂದ್ರನ್ ವೇಷ ತೊಟ್ಟು ವಾದ್ಯ ಹಿಡಿದಿದ್ದಾನೆ	5
18.ವಿಷ್ಣುವರ್ಧನ್-ಗೀತಾ ಅಭಿನಯದ ಚಿತ್ರ	5
20.ಶಿವಣ್ಣನ ಯುದ್ಧ ಭೂಮಿ	4

ಮೇಲಿನಿಂದ ಕೆಳಕ್ಕೆ

1.ಯಶ್--ಹರಿಪ್ರಿಯ ಅಭಿನಯಕ್ಕೆ ಸುಮನ ಕಿತ್ತೂರು ನಿರ್ದೇಶನವಿದೆ	5
2.ಊರಿಗಿಟ್ಟ "ಬೆಂಕಿ"	2
3.ಸಿದ್ಧಲಿಂಗಯ್ಯ ನಿರ್ದೇಶನದಲ್ಲಿ ಸೋತುಹೋದವನು	4
4.ಕೋಗಿಲೆಯ ನುಡಿ	5
5.ಪೂಜಾ ಗಾಂಧಿಯ ತಿನಿಸು ಸಿಹಿಯಿದ್ದರೂ ತುಸು ಹುಳಿ	3
7.ಅಕ್ಷಯದಲ್ಲಿ ಸಿಕ್ಕ ಲೂಸ್ ಮಾದನ ಚಿತ್ರ	2
9.ವಿಷ್ಣುವರ್ಧನ್ ಹಾಡಿದ ಜೋಗುಳ	2
11.ವಿಷ್ಣುವರ್ಧನ್, ಪ್ರಭಾಕರ್, ಡಾಲಿ, ಸೋನಾಕ್ಷಿ ಅಭಿನಯದ ಚಿತ್ರ	5
12.ಕಾಡಿನ ರಾಜ ಚಿತ್ರದ ನಾಯಕಿ	2
13.ಸ್ವರ್ಗಕ್ಕೆ ದಾರಿ ತೋರಿದಾಕೆ	2
14.ಅನೂಪ್ ಭಂಡಾರಿ ಚಿತ್ರ ಅಲೆ ಎಬ್ಬಿಸಿದೆ	5
15.ಒಲವಿನ ಆಸರೆ ಚಿತ್ರದ ನಾಯಕಿ	3
16.ಅರಸ -ಅರಸಿ	4
19.ಜಗ್ಗೇಶ್ ಅಭಿನಯದ ಚಿತ್ರಗಳಲ್ಲೊಂದು	2

ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಸಿನಿ ಪದಬಂಧ 552ರ ಉತ್ತರ

ಆ	ರ್ಯ	ಭ	ಟ				ಬೃಂ			
ಪ		ವ್ಯ		ಆ	ರೋ	ಗ್ಯ	ದಾ	ಸ್		ಕ
ದ್ಭಾಂ				ಗ್ರೋ			ವ			ಸ್ತೂ
ಧ	ನ	ಪಿ	ಶಾ	ಚಿ		ಬ	ನ	ಶಂ	ಕ	ರಿ
ವ		ಕ		ಕ್ಕ					ಳ್ಳ	
			ಬ	ಣ್ಣ	ದ	ಹೆ	ಜ್ಜೆ			
	ಜಾ					ಣ್ಣಿ		ಜ		ವೀ
ಮಿ	ನು	ಗು	ತಾ	ರೆ		ನ	ಯ	ನ	ತಾ	ರಾ
ಲ			ರಾ			ಸೇ				ಜಾ
ನ		ಮೂ	ಗ	ನ	ಸೇ	ಡು		ಹ		ಸ್ಮಿ
			ಣ				ಹ	ನಿ	ಮೂ	ನ್

ವಿಜೇತರು: ಜಿ.ಮಾಲಾ, ಚಾಮರಾಜಪುರಂ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸರ್ಕಾರಿ ಗೋಮಾಳ, ರೈತರ, ಪರಿಶಿಷ್ಟರ ಜಮೀನು ಅಕ್ರಮ ಖಾತೆ

ಅಧಿಕಾರಿಗಳ ವಿರುದ್ಧ ರೈತ ಸಂಘದಿಂದ ಪ್ರತಿಭಟನೆ

ಹುಣಸೂರು, ನ.28– ಹುಲ್ಲುಬನಿ, ಸರ್ಕಾರಿ ಗೋಮಾಳ ಸೇರಿದಂತೆ ಪರಿಶಿಷ್ಟರ ಜಮೀನುಗಳನ್ನು ಬಂಡವಾಳ ಶಾಹಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಕಂದಾಯ ಇಲಾಖೆ ಅಧಿಕಾರಿಗಳನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿ ನಗರದಲ್ಲಿ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ತಾಲೂಕಿನ ಬಿಳಿಕೆರೆ ಹೋಬಳಿ ಬೆಂಕಿಪುರ ಎಲ್ಲೆ ಸರ್ವೆ ನಂ.60, 61, 47ರಲ್ಲಿನ ಜಮೀನಿನಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗದವರು, ಅತೀ ಸಣ್ಣ ರೈತರು ಉಳುಮೆ ಮಾಡುತ್ತಿದ್ದು, ಇದರಲ್ಲಿ ಹುಲ್ಲುಬನಿ ಮತ್ತು ಸರ್ಕಾರಿ ಗೋಮಾಳ ಸಹ ಸೇರಿದೆ. ಅವುಗಳನ್ನು ಬಂಡವಾಳ ಶಾಹಿಗಳಿಗೆ ಕಂದಾಯ ಅಧಿಕಾರಿಗಳು ಅಕ್ರಮವಾಗಿ ಖಾತೆ ಮಾಡಿಕೊಟ್ಟಿದ್ದಾರೆ. ಈ ಸಂಬಂಧ ಪ್ರಶ್ನಿಸಿದ ರೈತರಿಗೆ ಬಂಡವಾಳ ಶಾಹಿಗಳು ಅವಹೇಳನವಾಗಿ ನಿಂದಿಸಿ, ಧಮ್ಕಿ ಹಾಕಿದ್ದಾರೆ. ಅಲ್ಲದೇ ದೂರು ನೀಡಲು ಹೋದರೆ ಪೊಲೀಸರು ದೂರು ಸ್ವೀಕರಿಸುತ್ತಿಲ್ಲ. ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಬಂಡವಾಳ ಶಾಹಿಗಳ ಜೊತೆ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.



ಹುಣಸೂರಿನಲ್ಲಿ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಈ ಬಗ್ಗೆ ರೈತರು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನಾದರೂ ರೈತರಿಗೆ ಅವರ ಜಮೀನು ವಾಪಸ್ ಕೊಡಿಸಬೇಕು. ಅಲ್ಲದೇ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅವರನ್ನು ಅಮಾನತುಗೊಳಿಸಬೇಕು. ಇಲ್ಲದಿದ್ದರೇ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಇದೇ ವೇಳೆ ಎಸಿ ಕಚೇರಿ ಸಿಬ್ಬಂದಿ ಮತ್ತು ಗ್ರೇಡ್–2 ತಹಸೀಲ್ದಾರ್ ನರಸಿಂಹಯ್ಯ ರೈತರ ಮನವಿ ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ, ಪ್ರಗತಿಪರ ಸಂಚಾಲಕ ರಾಮಕೃಷ್ಣ, ತಾಲೂಕು ಕಾರ್ಯದರ್ಶಿ ರಾಮೇಗೌಡ, ಡಿಎಸ್‌ಎಸ್ ಮುಖಂಡ ಪುಟ್ಟಸ್ವಾಮಿ, ತಂಬಾಕು ಬೆಳೆಗಾರರ ಸಂಘದ ಅಧ್ಯಕ್ಷರಾದ ಚಂದ್ರೇಗೌಡ, ಶಿವಣ್ಣ, ಡಿಎಸ್‌ಎಸ್ ಸಿದ್ದೇಶ್, ಮುಖಂಡ ರಾಜಣ್ಣ, ರೈತ ಮುಖಂಡರಾದ ವಿಷಕಂಠಪ್ಪ, ಜಯಣ್ಣ, ವಿ.ಟಿ.ಮಣಿ, ಬಸವರಾಜೇಗೌಡ, ಮಹದೇವು, ರಾಮಕೃಷ್ಣೇಗೌಡ, ಜಿ.ಮಂಜುನಾಥ ರಾಜೇಅರಸ್, ಕಮ್ಯೂನಿಸ್ಟ್ ಬಸವರಾಜು, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಪ್ರಭಾಕರ್, ಪುಟ್ಟರಾಜು ಸೇರಿದಂತೆ ಇನ್ನಿತರರಿದ್ದರು.

ಪ್ರತಿಯೊಬ್ಬರೂ ಸಂಘದ ಅಭಿವೃದ್ಧಿಗೆ ಶ್ರಮಿಸಿ

ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮನವಿ



ಡೈರಿ ನೂತನ ಕಟ್ಟಡ ಕಾಮಗಾರಿಗೆ ಮೈಮುಲ್ ನಿರ್ದೇಶಕ ಈರೇಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ನ.28– ಪ್ರತಿಯೊಬ್ಬರೂ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮನವಿ ಮಾಡಿದರು.

ತಾಲೂಕಿನ ಕಾಳಿಹುಂಡಿ ಗ್ರಾಮದಲ್ಲಿ 98 ಲಕ್ಷ ರೂ. ವೆಚ್ಚದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಭಾಗದಲ್ಲಿ ಸಾಕಷ್ಟು ಸಂಘಗಳಿದ್ದು, ಸ್ವಂತ ಕಟ್ಟಡಗಳು ಇರಲಿಲ್ಲ. ಇದೀಗ ಕಾಳಿಹುಂಡಿಯಲ್ಲಿ ಕೆಎಂಎಫ್ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ 98 ಲಕ್ಷ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣವಾಗುತ್ತಿದೆ. ಹಾಲು ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಈ ವೇಳೆ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಬಸವರಾಜಪ್ಪ, ಸಂಘದ ವಿಸ್ತರಣಾಧಿಕಾರಿ ಯೋಗೀಶ್ ಪಿ., ಅಧ್ಯಕ್ಷೆ ಪ್ರಮೋದ, ಉಪಾಧ್ಯಕ್ಷೆ ಭಾಗ್ಯ, ಸದಸ್ಯರಾದ ಶಿವಮ್ಮ, ಹಲಗಮ್ಮ, ಜಯಶ್ರೀ, ಪವಿತ್ರ, ಸಾವಿತ್ರಮ್ಮ, ರಾಜೇಶ್ವರಿ, ಅನಿತಾ, ಸವಿತಾ, ಸುಮಿತ್ರ ಹಾಗೂ ಸಿಇಓ ಶೈಲಜಾ, ಹಾಲು ಪರೀಕ್ಷಕಿ ರತ್ನ, ಮುಖಂಡರಾದ ಸಿದ್ದೇಗೌಡ, ಕೆ. ಸಿ.ನಾಗೇಂದ್ರ, ಕೂಸೇಗೌಡ, ಸ್ವಾಮಿಗೌಡ, ಮಂಜುನಾಥ, ಕೆಂಪರಾಜು, ನಾಗರಾಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಇಂದಿನಿಂದ ಕ್ರಿಕೆಟ್ ಪಂದ್ಯಾವಳಿ

ಬೆಟ್ಟದಪುರ, ನ.28– ಇಲ್ಲಿನ ಅನಿಕೇತನ ಪದವಿಪೂರ್ವ ಕಾಲೇಜಿನ ವತಿಯಿಂದ ನ.29 ಮತ್ತು 30ರಂದು ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಕಾಲೇಜಿನ ಆವರಣದಲ್ಲಿ ನಡೆಯಲಿರುವ ಟೂರ್ನಿಯನ್ನು ಚಲನಚಿತ್ರ ಹಾಸ್ಯನಟ ಹಾಗೂ ಬಿಗ್‌ಬಾಸ್ ಸ್ಪರ್ಧಿ ತುಕಾಲಿ ಸಂತೋಷ್ ಉದ್ಘಾಟಿಸಲಿದ್ದಾರೆ. ನ.30ರಂದು ನಡೆಯಲಿರುವ ಸಮಾರೋಪದಲ್ಲಿ ನಟ ಭಾಸ್ಕರ್ ಪಾಲ್ಗೊಳ್ಳಲಿದ್ದಾರೆ. ಟೂರ್ನಿಯಲ್ಲಿ 10 ತಂಡಗಳು ಪಾಲ್ಗೊಳ್ಳಲಿವೆ. ವಿಜೇತ ತಂಡಕ್ಕೆ ಆಕರ್ಷಕ ಟ್ರೋಫಿ ಹಾಗೂ ವೈಯಕ್ತಿಕ ಕಪ್ ನೀಡಲಾಗುವುದು ಎಂದು ಕಾಲೇಜಿನ ಕಾರ್ಯದರ್ಶಿ ಡಾ. ಜೆ.ಸೋಮಣ್ಣ ತಿಳಿಸಿದ್ದಾರೆ.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.84 ಕೋಟಿ ಸಂಗ್ರಹ



ದಾಸೋಹ ಭವನದಲ್ಲಿ ಹುಂಡಿಗಳ ಎಣಿಕೆ ಕಾರ್ಯ ನಡೆಯಿತು.

ನಂಜನಗೂಡು, ನ.28– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರನ ಹುಂಡಿಯಲ್ಲಿ 1.84 ಕೋಟಿ ರೂ. ಸಂಗ್ರಹವಾಗಿದೆ ಎಂದು ದೇಸ್ಥಾನದ ಕಾರ್ಯನಿರ್ವಹಣಾಧಿಕಾರಿ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ದೇವಾಲಯದ ದಾಸೋಹ ಭವನದಲ್ಲಿ ಗುರುವಾರ ಹುಂಡಿಗಳ ಎಣಿಕೆ ಕಾರ್ಯ ನಡೆಸಲಾಯಿತು. ಈ ವೇಳೆ ಹುಂಡಿಯಲ್ಲಿ 1 ಕೋಟಿ 84 ಲಕ್ಷ 47 ಸಾವಿರ ನಗದು, 63 ಗ್ರಾಂ ಚಿನ್ನ, 2 ಕೆಜಿ 100 ಗ್ರಾಂ ಬೆಳ್ಳಿ, ಅಮೆರಿಕಾದ 332 ಡಾಲರ್, 25 ಯುರೋ, 2,000 ವಿಯೆಟ್ ನಾರ್ವೆ ಕರೆನ್ಸಿ, 5 ಯಾನ್, 10 ಆಸ್ಟ್ರೇಲಿಯಾ ಕರೆನ್ಸಿ, 5 ಸಿಂಗಾಪುರ್ ಡಾಲರ್, 50 ಫಿಲಿಪೈನ್ ಕರೆನ್ಸಿ ಸಂಗ್ರಹಗೊಂಡಿದೆ ಎಂದು ಮಾಹಿತಿ ನೀಡಿದರು. ಎಣಿಕೆ ಕಾರ್ಯದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಮಹಿಳೆಯರು ಭಾಗಿಯಾಗಿದ್ದರು.

ನಾಡು, ನುಡಿ, ನೆಲದ ಸಂರಕ್ಷಣೆ ನಿಮ್ಮೆಲ್ಲರ ಕರ್ತವ್ಯ

ತಿ.ನರಸೀಪುರ, ನ.28– ಕನ್ನಡ ನಾಡು, ನುಡಿ, ನೆಲ, ಜಲ, ಸಂಸ್ಕೃತಿ ಸಂರಕ್ಷಣೆ ನಿಮ್ಮೆಲ್ಲರ ಕರ್ತವ್ಯ. ಕನ್ನಡ ಬರಿ ನುಡಿಯಲ್ಲ ಅದೊಂದು ಅದ್ಭುತ ಭಾಷೆ. ವಿಶ್ವದ ಲಿಪಿಗಳ ರಾಣಿ. ಈ ನಾಡಿನಲ್ಲಿ ಹುಟ್ಟಿ ಬೆಳೆದಿರುವ ನಾನು ತಾಯಿ ಋಣ ತೀರಿಸಲು ಹಾಗೂ ತಾಯಿ ಸೇವೆ ಮಾಡಲು ಒಂದು ಪುಟ್ಟ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವೇ ಸರಿ ಎಂದು ಎನ್.ಕೆ.ಫೌಂಡೇಷನ್ ಅಧ್ಯಕ್ಷ ಎನ್.ಕೆ.ಫರೀದ್ ತಿಳಿಸಿದರು.



ತಿ.ನರಸೀಪುರದ ಜಿಎಸ್‌ಎಫ್ ಕಾಲೋನಿಯಲ್ಲಿ ಕನ್ನಡ ರಾಜ್ಯೋತ್ಸವ ನಡೆಯಿತು.

ಪಟ್ಟಣದ ಜಿಎಸ್‌ಎಫ್ ಕಾಲೋನಿಯ 5ನೇ ವಾರ್ಡ್‌ನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಕನ್ನಡ ಕಲಿಕೆಗಾಗಿ 500 ಶಾಲಾ ಮಕ್ಕಳಿಗೆ ನೋಟ್‌ಬುಕ್‌ಗಳನ್ನು ಹಂಚುವ ಅವಕಾಶ ನನ್ನದಾಗಿದೆ. ನನಗೆ ವಾಟಾಳು ಶ್ರೀಗಳ ಆಶೀರ್ವಾದ ಇರುವವರೆಗೆ ಇಂತಹ ಕಾರ್ಯಗಳು ನಿರಂತರವಾಗಿರುತ್ತದೆ. ಶ್ರೀಮಂತ ಭಾಷೆ ಉಳಿಸಿ ಬೆಳೆಸಿ. ಕನ್ನಡದ ಸರ್ವತೋಮುಖ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸೋಣ ಎಂದರು.

ವಾಟಾಳು ಶ್ರೀಗಳು ಆಶೀರ್ವಚನ ನೀಡಿದರು. ಈ ಸಂದರ್ಭ ಪುರಸಭಾಧ್ಯಕ್ಷ ವಸಂತ ಶ್ರೀಕಂಠ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸೈಯಿದ್ ಅಹ್ಮದ್, ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ಸದಸ್ಯರಾದ ಭೈರಾಪುರ ಮಂಜುನಾಥ್, ರಜತ್ ಗೌಡ, ಮಾಜಿ ಸದಸ್ಯ ಲೋಕೇಶ, ಸಾದತ್, ಹತಾ ಉಲ್ಲಾಖಾನ್, ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ, ಅಫ್ರೀನ್, ಉಪನ್ಯಾಸಕ ಕುಮಾರಸ್ವಾಮಿ, ಡಾನ್ಸ್ ಬಸವರಾಜು, ಡಾನ್ಸ್ ರಘುನಂದನ್, ಮುಖ್ಯ ಶಿಕ್ಷಕಿ ಹೇಮ, ಅಶ್ವಿನಿ ಹಾಜರಿದ್ದರು.

ಪೋಷಕ ಕಲಾರತ್ನ ಪ್ರಶಸ್ತಿ ಪ್ರದಾನ



ಕರ್ನಾಟಕ ಚಲನಚಿತ್ರ ಪೋಷಕ ಕಲಾವಿದರ ಸಂಘದ 'ಪೋಷಕ ಕಲಾರತ್ನ' ಪ್ರಶಸ್ತಿಯನ್ನು ರಂಗಭೂಮಿ ಹಾಗೂ ಚಿತ್ರನಟ ಹುಣಸೂರಿನ ಕುಮಾರ್ ಅರಸೇಗೌಡರಿಗೆ ಹಿರಿಯ ಚಿತ್ರನಟ ದೊಡ್ಡಣ್ಣ ನೀಡಿ ಸನ್ಮಾನಿಸಿದರು. ಈ ವೇಳೆ ಸಮಾಜ ಸೇವಕ ನಾರಾಯಣಸ್ವಾಮಿ, ಸಂಘದ ಕಾರ್ಯದರ್ಶಿ ಎಂ.ನವನೀತ, ಮಾಜಿ ಕಾರ್ಯದರ್ಶಿ ಶ್ರೀನಿವಾಸ್ ಇದ್ದರು.

ಆರೋಗ್ಯಾಧಿಕಾರಿಗೆ ಅವಾರ್ಡ್



ಬೆಂಗಳೂರಿನ ಗಾಂಧಿ ಭವನದಲ್ಲಿ ರಾಘವಿ ಚಾರಿಟಬಲ್ ಟ್ರಸ್ಟ್‌ನಿಂದ ನಡೆದ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಅವರಿಗೆ ಆರೋಗ್ಯ ಜ್ಯೋತಿ ಕರ್ನಾಟಕ ಅವಾರ್ಡ್ ಅನ್ನು ಬೇಲೂರು ಶಾಸಕ ಗೋಪಾಲಕೃಷ್ಣ ಹಾಗೂ ನಟಿ ಪ್ರಿಯಂಕಾ ಉಪೇಂದ್ರ ವಿತರಿಸಿದರು.

ಶ್ರೀಅಯ್ಯಪ್ಪಸ್ವಾಮಿ ಪ್ರಾಣ ಪ್ರತಿಷ್ಠಾಪನೆ

ಮೂಗೂರಿನ ಶ್ರೀದೇಶೇಶ್ವರಸ್ವಾಮಿ ದೇವಾಲಯದಲ್ಲಿ ಶ್ರೀತತ್ವಮಸಿ ಅಯ್ಯಪ್ಪಸ್ವಾಮಿ ಸಂಘದಿಂದ ಶ್ರೀಅಯ್ಯಪ್ಪಸ್ವಾಮಿ ಅವರ ಚರಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ದೇವಾಲಯದ ಆವರಣದಲ್ಲಿ ಅನ್ನಸಂತರ್ಪಣೆ ನಡೆಯಿತು. ನ.30 ರಂದು ರಾತ್ರಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀಅಯ್ಯಪ್ಪ ಸ್ವಾಮಿ ಅವರ ಹೂವಿನ ಪಲ್ಲಕ್ಕಿ ಉತ್ಸವ ನಡೆಯಲಿದೆ.



ಸುಲಭ್ ಶೌಚಾಲಯ, ತ್ಯಾಜ್ಯ ನಿರ್ವಹಣೆಗೆ ಕ್ರಮ ವಹಿಸಿ

ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರ ಸಲಹೆ

ಹುಣಸೂರು, ನ.28– ನಗರ ವ್ಯಾಪ್ತಿಯಲ್ಲಿ ಸುಲಭ್ ಶೌಚಾಲಯ ನಿರ್ಮಾಣ, ರಸ್ತೆ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ವ್ಯವಸ್ಥೆ, ತ್ಯಾಜ್ಯ ನಿರ್ವಹಣೆಗೆ ಕ್ರಮ ವಹಿಸುವಂತೆ ನಗರಸಭಾಧ್ಯಕ್ಷರಿಗೆ ಸಾರ್ವಜನಿಕರು ಸಲಹೆ ನೀಡಿದರು.



ಹುಣಸೂರಲ್ಲಿ ಬಜೆಟ್ ಪೂರ್ವಭಾವಿ ಸಭೆ ನಡೆಯಿತು.

ಇಲ್ಲಿನ ನಗರಸಭೆಯಲ್ಲಿ ಅಧ್ಯಕ್ಷ ಶರವಣ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಸಕ್ತ ಸಾಲಿನ ಆಯವ್ಯಯ ಪೂರ್ವ ಭಾವಿ ನಾಗರಿಕ ಸಲಹಾ ಸಭೆಯಲ್ಲಿ ನಗರದ ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕರ ಬಹಿರ್ದೆಸೆಗೆ ಸುಲಭ್ ಶೌಚಾಲಯದ ಅವಶ್ಯಕತೆ ಇದೆ. ಈ ಬಗ್ಗೆ ಕ್ರಮ ವಹಿಸಬೇಕು. ಕಳೆದ ಸಾಲಿನಲ್ಲಿ ಸಲಹೆ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂಬ ಆಕ್ಷೇಪಣೆ ಕೇಳಿ ಬಂತು.

ಇದಕ್ಕೆ ಉತ್ತರಿಸಿದ ಅಧ್ಯಕ್ಷ ಶರವಣ, ಶೌಚಾಲಯ ನಿರ್ಮಾಣಕ್ಕೆ ಕಳೆದ ಸಾಲಿನಲ್ಲಿ 1.23 ಕೋಟಿ ರೂ.ಅನುದಾನ ಕಾಯ್ದಿರಿಸಲಾಗಿತ್ತು. ಈ ಪೈಕಿ 68 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ ನಿರ್ವಹಣೆಯ ಸಕ್ಕಿಂಗ್ ಯಂತ್ರ ಖರೀದಿಸಿದ್ದೇವೆ. ಈ ಸಾಲಿನಲ್ಲಿ ವಿಶ್ವೇಶ್ವರಯ್ಯ ವೃತ್ತ, ಕಲ್ಕುಣಿಕೆ ಸರ್ಕಲ್, ಹಳೇ ಬಸ್ ನಿಲ್ದಾಣದ ಆವರಣ ಸೇರಿದಂತೆ ಮೂರ್ನಾಲ್ಕು ಸ್ಥಳದಲ್ಲಿ ಸುಲಭ್ ಶೌಚಾಲಯ ನಿರ್ಮಿಸಲು ಅನುದಾನ ಕಾಯ್ದಿರಿಸಲು ಬದ್ಧ ಎಂದರು.

ನಗರದ ಪ್ರಮುಖ ರಸ್ತೆಗಳು ಫಾಸ್ಟ್ ಫುಡ್, ತರಕಾರಿ ಮತ್ತು ವಿವಿಧ ಫುಟ್‌ಪಾತ್ ವ್ಯಾಪಾರಿಗಳಿಂದ ಆವರಿಸಿಕೊಂಡಿದ್ದು, ಅವರಿಗೆ ಸಕಲ ಸೌಲಭ್ಯ ಕಲ್ಪಿಸಿ ಬೇರೆಡೆಗೆ ಸ್ಥಳಾಂತರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಜಗಣ್ಣ, ಫರೂಕ್, ಮುನೀರ್, ವೀರೇಶ್ ಗಮನ ಸೆಳೆದರು. ಸದ್ಯದಲ್ಲೇ ಫುಡ್ ಜೋನ್ ಯೋಜನೆ ಕೈಗೊಳ್ಳಲಿದ್ದೇವೆ ಎಂದು ಅಧ್ಯಕ್ಷರು ತಿಳಿಸಿದರು. ನಗರದ ಜನಸಂಖ್ಯೆ 60 ಸಾವಿರ ದಾಟಿದ್ದು, ತ್ಯಾಜ್ಯ ನಿರ್ವಹಣೆ ಸವಾಲಾಗಿದೆ. ತ್ಯಾಜ್ಯ ಸಂಗ್ರಹ ಘಟಕ ಭರ್ತಿಯಾಗಿದ್ದು, ಸಂಸ್ಕರಣೆಗೆ ಹೆಚ್ಚುವರಿ ನಿವೇಶನವಾಗಿ 2 ಎಕರೆ ಭೂಮಿ ಖರೀದಿಗೆ ಅನುದಾನ ಕಾಯ್ದಿರಿಸಬೇಕಾಗಿದೆ ಎಂದು ನಗರಸಭೆ ಆಯುಕ್ತೆ ಮಾನಸ ಸಭೆಗೆ ಮಾಹಿತಿ ನೀಡಿದರು.

ಸೇವ್ ಅವರ್ ಅರ್ಥ್ ಸಂಸ್ಥೆ ಅಧ್ಯಕ್ಷ ಸಂಜಯ್ ಮಾತನಾಡಿ, ಪ್ಲಾಸ್ಟಿಕ್ ಬಳಸುವವರ ಸಂಖ್ಯೆ ನಗರದಲ್ಲಿ ಹೆಚ್ಚಾಗುತ್ತಿದ್ದು, ಈ ಬಗ್ಗೆ ಪರಿಸರ ಇಂಜಿನಿಯರ್ ವಿಭಾಗ ಕಾರ್ಯಾಚರಣೆ ಮಾಡುತ್ತಿಲ್ಲ. ಟಿ ಅಂಗಡಿ, ಹೋಟೆಲ್ ಮತ್ತು ಬಾರ್‌ಗಳಲ್ಲಿ ಹೆಚ್ಚಿನ ಪ್ಲಾಸ್ಟಿಕ್ ಲೋಟ ಬಳಕೆಯಾಗುತ್ತಿದೆ. ಅಂಗಡಿಯಲ್ಲಿ ಆಹಾರ ಪದಾರ್ಥಗಳನ್ನು ಸಹ ಪ್ಲಾಸ್ಟಿಕ್‌ನಲ್ಲಿ ಪ್ಯಾಕಿಂಗ್ ಮಾಡಲಾಗುತ್ತಿದೆ. ಇದರಿಂದ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟ ಪ್ರಮಾಣ ಹೆಚ್ಚಿದೆ. ತಾಲೂಕಿನ ಲಕ್ಷಣತೀರ್ಥ ಜೀವನದಿ ಸಂರಕ್ಷಣೆಗೆ ವಿಶೇಷ ಅನುದಾನ ಕಾಯ್ದಿರಿಸಬೇಕು ಎಂದು ಆಗ್ರಹಿಸಿದರು.

ತ್ಯಾಜ್ಯ ಸಂಗ್ರಹ ಘಟಕದಲ್ಲಿ ಬಯೋಗ್ಯಾಸ್ ಪ್ಲಾಂಟ್ ಯೋಜನೆ ಅನುಷ್ಠಾನ ಸಂಬಂಧ ಪರಿಸರ ಇಂಜಿನಿಯರ್ ಸೌಮ್ಯ ಸಭೆಯಲ್ಲಿ ಪ್ರಸ್ತಾಪಿಸಿ, ನಗರಸಭೆ ಶೇ.40 ರಷ್ಟು ಮೂಲ ಬಂಡವಾಳ ಹೂಡಿ 7 ವರ್ಷ ನಿರ್ವಹಣೆ ಮಾಡಲಿದೆ ಎಂದರು. ಸಭೆಯಲ್ಲಿ ಉಪಾಧ್ಯಕ್ಷೆ ಆಶಾ, ನಗರಸಭೆ ಲೆಕ್ಕಾಧಿಕಾರಿ ಶಾರದ ಮತ್ತಿತರರಿದ್ದರು.

ಮನವಿ ಸಲ್ಲಿಕೆ

ನಗರ ವ್ಯಾಪ್ತಿಯಲ್ಲಿ ಆದಿವಾಸಿ ಕುಟುಂಬಗಳಿಗೆ ಬಡಾವಣೆ ನಿರ್ಮಾಣ, ಚಿಕ್ಕ ಹುಣಸೂರು ಕೆರೆ ಸ್ವಚ್ಛತೆ, ವಿಹಾರಿಗಳಿಗೆ ಸುರಕ್ಷಿತ ದಾರಿ ಸರಿಪಡಿಸಿ ಕೆರೆ ಮಧ್ಯದಲ್ಲಿ ಬುದ್ಧನ ವಿಗ್ರಹ ಸ್ಥಾಪನೆ, ಲಕ್ಷ್ಮಣತೀರ್ಥ ನದಿ ಸ್ವಚ್ಛತೆ, ಎರಡೂ ಕಡೆ ಮರಗಿಡ ನೆಟ್ಟು ತಿರುಗಾಡಲು ಕಿರು ರಸ್ತೆಮಾಡಿ ಅಲ್ಲಲ್ಲಿ ಕುಳಿತುಕೊಂಡು ವೀಕ್ಷಿಸಲು ವಿಹಾರಿಗಳಿಗೆ ಆಸನಗಳು, ಮಕ್ಕಳಿಗೆ ಅಡ್ವೆಂಚರ್ ಆಟಗಳು, ನಗರದ ವಿವಿಧ ವೃತ್ತಗಳಿಗೆ ಗಣ್ಯರ ಹೆಸರು ನಾಮಕರಣ, ಹಲವು ದಿನಗಳಿಂದ ನಿಂತು ಹೋಗಿರುವ ಜನತಾ ಚಿತ್ರಮಂದಿರದ ಮರು ಚಾಲನೆ, ಬೈಪಾಸ್ ರಸ್ತೆಯ 2 ಬದಿಗಳಲ್ಲಿ ಬೀದಿ ದೀಪಗಳ ಅಳವಡಿಕೆ, ವಿವಿಧ ಇಲಾಖೆಗಳ ಪಾಳು ಬಿದ್ದ ಕಟ್ಟಡಗಳ ದುರಸ್ತಿ ಮತ್ತು ಅವುಗಳನ್ನು ಅತಿಥಿ ಗೃಹಗಳಾಗಿ ಬಳಸುವುದು, ನಗರದಲ್ಲಿ ಸಂಚಾರಿ ಗ್ರಂಥಾಲಯ ಸ್ಥಾಪನೆ, ಆಮ್ಲಜನಕ ಪೂರೈಸುವ ವನಗಳ ನಿರ್ಮಾಣ ಹೀಗೆ ಹಲವು ಸಲಹೆಗಳನ್ನೊಳಗೊಂಡ ಮನವಿಯನ್ನು ಡೀಡ್ ಸಂಸ್ಥೆ ಡಾ.ಶ್ರೀಕಾಂತ್ ನಗರಸಭಾ ಅಧ್ಯಕ್ಷ ಶರವಣ, ಪೌರಾಯುಕ್ತೆ ಮಾನಸ ಹಾಗೂ ಇಂಜಿನಿಯರ್ ಶರ್ಮಿಳಾ, ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸಲ್ಲಿಸಿದರು.

ಇಂದು ಮೂಗೂರಲ್ಲಿ ಶ್ರೀಅಷ್ಟಲಕ್ಷ್ಮಿ ಪೂಜೆ

ಮೂಗೂರು, ನ.28– ಗ್ರಾಮದ ಶ್ರೀದಶರಥ ಕನ್ವೆನ್ಷನ್ ಹಾಲ್ ಕಲ್ಯಾಣ ಮಂಟಪದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಹಾಗೂ ಮೂಗೂರು ವಲಯ ಪೂಜಾ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಶ್ರೀಅಷ್ಟಲಕ್ಷ್ಮಿ ಪೂಜೆ ಸಾಮೂಹಿಕ ಧಾರ್ಮಿಕ ಸಭಾ ಕಾರ್ಯಕ್ರಮ ನ.29 ರಂದು ನಡೆಯಲಿದೆ.

ಮೈಸೂರಿನ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಂ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೂಗೂರು ಗ್ರಾಪಂ ಅಧ್ಯಕ್ಷ ಎಂ.ಡಿ.ಲೋಕೇಶ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ವಿಜಯಕುಮಾರ್ ನಾಗನಾಳ, ಕೆ.ಎನ್.ಪ್ರಭುಸ್ವಾಮಿ, ಸೋಮಣ್ಣ, ಎಂ.ಎಂ.ಬಸವಣ್ಣ, ಶಾಂತಿ ಆಗಮಿಸುವರು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕ್ಷೇತ್ರ ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ ತಿಳಿಸಿದ್ದಾರೆ.

ಕೂರ್ಗಲ್ಲು: ದತ್ತಿ ಉಪನ್ಯಾಸ ಕಾರ್ಯಕ್ರಮ



ಕೂರ್ಗಲ್ಲು ಗ್ರಾಮದಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಬೆಟ್ಟದಪುರ, ನ.28– ಸಮೀಪದ ಕೂರ್ಗಲ್ಲು ಗ್ರಾಮದಲ್ಲಿ ದಿ.ಸುಂದ್ರಮ್ಮ, ದಿ.ಬಸವಲಿಂಗಪ್ಪ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಉಪನ್ಯಾಸಕ ಮಹೇಂದ್ರ ಮೂರ್ತಿ ಮಾತನಾಡಿ, ಬಸವಣ್ಣನವರು ಈ ಹಿಂದೆಯೇ ಜಾತಿಭೇದ ಮರೆತು ಮಾನವ ಜೀವನವನ್ನು ಸಾರ್ಥಕ ಪಡಿಸಬೇಕು ಎಂಬ ಉದ್ದೇಶದಿಂದ ವಚನಗಳನ್ನು ಸಿದ್ಧಪಡಿಸಿ ಮನುಷ್ಯನಿಗೆ ಬೇಕಾದ ಸಂವಿಧಾನ ಬರೆದರು. ಆದ್ದರಿಂದ ರಾಜ್ಯ ಸರ್ಕಾರ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ ಎಂದರು.

ಮುಖಂಡ ಚಂದ್ರಶೇಖರ್ ಮಾತನಾಡಿ, ಶರಣ ಸಾಹಿತ್ಯ ಪರಿಷತ್ ಅಭಿವೃದ್ಧಿಗೆ ಶಾಲಾ ಕಾಲೇಜು ಆವರಣದಲ್ಲಿ ಪ್ರತಿ ತಿಂಗಳು ಶರಣ ಸಾಹಿತ್ಯ ಪರಿಷತ್ ಕಾರ್ಯಕ್ರಮ ಮಾಡುವುದರಿಂದ ಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಅರಿವು ಮೂಡಿಸಬಹುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ದಿಂಡಗಾಡು ಮಠದ ಶ್ರೀಅಪ್ಪಾಜಿ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿದರು. ದತ್ತಿ ಕಾರ್ಯಕ್ರಮಕ್ಕೆ 25,000 ರೂ. ನೀಡಿದ ಕೂರ್ಗಲ್ಲು ಶಿವಕುಮಾರಸ್ವಾಮಿ ಹಾಗೂ ಕುಟುಂಬದವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷ ಶಿವಯೋಗಿ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಕೊಡಗು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್.ಮೂರ್ತಿ, ಹಾಸನ ಅಧ್ಯಕ್ಷ ಎಂ.ಎನ್.ಕುಮಾರಸ್ವಾಮಿ, ನಿವೃತ್ತ ಶಿಕ್ಷಕ ಪುಟ್ಟರಾಜು, ಸರ್ಕಾರಿ ನೌಕರರ ಸಂಘದ ನಿರ್ದೇಶಕ ಧರ್ಮಪಾಲ್, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ತಾಲೂಕು ರೈತ ಸಂಘದ ಅಧ್ಯಕ್ಷ ಆನಂದ್, ವೀರಪ್ಪ, ಶರಣ ಸಾಹಿತ್ಯ ಪರಿಷತ್ ಹೋಬಳಿ ಘಟಕದ ಉಪಾಧ್ಯಕ್ಷ ಸುಕನ್ಯಾ, ನಿರ್ದೇಶಕರಾದ ಲತಾ, ಲೀಲಾವತಿ, ವೀಣಾ, ನೇತ್ರ, ವಿಶ್ವೇಶ್ವರಯ್ಯ, ರಾಜೇಂದ್ರ, ಮಹದೇವಪ್ಪ, ಶಂಕರ್, ಮಂಜುನಾಥ್, ಶಿವಶಂಕರ್, ಪರಮೇಶ್ ಸೇರಿದಂತೆ ಇನ್ನಿತರರಿದ್ದರು.

ಬಸವ ಭವನಕ್ಕೆ ನಿವೇಶನ, ಅನುದಾನ ಮಂಜೂರು ಮಾಡಿಸುವೆ

ವೀರಶೈವ ಸಮುದಾಯ ಒಗ್ಗೂಡಿ: ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ

ತಿ.ನರಸೀಪುರ, ನ.28– ಸಣ್ಣಪುಟ್ಟ ಸಮಾಜಗಳಿಗೂ ಸಮುದಾಯ ಭವನಗಳಿವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿರುವ ವೀರಶೈವ ಲಿಂಗಾಯತ ಸಮುದಾಯಕ್ಕೆ ಭವನವೂ ಇಲ್ಲ, ನಿವೇಶನವೂ ಇಲ್ಲ. ತಾಲೂಕಿನ ವೀರಶೈವ ಲಿಂಗಾಯತರು ನನ್ನೊಡನೆ ಒಗ್ಗಟ್ಟಿನಿಂದ ಬನ್ನಿ. ಬಸವ ಭವನ ನಿರ್ಮಾಣಕ್ಕೆ ಏಕೆ ನಮಗೆ ನಿವೇಶನ ಕೊಡುವುದಿಲ್ಲ ನೋಡಿಯೇ ಬಿಡುತ್ತೇನೆ ಎಂದು ಮಹಾಸಭಾ ಗೌರವಾಧ್ಯಕ್ಷ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಗುಡುಗಿದರು.

ಪಟ್ಟಣದ ಜೆಎಸ್‌ಎಸ್ ಸಭಾ ಭವನದಲ್ಲಿ ವೀರಶೈವ ವಿದ್ಯಾರ್ಥಿನಿಲಯ ನವೀಕರಣ ಹಿನ್ನೆಲೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಪ್ರಬಲ ಸಮುದಾಯವೊಂದಕ್ಕೆ ಇನ್ನೂ ಭವನ ನಿರ್ಮಾಣಕ್ಕೆ ನಿವೇಶನ ಮತ್ತು ಅನುದಾನ ಕೊಡಲ್ಲವೆಂದರೆ ಏನರ್ಥ. ನೀವೆಲ್ಲರೂ ಒಗ್ಗೂಡಿ ನನಗೆ ಬಲ ಕೊಡಿ. ನಾನೇ ಖುದ್ದಾಗಿ ನಿವೇಶನ ಮತ್ತು ಅನುದಾನ ಮಂಜೂರು ಮಾಡಿಸುತ್ತೇನೆ. ಎಲ್ಲದಕ್ಕೂ ಮೊದಲು ಸಮುದಾಯ ಒಗ್ಗಟ್ಟಾಗಬೇಕು. ಒಗ್ಗೂಡದಿದ್ದರೆ ಸಮುದಾಯದ ಬೇಡಿಕೆ ಈಡೇರದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭವನ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅನುದಾನ ಮಂಜೂರು ಮಾಡುವ ಭರವಸೆ ನೀಡಿ, ನಿವೇಶನ ಹುಡುಕುವಂತೆ ಸಮುದಾಯಕ್ಕೆ ಸೂಚಿಸಿದ್ದರು. ನಾವೆಷ್ಟೇ ಹುಡುಕಾಡಿದರೂ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸೂಕ್ತ ನಿವೇಶನ ಲಭ್ಯವಾಗಿಲ್ಲ. ಹಾಗಾಗಿ ನಿವೇಶನ ಕಲ್ಪಿಸುವ ಜವಾಬ್ದಾರಿಯನ್ನು ಸರ್ಕಾರ ಹಾಗೂ ಸಚಿವರಿಗೆ ಬಿಡೋಣ. ಸಮಾಜದ ಏಕೈಕ ಆಸ್ತಿ ವೀರಶೈವ ವಿದ್ಯಾರ್ಥಿನಿಲಯವನ್ನು ಯಾವುದೇ ಕಾರಣಕ್ಕೂ ಕೆಡುವಲು ಅವಕಾಶವಿಲ್ಲ. ನವೀಕರಣಕ್ಕೆ ಮಹಾಸಭಾದಿಂದ ಯೋಜನೆ ರೂಪಿಸಲಾಗಿದೆ. ಕಷ್ಟ ಕಾಲದಲ್ಲಿ ದೇಣಿಗೆ ಸಂಗ್ರಹಿಸಿ, ಕಟ್ಟಿರುವ ನಿಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯೂ ಕ್ಷೀಣಿಸಿರುವುದರಿಂದ ಪರ್ಯಾಯ ಚಟುವಟಿಕೆಗಳಿಗೆ ಬಳಸಿಕೊಳ್ಳಲು ನವೀಕರಣದ ಅಗತ್ಯವಿದೆ ಎಂದರು.



ತಿ.ನರಸೀಪುರದಲ್ಲಿ ನಡೆದ ಸಭೆಯನ್ನು ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್ ಮಾತನಾಡಿ, ವೀರಶೈವ ವಿದ್ಯಾರ್ಥಿನಿಲಯ ನವೀಕರಣಗೊಳಿಸುವ ನಿರ್ಣಯಕ್ಕೆ ಸಭೆಯಲ್ಲಿ ಅನುಮೋದನೆ ನೀಡಬೇಕು. ನವೀಕರಣ ಕಾಮಗಾರಿ ಆರಂಭಿಸಿದ ಬಳಿಕ ಯಾರಿಂದಲೂ ದೂರು ಬರಬಾರದು. ಅಲ್ಲದೆ ಮುಂದಿನ ದಿನಗಳಲ್ಲಿ ಯಾವುದೇ ಆಕ್ಷೇಪಗಳಿಗೆ ಅವಕಾಶವಿಲ್ಲ. ತಾಲೂಕಿನ ಸಮುದಾಯ ನಮ್ಮ ತಂಡ ಬೆಂಬಲಿಸಿ ಜವಾಬ್ದಾರಿ ನೀಡಿದ್ದರಿಂದ ಮೊದಲ ಹಂತದಲ್ಲಿ ವೀರಶೈವ ವಿದ್ಯಾರ್ಥಿನಿಲಯದ ನವೀಕರಣಕ್ಕೆ ಮುಂದಾಗಿದ್ದೇವೆ ಎಂದು ತಿಳಿಸಿದರು.

ಉಪಾಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಟಿಎಪಿಸಿ ಎಂಎಸ್ ಮಾಜಿ ಉಪಾಧ್ಯಕ್ಷ ಹೆಳವರಹುಂಡಿ ನಟರಾಜು ಮಾತನಾಡಿದರು. ತಾಪಂ ಮಾಜಿ ಚಂದ್ರಶೇಖರ್ ಮಾತನಾಡಿದರು. ಹಿರಿಯೂರು ಪ್ರಕಾಶ್ 25 ಸಾವಿರ ರೂ. ದೇಣಿಗೆ ಘೋಷಿಸಿದರು. ಮಾದ್ರಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಮುಡುಕುತೊರೆ ಕಲ್ಲು ಮಠದ ನಂದಿಕೇಶ್ವರ ಸ್ವಾಮೀಜಿ, ಹೊಸೂರು ಹುಂಡಿ ಮಠದ ರಾಜಶೇಖರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ಕೆ.ಕಿರಣ್, ಪಿ.ಎಸ್.ಅಂಬಿಕಾ, ಪ್ರಧಾನ ಕಾರ್ಯದರ್ಶಿ ಕುರುಬೂರು ವಿ.ಶಿವಶಂಕರ್, ಕಾರ್ಯದರ್ಶಿಗಳಾದ ಕಾರ್ ಮಲ್ಲಪ್ಪ, ಹಲವಾರ ಪರಮೇಶ್ ಪಟೇಲ್, ಕೋಶಾಧ್ಯಕ್ಷ ದೊಡ್ಡನಹುಂಡಿ ಜಿ.ನಂಜುಂಡಸ್ವಾಮಿ, ಕಾರ್ಯಕಾರಿಣಿ ಸದಸ್ಯರಾದ ಎಸ್.ಬಿ.ಸುಗಂಧರಾಜು, ತೊಂಟೇಶ್, ಓಂಕಾರ್ ಸ್ವಾಮಿ ಎಂ.ಗುರುಸ್ವಾಮಿ, ಕೆ.ಎಂ.ಮಲ್ಲು, ಎಂ.ಪರಶಿವಮೂರ್ತಿ, ಟಿ.ಪಿ.ಶಿವಕುಮಾರಸ್ವಾಮಿ, ಎಂ.ಸುರೇಶ, ಬಿ.ಎಸ್.ಜ್ಞಾನೇಶ್ವರಿ, ಟಿ.ಎಂ.ರವಿ, ಹಿರಿಯೂರು ವೀರೇಂದ್ರ, ಟಿ.ಬಿ.ಚಂದ್ರದರ, ಮೆಡಿಕಲ್ ಕುಮಾರ್, ಎಂ.ಮಹೇಶ್, ಮುಖಂಡರಾದ ರಾಜಣ್ಣ, ಕೆ.ಜಿ.ವೀರಣ್ಣ, ಸೋಮಶೇಖರಪ್ಪ, ಸಿದ್ದಲಿಂಗಸ್ವಾಮಿ, ಶೇಖರಪ್ಪ, ನಾಗರಾಜಪ್ಪ, ನಿಂಗಪ್ಪ, ಕೇಬಲ್ ರಾಜಶೇಖರ್, ನಾಗೇಶ್, ಪ್ರಭು, ರತ್ನರಾಜ್ ಹಾಗೂ ಇತರರಿದ್ದರು.

> ಹಳೇ ಕಟ್ಟಡವಾಗಿರುವ ವೀರಶೈವ ವಿದ್ಯಾರ್ಥಿ ನಿಲಯವನ್ನು ಶುಭ ಸಮಾರಂಭಗಳಿಗೆ ಸದ್ಬಳಕೆಯಾಗುವಂತೆ 30 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಳಿಸಲು ಯೋಜನೆ ರೂಪಿಸಲಾಗಿದೆ. ಕಟ್ಟಡದ ಮೂಲ ಸ್ವರೂಪಕ್ಕೆ ಯಾವುದೇ ಧಕ್ಕೆ ತರದೆ, ನವ ವಿನ್ಯಾಸ ನೀಡಲಾಗುತ್ತದೆ. ಸರ್ಕಾರ ಬಸವಭವನ ನಿರ್ಮಾಣಕ್ಕೆ ನಿವೇಶನ ಮತ್ತು ಅನುದಾನ ಮಂಜೂರು ಮಾಡಿದ ಬಳಿಕ ವಿಶಾಲವಾದ ಭೂಪ್ರದೇಶದಲ್ಲಿ ಉತ್ತಮ ಭವನ ನಿರ್ಮಾಣ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ.
> – ಗೌರಿಶಂಕರ ಸ್ವಾಮೀಜಿ, ಎಂ.ಎಲ್.ಹುಂಡಿ ಮಠ.

ಬಿಇಎಲ್‌ನಿಂದ ಮೈಸೂರು ಪಾಲಿಕೆಗೆ 30 ಇ-ಆಟೋಗಳ ಕೊಡುಗೆ




ಬಿಇಎಲ್‌ನ ನಿರ್ದೇಶಕ ವಿಕ್ರಮ್ ಹಾಗೂ ಪ್ರಧಾನ ವ್ಯವಸ್ಥಾಪಕ ಚೇತನ್ ಪಾಟೀಲ್ ಅವರು ಇ-ವಾಹನಗಳನ್ನು ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರಪಾಲಿಕೆ ಪ್ರಧಾನ ಕಚೇರಿ ಆವರಣದಲ್ಲಿ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಹಸ್ತಾಂತರಿಸಿದರು. ಮತ್ತೊಂದು ಚಿತ್ರದಲ್ಲಿ ಇ-ವಾಹನಗಳನ್ನು ಕಾಣಬಹುದು

ಮೈಸೂರು,ನ.28(ಆರ್‌ಕೆ)– ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಮೈಸೂರಿನ ಮಹಾನಗರ ಪಾಲಿಕೆಗೆ 30 ವಿದ್ಯುತ್ ಚಾಲಿತ ಆಟೋಗಳನ್ನು ಕೊಡುಗೆಯಾಗಿ ನೀಡಿದೆ.

ಬಿಇಎಲ್‌ನ ನಿರ್ದೇಶಕ ವಿಕ್ರಮ್ ಹಾಗೂ ಪ್ರಧಾನ ವ್ಯವಸ್ಥಾಪಕ ಚೇತನ್ ಪಾಟೀಲ್ ಅವರು ಇ-ವಾಹನಗಳನ್ನು ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರಪಾಲಿಕೆ ಪ್ರಧಾನ ಕಚೇರಿ ಆವರಣದಲ್ಲಿ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಇಂದು ಹಸ್ತಾಂತರಿಸಿದರು.

ಪಾಲಿಕೆ ಆಯುಕ್ತರ ಕೋರಿಕೆ ಮೇರೆಗೆ ಸಿಎಸ್‌ಆರ್ ಅಡಿ ಭಾರತ್ ಎಲೆಕ್ಟ್ರಾನಿಕ್ಸ್ ನಿಯಮಿತವು ಮೈಸೂರು ಮಹಾನಗರ ಪಾಲಿಕೆಗೆ 25 ಕಸ ವಿಲೇವಾರಿ ಆಟೋ ಮತ್ತು 5 ಫಾಗಿಂಗ್ ವಾಹನಗಳನ್ನು ಪೂರೈಸಿದೆ.

ಇಂದು ಬೆಳಗ್ಗೆ ಪಾಲಿಕೆ ಕಚೇರಿ ಆವರಣದಲ್ಲಿ ಇ-ಆಟೋಗಳಿಗೆ ಪೂಜೆ ಸಲ್ಲಿಸಿ, ಅವುಗಳ ಕೀಲಿಗಳನ್ನು ಕಂಪನಿ ಅಧಿಕಾರಿಗಳು, ಆಯುಕ್ತಷರೀಫ್ ಅವರಿಗೆ ಹಸ್ತಾಂತರಿಸಿದರು.

ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲು ಇಂಧನರಹಿತ ವಿದ್ಯುತ್ ಚಾಲಿತ ಇ-ಆಟೋಗಳನ್ನು ಬಳಸಲಿದ್ದು, 5 ಆಟೋಗಳಿಂದ ಬಡಾವಣೆಗಳಲ್ಲಿ ಸೊಳ್ಳೆಗಳ ವಿರುದ್ಧ ಫಾಗಿಂಗ್ ಮಾಡಲಾಗುವುದು ಎಂದ ಪಾಲಿಕೆ ಆಯುಕ್ತರು, ಇದರಿಂದ ಪಾಲಿಕೆಗೆ ಖರ್ಚು ಕಡಿಮೆಯಾಗುತ್ತದೆ ಎಂದರು.

ಈ ಹಿಂದೆ ಐಸಿಐಸಿಐ ಬ್ಯಾಂಕ್ ಸಿಎಸ್‌ಆರ್ ಅನುದಾನದಲ್ಲಿ 15 ಎಲೆಕ್ಟ್ರಾನಿಕ್ ಆಟೋಗಳನ್ನು ನೀಡಿದ್ದಲ್ಲದೆ, ಪಾಲಿಕೆಯಿಂದಲೂ 5 ವಾಹನಗಳನ್ನು ಖರೀದಿಸಲಾಗಿತ್ತು. ಇದೀಗ ಬಿಇಎಲ್‌ನವರೂ 30 ವಾಹನ ಕೊಟ್ಟಿರುವುದರಿಂದ ಒಟ್ಟು 50 ವಾಹನಗಳ ಮೂಲಕ ಪೆಟ್ರೋಲ್-ಡೀಸೆಲ್ ಇಲ್ಲದೆ ಕಸ ವಿಲೇವಾರಿ ಮತ್ತು ಫಾಗಿಂಗ್ ಮಾಡಬಹುದಾಗಿದೆ ಎಂದು ಆಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದರು.

ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು ಹಾಗೂ ಪೌರಕಾರ್ಮಿಕರು ಈ ಸಂದರ್ಭ ಉಪಸ್ಥಿತರಿದ್ದರು.

ಜಾರ್ಖಂಡ್ 14ನೇ ಮುಖ್ಯಮಂತ್ರಿಯಾಗಿ ಹೇಮಂತ್ ಸೊರೆನ್ ಪ್ರಮಾಣ ವಚನ ಸ್ವೀಕಾರ



ರಾಂಚಿ: ಜೆಎಂಎಂ ನಾಯಕ ಹೇಮಂತ್ ಸೊರೆನ್ ಅವರು ಗುರುವಾರ ಜಾರ್ಖಂಡ್‌ನ 14ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ರಾಂಚಿಯ ಮೊರಾ ಬಾಡಿ ಮೈದಾನದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ಜಾರ್ಖಂಡ್ ರಾಜ್ಯಪಾಲ ಸಂತೋಷ್ ಕುಮಾರ್ ಗಂಗ್ವಾರ್ ಅವರು 49 ವರ್ಷದ ಬುಡಕಟ್ಟು ನಾಯಕ ಸೊರೆನ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ರಾಂಚಿಯಲ್ಲಿ ನಡೆದ ಈ ಭವ್ಯ ಸಮಾರಂಭದಲ್ಲಿ ಇಂಡಿಯಾ ಬ್ಲಾಕ್ ನಾಯಕರು ಸಹ ಭಾಗವಹಿಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ದೆಹಲಿ ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಉಪಸ್ಥಿತರಿದ್ದರು. ಜೆಎಂಎಂ ನಾಯಕ ಸೊರೆನ್ ಅವರು ಹದಿನಾಲ್ಕನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನ ಜೆಎಂಎಂ ಅಧ್ಯಕ್ಷ ಮತ್ತು ಅವರ ತಂದೆ ಶಿಬು ಸೊರೆನ್ ಅವರನ್ನು ಭೇಟಿಯಾದರು. ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟ 56 ಸ್ಥಾನಗಳನ್ನು ಗಳಿಸಿದರೆ, ಬಿಜೆಪಿ ನೇತೃತ್ವದ ಎನ್‌ಡಿಎ 24 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ

ಲೋಕಾಯುಕ್ತ ಮೇಲೆ ಸಿದ್ದರಾಮಯ್ಯ ಪ್ರಭಾವದ ಕಾರಣ ಅವರನ್ನು ಇನ್ನೂ ಬಂಧಿಸಿಲ್ಲ

ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪ



ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು

ಮೈಸೂರು,ನ.28(ಬಿಎಲ್‌ಯು)– ರಾಜ್ಯ ಸರ್ಕಾರದ ಅಧೀನದಲ್ಲಿರುವ ಲೋಕಾಯುಕ್ತ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಭಾವ ಬೀರಿರುವ ಕಾರಣ ಅವರನ್ನು ಇನ್ನೂ ಬಂಧಿಸಿಲ್ಲ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನಿರೀಕ್ಷಣಾ ಜಾಮೀನು ಪಡೆದಿಲ್ಲ, ಆದರೂ ಲೋಕಾಯುಕ್ತರು ಇನ್ನು ಏಕೆ ಅವರನ್ನು ಬಂಧಿಸಿಲ್ಲ ಎಂದು ಪ್ರಶ್ನಿಸಿದರು.

ಅಧಿಕಾರದ ದುರುಪಯೋಗದ ಆಧಾರದ ಮೇಲೆ ಲೋಕಾಯುಕ್ತದಲ್ಲಿ ಸಿದ್ದರಾಮಯ್ಯ ವಿರುದ್ಧ ವಿವಿಧ ಸೆಕ್ಷನ್‌ಗಳಲ್ಲಿ ಪ್ರಕರಣ ದಾಖಲಾಗಿದೆ. ಎ1 ಆರೋಪಿಯಾಗಿರುವ ಸಿದ್ದರಾಮಯ್ಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಕಾರಣ ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ ಎಂದು ಆಪಾದಿಸಿದರು.

ಇದೇ ತಪ್ಪು ಜನಸಾಮಾನ್ಯರು ಮಾಡಿದ್ದರೆ ಸುಮ್ಮನೆ ಇರುತ್ತಿದ್ದರೆ ಎಂದು ಪ್ರಶ್ನಿಸಿದ ಮಹೇಶ್, ಲೋಕಾಯುಕ್ತ ತನಿಖೆ ಆರಂಭದಿಂದ ಸರಿಯಾದ ರೀತಿ ನಡೆದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಜೊತೆಗೆ ಲೋಕಾಯುಕ್ತ ಕೈಗೊಂಬೆಯಾಗಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು.

ಆದ ಕಾರಣ ಲೋಕಾಯುಕ್ತ ತನ್ನ ಘನತೆ ಉಳಿಸಿಕೊಳ್ಳಬೇಕಾದರೆ ಸರಿಯಾದ ರೀತಿಯಲ್ಲಿ ತನಿಖೆ ಮಾಡಬೇಕು. ಎ1 ಆರೋಪಿಯಾಗಿರುವ ಸಿದ್ದರಾಮಯ್ಯ ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಬಿಜೆಪಿಯಲ್ಲಿನ ಬಣ ಬಡಿದಾಟದ ಬಗ್ಗೆ ಪ್ರತಿಕ್ರಿಯೆ ನೀಡಿದ ಮಹೇಶ್, ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ವೈಯಕ್ತಿಕ ವಿಚಾರಕ್ಕಿಂತ ಪಕ್ಷದ ತತ್ವ ಸಿದ್ಧಾಂತ ಮುಖ್ಯ ಎಂದು ಎಲ್ಲರೂ ಅರಿಯಬೇಕು. ಪಕ್ಷದ ಹೈಕಮಾಂಡ್ ಇನ್ನು ಒಂದು ತಿಂಗಳಲ್ಲಿ ಈ ಸಮಸ್ಯೆ ಪರಿಹಾರ ಮಾಡುತ್ತದೆ. ಆದರೆ ಈಗ ಪಕ್ಷದೊಳಗಿನ ಬೆಳವಣಿಗೆಯಿಂದ ಬಿಜೆಪಿ ವರ್ಚಸ್ಸಿಗೆ ಯಾವುದೇ ಧಕ್ಕೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದ ಮೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಏಕೆಂದರೆ ಆಡಳಿತ ಪಕ್ಷ ಗೆಲುವು ಸಾಧಿಸುವುದು ಸಹಜ. ಆದರೆ ಬಿಜೆಪಿ ಬಲಾಢ್ಯ ಸಮುದಾಯಕ್ಕಿಂತ ತಳ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ ಒಬಿಸಿಗೆ ಹೆಚ್ಚಿನ ಟಿಕೆಟ್ ನೀಡಿದ್ದರೆ, ಕಾಂಗ್ರೆಸ್ ಮುಸ್ಲಿಂ ಸಮುದಾಯಕ್ಕೆ ಆದ್ಯತೆ ನೀಡಿತು. ಆದರೆ ಅವರ ರಾಜಕೀಯ ತಂತ್ರಗಾರಿಕೆ ಯಶಸ್ವಿಯಾಗಲಿಲ್ಲ ಎಂದು ಮಹೇಶ್ ಟೀಕಿಸಿದರು.

ಬಿಜೆಪಿ ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್, ಜಿಲ್ಲಾ ವಕ್ತಾರ ದಯಾನಂದ ಪಟೇಲ್, ಮುಖಂಡರಾದ ಸುರೇಶ್, ಬಾಬು, ಗೋಪಾಲ ರಾವ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್(ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜಲಂಧರ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ಕಿ ವಿದ್ಯಾ ಕಾ ವೋ ವಾಲಾ ವಿಡಿಯೋ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಶ್ವಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಂದಿರ (ತೆ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಘೀರ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಣಿಪುರದಲ್ಲಿ 250 ಮಂದಿ ಸಾವು ಖಂಡಿಸಿ ಇಂಡಿಯಾ ಬ್ಲಾಕ್‌ನಿಂದ ದೆಹಲಿಯಲ್ಲಿ ಪ್ರತಿಭಟನೆ



ಇಂಫಾಲ್, ನ.28– ಹಿಂಸಾಚಾರ ಪೀಡಿತ ಈಶಾನ್ಯ ರಾಜ್ಯ ಮಣಿಪುರದಲ್ಲಿ ಸಹಜ ಸ್ಥಿತಿಗೆ ಒತ್ತಾಯಿಸಿ ಇಂಡಿಯಾ ಬಣ ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಯೋಜಿಸುತ್ತಿದೆ ಎಂದು ಮಣಿಪುರ ಕಾಂಗ್ರೆಸ್ ಅಧ್ಯಕ್ಷ ಕೇಶಾಮ್ ಮೇಘಚಂದ್ರ ಅವರು ಗುರುವಾರ ಹೇಳಿದ್ದಾರೆ.


ರಾಷ್ಟ್ರರಾಜಧಾನಿಯಲ್ಲಿ ನಡೆಯುವ ಉದ್ದೇಶಿತ ಪ್ರತಿಭಟನೆಯಲ್ಲಿ ಇಂಡಿಯಾ ಮೈತ್ರಿಕೂಟದ ರಾಷ್ಟ್ರೀಯ ನಾಯಕರು ಭಾಗವಹಿಸಬಹುದು ಎಂದು ಅವರು ತಿಳಿಸಿದ್ದಾರೆ.

ಮಣಿಪುರವು ಕಳೆದ ವರ್ಷ ಮೇ ತಿಂಗಳಿನಿಂದ ಜನಾಂಗೀಯ ಹಿಂಸಾಚಾರದಿಂದ ತತ್ತರಿಸಿದೆ. 250 ಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡಿದೆ. ಇದನ್ನು ಖಂಡಿಸಿ ಇಂಡಿಯಾ ಬ್ಲಾಕ್ ದೆಹಲಿಯಲ್ಲಿ ಪ್ರತಿಭಟನೆ ನಡೆಸಲಿದೆ ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರ ಯಾವಾಗ ಕೊನೆಗೊಳಿಸಲು ರಾಜ್ಯ ಸರ್ಕಾರ ಯೋಜಿಸುತ್ತಿದೆ? ಮತ್ತು ಏಕೆ ಹಿಂಸಾಚಾರ ಮೇಲುಗೈ ಸಾಧಿಸಲು ಅವಕಾಶ ಮಾಡಿಕೊಟ್ಟಿದೆ? ಎಂದು ಮೇಘಚಂದ್ರ ಅವರು ಮಣಿಪುರ ಸರ್ಕಾರವನ್ನು ಪ್ರಶ್ನಿಸಿದರು.

ನಾವು ಹಲವು ಬಾರಿ ರಾಜಕೀಯ ಪಕ್ಷಗಳ ಸಭೆ ಕರೆಯುವಂತೆ ಮನವಿ ಮಾಡಿದ್ದೇವೆ ಮತ್ತು ರಾಜ್ಯಕ್ಕೆ ಭೇಟಿ ನೀಡುವಂತೆ ಪ್ರಧಾನಿ ಮೋದಿಗೆ ಒತ್ತಾಯಿಸಿದ್ದೇವೆ. ಮಣಿಪುರ ಜನರ ಧ್ವನಿಯನ್ನು ಸರ್ಕಾರ ಕೇಳದ ಕಾರಣ ಪರಿಸ್ಥಿತಿ ಹದಗೆಟ್ಟಿದೆ ಎಂದು ಆರೋಪಿಸಿದರು.

ಇಸ್ಕಾನ್ ನಿಷೇಧಿಸಲು ಬಾಂಗ್ಲಾದೇಶ ಹೈಕೋರ್ಟ್ ನಕಾರ



ಢಾಕಾ, ನ.28– ಬಾಂಗ್ಲಾದೇಶದಲ್ಲಿ ಇಸ್ಕಾನ್ ಚಟುವಟಿಕೆಗಳನ್ನು ನಿಷೇಧಿಸಲು ಹೈಕೋರ್ಟ್ ಗುರುವಾರ ನಿರಾಕರಿಸಿದೆ ಎಂದು ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ.

ದೇಶದ್ರೋಹದ ಆರೋಪದ ಮೇಲೆ ಬಾಂಗ್ಲಾದೇಶದಲ್ಲಿ ಇಸ್ಕಾನ್ ಮುಖಂಡ ಚಿನ್ಮೋಯ್ ಕೃಷ್ಣ ದಾಸ್ ಬಂಧನ ಖಂಡಿಸಿ ನಡೆದ ಪ್ರತಿಭಟನೆ ವೇಳೆ ಭದ್ರತಾ ಸಿಬ್ಬಂದಿ ಮತ್ತು ಹಿಂದೂ ನಾಯಕನ ಬೆಂಬಲಿಗರ ನಡುವಿನ ಘರ್ಷಣೆಯಲ್ಲಿ ವಕೀಲರೊಬ್ಬರು ಸಾವನ್ನಪ್ಪಿದ್ದಾರೆ.

ಬುಧವಾರ ವಕೀಲರೊಬ್ಬರು ಬಾಂಗ್ಲಾದೇಶದಲ್ಲಿ ಇಸ್ಕಾನ್ ಚಟುವಟಿಕೆಗಳನ್ನು ನಿಷೇಧಿಸಬೇಕು ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದಿ ಡೈಲಿ ಸ್ಟಾರ್ ಪ್ರಕಾರ, ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಇಸ್ಕಾನ್‌ನ ಇತ್ತೀಚಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ತಿಳಿಸುವಂತೆ ಅಟಾರ್ನಿ ಜನರಲ್ ಅವರಿಗೆ ಸೂಚಿಸಿದೆ. ಅಲ್ಲದೆ ಹಿಂದೂಗಳ ಮೇಲೆ ದಾಳಿಯಾಗದಂತೆ, ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳುವಂತೆ ಕೋರ್ಟ್ ಸೂಚನೆ ನೀಡಿದೆ.

ಈ ವಾರ ಬಂಧನಕ್ಕೊಳಗಾದ ಹಿಂದೂ ಮುಖಂಡ ಚಿನ್ಮೋಯ್ ಕೃಷ್ಣದಾಸ್ ಅವರನ್ನು ಈ ಹಿಂದೆ ಇಸ್ಕಾನ್‌ನಿಂದ ಹೊರಹಾಕಲಾಗಿತ್ತು. ಅವರ ಬಂಧನವು ಮಂಗಳವಾರ ತೀವ್ರ ಘರ್ಷಣೆಗೆ ಕಾರಣವಾಗಿದ್ದು, ಈ ವೇಳೆ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಅಡ್ವೊಕೇಟ್ ಸೈಫುಲ್ ಇಸ್ಲಾಂ ಮೃತಪಟ್ಟಿದ್ದಾರೆ.

ಇಂದು ವಿಚಾರಣೆ ವೇಳೆ ಹೆಚ್ಚುವರಿ ಅಟಾರ್ನಿ ಜನರಲ್ ಅನೀಕ್ ಆರ್ ಹಕ್ ಮತ್ತು ಡೆಪ್ಯುಟಿ ಅಟಾರ್ನಿ ಜನರಲ್ ಅಸಾದ್ ಉದ್ದೀನ್ ಅವರು ವಕೀಲ ಸೈಫುಲ್ ಇಸ್ಲಾಂ ಅಲಿಫ್ ಹತ್ಯೆ ಮತ್ತು ಇಸ್ಕಾನ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮೂರು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 33 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೈಕೋರ್ಟ್ ಪೀಠಕ್ಕೆ ತಿಳಿಸಿದರು.

ನವೆಂಬರ್ 25 ರಂದು ಬಾಂಗ್ಲಾದೇಶ, ದೇಶದ್ರೋಹದ ಆರೋಪದ ಮೇಲೆ ಚಿನ್ಮೋಯ್ ಕೃಷ್ಣದಾಸ್ ಅವರನ್ನು ಬಂಧಿಸಿದೆ. ಕೋರ್ಟ್‌ನಲ್ಲಿ ಜಾಮೀನು ನೀಡದೇ ನೇರವಾಗಿ ಜೈಲಿಗೆ ಕಳುಹಿಸಲಾಗಿದೆ. ಇದನ್ನು ಖಂಡಿಸಿ ಚಿನ್ಮೋಯ್ ಬ್ರಹ್ಮಚಾರಿ ಅವರ ಭಕ್ತರು, ಬಾಂಗ್ಲಾದೇಶದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಬೇರೆ ದೇಶದ ವಿಚಾರದಲ್ಲಿ ಹಸ್ತಕ್ಷೇಪ ಮಾಡಲ್ಲ; ಕೇಂದ್ರದ ನಿಲುವು ಅನುಸರಿಸುತ್ತೇನೆ: ಮಮತಾ



ಕೋಲ್ಕತ್ತಾ, ನ.28– ನೆರೆಯ ಬಾಂಗ್ಲಾದೇಶದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಗುರುವಾರ ತೀವ್ರ ಕಳವಳ ವ್ಯಕ್ತಪಡಿಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಬೇರೆ ದೇಶಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಹೇಳಿದ್ದಾರೆ.

ಇಂದು ವಿಧಾನಸಭೆಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ಬಾಂಗ್ಲಾದೇಶದ ಸಮಸ್ಯೆಯನ್ನು ಕೇಂದ್ರ ಸರ್ಕಾರ ಪರಿಹರಿಸಬೇಕಾಗಿದ್ದು, ಅವರು ತೆಗೆದುಕೊಳ್ಳುವ ನಿರ್ಧಾರಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಬಾಂಗ್ಲಾದೇಶ ವಿಭಿನ್ನ ದೇಶ. ಭಾರತ ಸರ್ಕಾರ ಆ ಬಗ್ಗೆ ಪರಿಶೀಲಿಸುತ್ತದೆ. ಅದು ನಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ನಾವು ಅದರ ಬಗ್ಗೆ ಮಾತನಾಡಬಾರದು ಅಥವಾ ಮಧ್ಯಪ್ರವೇಶಿಸಬಾರದು. ನಾವು ಒಳಗೆ ವಿಷಾದಿಸುತ್ತಿದ್ದರೂ, ಕೇಂದ್ರದ ನೀತಿಗಳನ್ನು ಅನುಸರಿಸುತ್ತೇವೆ ಎಂದು ಪಶ್ಚಿಮ ಬಂಗಾಳ ಸಿಎಂ ತಿಳಿಸಿದ್ದಾರೆ. ಈ ವಿಷಯದ ಬಗ್ಗೆ ಇಸ್ಕಾನ್ ಪ್ರತಿನಿಧಿಗಳೊಂದಿಗೆ ಮಾತನಾಡಿದ್ದೇನೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಆದರೆ ಆ ಬಗ್ಗೆ ಹೆಚ್ಚಿನ ವಿವರ ನೀಡಲು ನಿರಾಕರಿಸಿದರು.

ಪಕ್ಷದಲ್ಲಿ ಎರೆಹುಳುಗಳು ನಾಗರಹಾವುಗಳಾಗುತ್ತಿದ್ದಾರೆ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಕಿಡಿ



ಬೆಂಗಳೂರು, ನ.28– ಕಾಂಗ್ರೆಸ್‌ನವರು ಚಿನ್ನದ ಬಟ್ಟಲುಗಳಿಂದ ವಿಷಯಗಳನ್ನು ಕೊಡುತ್ತಿದ್ದರೂ ನಮ್ಮವರು ತೆಗೆದುಕೊಳ್ಳಲು ಆಗುತ್ತಿಲ್ಲ. ಪಕ್ಷದಲ್ಲಿ ಎರೆಹುಳುಗಳು ನಾಗರಹಾವುಗಳಾಗುತ್ತಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಡಿವಿ ಸದಾನಂದ ಗೌಡ ವಾಗ್ದಾಳಿ ನಡೆಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಿಜೆಪಿಯಲ್ಲಿ ಆಂತರಿಕ ಜಗಳವೇ ಆಯ್ತು. ಇವರಿಂದ ಸರ್ಕಾರವನ್ನು ಏನು ಮಾಡಲು ಸಾಧ್ಯವಿಲ್ಲ ಎಂದು ಜನರು ಮಾತನಾಡುತ್ತಿದ್ದಾರೆ. ಈಗೋ ಸಮಸ್ಯೆಯಿಂದ ಬಿಜೆಪಿಗೆ ದೊಡ್ಡ ಹಾನಿಯಾಗುತ್ತಿದೆ. ಇಷ್ಟೆಲ್ಲಾ ಪಕ್ಷದಲ್ಲಿ ಆಗುತ್ತಿರುವ ರಾದ್ಧಾಂತವನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ಕಿಡಿಕಾರಿದರು.


ಇನ್ನೊಮ್ಮೆ ನಾನು ದೆಹಲಿಗೆ ಹೋಗುವ ನಿರ್ಧಾರ ಮಾಡಿದ್ದೇನೆ. ಡಿ.3 ರಂದು ಕೋರ್ ಕಮಿಟಿ ಸಭೆ ಇದೆ. ಅಲ್ಲಿ ಇದರ ಬಗ್ಗೆ ಚರ್ಚಿಸಿ ಇದಕ್ಕೆಲ್ಲ ಬ್ರೇಕ್ ಹಾಕುವಂತೆ ಹೈಕಮಾಂಡ್‌ಗೆ ಒತ್ತಾಯ ಮಾಡುತ್ತೇವೆ ಎಂದು ತಿಳಿಸಿದರು.

ಕರ್ನಾಟಕ ಬಿಜೆಪಿ ಬಗ್ಗೆ ನಾನು ವರಿಷ್ಠರಿಗೆ ಎರಡು ಪತ್ರ ಬರೆದಿದ್ದೇನೆ. ನಾನು ಅಧ್ಯಕ್ಷ ಇದ್ದಾಗಲೂ ಇದಕ್ಕಿಂತ ದೊಡ್ಡ ಗುಂಪುಗಳಿದ್ದವು. ಪಕ್ಷದ ಕಟ್ಟಿದ್ದು ನಾವು ಅಂತ ಅನಂತ್‌ಕುಮಾರ್ ಹಾಗೂ ಯಡಿಯೂರಪ್ಪ ಗುಂಪು ಪ್ರಬಲವಾಗಿ ಸೆಣಸಾಡುತ್ತಿದ್ದವು. ಆದರೆ, ಅನಂತ್ ಕುಮಾರ್ ಹಾಗೂ ಯಡಿಯೂರಪ್ಪ ಗುಂಪು ಯಾವತ್ತೂ ಬೀದಿಗೆ ಇಳಿದಿರಲ್ಲ ಎಂದರು.

ನೀವು ಇಲ್ಲಿ ಬೀದಿಗೆ ಹೋಗುವ ಬದಲು ದೆಹಲಿಗೆ ವಿಮಾನ ಹತ್ತಿ ಹೋಗಿ. ದೆಹಲಿಯಲ್ಲಿ ನಮ್ಮ ಅದ್ಭುತ ನಾಯಕರು ಇದ್ದಾರೆ. ದೆಹಲಿಗೆ ಹೋಗಿ ಪಕ್ಷದ ವಿಚಾರ ಹೇಳಿ ಸರಿಪಡಿಸಿಕೊಳ್ಳಿ. ಇಲ್ಲದಿದ್ದರೆ ನೀವೆಲ್ಲ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಎಂದು ಕರೆಸಿಕೊಳ್ಳಲು ನಾಲಾಯಕ್ ಎಂದು ವಿಜಯೇಂದ್ರ, ಯತ್ನಾಳ್ ತಂಡಕ್ಕೆ ಡಿವಿಎಸ್ ಕಿವಿ ಮಾತು ಹೇಳಿದರು. ನಾವು ಹಿರಿಯರು ಸೇರಿಕೊಂಡು ಒಂದು ಸಭೆ ಕರೆಯಬೇಕು. ಎರಡೂ ಗುಂಪುಗಳನ್ನು ಕರೆದು ಮಾತಾಡಬೇಕು ಅಂತ ನಮ್ಮ ಮನಸ್ಸಿನಲ್ಲಿತ್ತು. ಆದರೆ ಅವರು ಯಾವಾಗ ಬೀದಿಗೆ ಇಳಿದರೋ ಆಗ ಇದು ನಮ್ಮ ಕೈಯಲ್ಲಿ ಆಗದ ಕೆಲಸ ಅಂತ ಗೊತ್ತಾಯ್ತು. ಬಿಜೆಪಿ ಭಿನ್ನಮತ ರಾಜ್ಯದ ಹಿರಿಯರ ಕೈಮೀರಿ ಹೋಗಿದೆ ಎಂದು ತಿಳಿಸಿದರು.

ಡಿಕೆಶಿ ಬಳಿ ರಾಜ್ಯಾಧ್ಯಕ್ಷ ವಿಜಯೇಂದ್ರ 20 ಪತ್ರಕ್ಕೆ ಸಹಿ ಹಾಕಿಸಿಕೊಂಡ ವಿಡಿಯೋ ನನ್ನ ಬಳಿ ಇದೆ

● ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ● ಸದಾನಂದ ಗೌಡ ಬಾಯಿ ಮುಚ್ಕೊಂಡು ಇರಬೇಕು



ವಿಜಯಪುರ, ನ.28– ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೋಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಳಿ 20 ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದರು ಆ ವಿಡಿಯೋ ನನ್ನ ಬಳಿ ಇದೆ. ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸಬಾಂಬ್ ಸಿಡಿಸಿದ್ದಾರೆ.

ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ (ನ.27) ದೆಹಲಿ ಹೈಕಮಾಂಡ್‌ನಿಂದ ಕರೆ ಬಂದಿತ್ತು ವರಿಷ್ಠರ ಜೊತೆಗೆ ಮಾತನಾಡಿದ್ದೇನೆ. ನಾನು ಒಬ್ಬನೇ ಬರುವುದಿಲ್ಲ. ನನ್ನ ತಂಡ ಸಹಿತವಾಗಿಯೇ ಬಂದು ಉತ್ತರಿಸುವೆ ಎಂದು ತಿಳಿಸಿದ್ದೇನೆ ಎಂದರು. ಭ್ರಷ್ಟಾಚಾರದ ವಿರುದ್ಧ, ವಕ್ಫ್ ವಿರುದ್ಧ ಹೋರಾಟ ಮಾಡುತ್ತಿದ್ದೇವೆ ಎಲ್ಲರನ್ನೂ ದೆಹಲಿಗೆ ಕರೆಯಿರಿ ಆಗ ಬಂದು ಕರ್ನಾಟಕದಲ್ಲಿ ಏನು ನಡೆದಿದೆ ಎಂದು ಹೇಳುತ್ತೇವೆ. ಒಬ್ಬರನ್ನು ಕರೆದು ಸಮಾಧಾನ ಮಾಡಲು ಆಗುವುದಿಲ್ಲ. ನಾನು ಯಾವುದಕ್ಕೂ ಹೆದರುವುದಿಲ್ಲ, ಕ್ಷಮಾಪಣೆ ಕೇಳುವುದಿಲ್ಲ ಎಂದರು.

ನಾನು ಯಾರಿಗೂ ಹೆದರುವುದಿಲ್ಲ ನಾನೇ ದೂರು ಕೊಡಲು ಹೇಳಿದ್ದೇನೆ. ಯಾರ ದೂರಿಗೂ ನಾನು ಹೆದರುವುದಿಲ್ಲ. ಯತ್ನಾಳ್‌ನ್ನು ಮುಟ್ಟುವುದು ಅಷ್ಟೊಂದು ಸಲೀಸಲ್ಲ. ನನ್ನ ಜೊತೆಗೆ ರಾಜ್ಯದ ಜನರಿದ್ದಾರೆ. ನನ್ನ ಜೊತೆಗೆ ದೆಹಲಿ ನಾಯಕರಿದ್ದಾರೆ ಎಂದು ಖಡಕ್ ಎಚ್ಚರಿಕೆ ನೀಡಿದರು.

ನಾನು ಒಂದು ಶಬ್ದವನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ. ಕಾಂಗ್ರೆಸ್ ಜೊತೆಗೆ ಕೂರುವಂತಹ ಚಿಲ್ಲರೆ ಕೆಲಸ ನಾವು ಮಾಡುವುದಿಲ್ಲ. ರಾಜ್ಯಾಧ್ಯಕ್ಷ ಹೋಗಿ ಡಿಕೆಶಿ ಬಳಿ 20 ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದರು. ಆ ವಿಡಿಯೋ ನನ್ನ ಬಳಿ ಇದೆ ನಾನು ಕಾಂಗ್ರೆಸ್ ಜೊತೆಗೆ ಕೈ ಜೋಡಿಸುವ ಕೆಲಸ ಮಾಡಲ್ಲ. ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ. ಕೆಲವರೆಲ್ಲ ರಾತ್ರಿ ಡಿಕೆ ಶಿವಕುಮಾರ್, ಸಿದ್ದರಾಮಯ್ಯ ಮನೆಗೆ ಹೋಗುತ್ತಾರೆ. ನಾನು ಯಾರ ಮನೆಗೂ ಹೋಗಿ ಕೆಲಸ ಮಾಡಿಕೊಡಿ ಎಂದು ಕೇಳುವ ವ್ಯಕ್ತಿಯಲ್ಲ. ಅದಕ್ಕೆ ನನ್ನ ಮೇಲೆ ಕೇಸ್‌ಗಳ ಮೇಲೆ ಕೇಸ್ ಹಾಕುತ್ತಲೇ ಇದ್ದಾರೆ. ನನ್ನ ಮೇಲೆ ಕೇಸ್ ಹಾಕಿ ಬ್ಲ್ಯಾಕ್‌ಮೇಲ್ ಮಾಡಲು ಸಾಧ್ಯವಿಲ್ಲ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಡಿವಿಎಸ್ ಬಣ್ಣ ಬಯಲು ಮಾಡ್ತೀನಿ

ಸದಾನಂದಗೌಡ ಬಾಯಿ ಮುಚ್ಚಿಕೊಂಡು ಇರಬೇಕು. ಇಲ್ಲದೆ ಹೋದರೆ ಬಂಡವಾಳ ಬಯಲು ಮಾಡುತ್ತೇನೆ. ನಾನು ವಕ್ಫ್ ವಿರುದ್ಧ ಮಾತನಾಡಿದ್ದೇನೆ. ಸದಾನಂದ ಗೌಡ ಯಾಕೆ ಗಾಬರಿಯಾಗಬೇಕು? ನೀವು ಗಾಬರಿಯಾಗಬೇಡಿ. ನಾಗರಹಾವು-ಎರೆಹುಳ ಎತ್ತನಿಂದೆತ್ತ ಸಂಬಂಧವಯ್ಯ ಸದಾನಂದ, ನೀನು ಮಾತನಾಡಿದ ಕೃತಿಗೂ ನಿನ್ನ ನಾಲಿಗೆಗೂ ಎತ್ತ ಸಂಬಂಧವಯ್ಯ ಸದಾನಂದ. ಇದು ನನ್ನ ಹೊಸ ವಚನ, ಇದು ನನ್ನ ಕೂಡಲಸಂಗಮ ಬಸವವಾಣಿ ಎಂದು ಟಾಂಗ್ ಕೊಟ್ಟಿದ್ದಾರೆ.

ಸದಾನಂದಗೌಡರು ಯಡಿಯೂರಪ್ಪ ಕುಟುಂಬದ ವಿರುದ್ಧ ಮಾತನಾಡಿರುವುದನ್ನು ನಾನು ಬಿಚ್ಚಿಡುತ್ತೇನೆ. ನನಗಿಂತ ಕೆಟ್ಟದಾಗಿ ಮಾತನಾಡಿದ್ದಾರೆ. ದೀಪ ಆರಿದವರ ಬಗ್ಗೆ ನಾನು ಮಾತನಾಡಲ್ಲ. ನಿಮ್ಮ ದೀಪ ಈಗಾಗಲೆ ಆರಿಹೋಗಿದೆ. ನಾನು ಯಾರು ಜೊತೆನೂ ಹೊಂದಾಣಿಕೆ ಮಾಡಿಕೊಂಡಿಲ್ಲ. ನನ್ನ ವಿರುದ್ಧ ಮಾತನಾಡಿದವರ ಬಣ್ಣ ಬಯಲು ಮಾಡುತ್ತೇನೆ. ನೀವು ಯಡಿಯೂರಪ್ಪ ವಿರುದ್ಧ ಕೆಟ್ಟದಾಗಿ ಮಾತನಾಡಿದ್ದೀರಿ, ಇಲ್ಲ ಎನ್ನುವುದಾದರೆ ಧರ್ಮಸ್ಥಳಕ್ಕೆ ಬಂದು ಆಣೆ-ಪ್ರಮಾಣ ಮಾಡಲಿ ಎಂದು ಆಣೆ-ಪ್ರಮಾಣಕ್ಕೆ ಪಂಥಾಹ್ವಾನ ನೀಡಿದರು.

ರಾಜ್ಯದಲ್ಲಿನ ಬಿಜೆಪಿ ಆಂತರಿಕ ಬಿಕ್ಕಟ್ಟಿಗೆ ಮದ್ದು ನೀಡಲು ವರಿಷ್ಠರ ನಿರ್ಧಾರ

ಡಿ.4ರಂದು ರಾಜ್ಯಕ್ಕೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್

- ಇವರಿಗೆ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್ ಸಾಥ್
- ಯತ್ನಾಳ್ ಬಣದ ಉಪಟಳದ ಬಗ್ಗೆ ವರಿಷ್ಠರಿಗೆ ದೂರು ನೀಡಿದ್ದ ವಿಜಯೇಂದ್ರ

ಬೆಂಗಳೂರು, ನ.28(ಕೆಎಂಶಿ)– ಕರ್ನಾಟಕ ಬಿಜೆಪಿಯ ಆಂತರಿಕ ಭಿನ್ನಾಭಿಪ್ರಾಯ ಪರಿಹರಿಸಲು ದೆಹಲಿ ವರಿಷ್ಠರು ಮಧ್ಯೆ ಪ್ರವೇಶಿಸುತ್ತಿದ್ದು, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರನ್ನು ಡಿಸೆಂಬರ್ 4ರಂದು ರಾಜ್ಯಕ್ಕೆ ಕಳುಹಿಸುತ್ತಿದ್ದಾರೆ. ಇವರೊಂದಿಗೆ ರಾಜ್ಯದ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಾಧಾ ಮೋಹನ್ ದಾಸ್ ಅಗರವಾಲ್ ಅವರೂ ಉಪಸ್ಥಿತರಿರುವರು.



ತರುಣ್ ಚುಗ್

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಹಗರಣಗಳು ಹಾಗೂ ವಕ್ಫ್ ವಿವಾದಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಲ್ಕು ತಂಡಗಳನ್ನು ರಚಿಸಿ ರಾಜ್ಯದ ನಾಲ್ಕೂ ದಿಕ್ಕಿನಿಂದ ಹೋರಾಟಕ್ಕೆ ಇಳಿದಿದ್ದಾರೆ. ರಾಜ್ಯಾಧ್ಯಕ್ಷರ ನಿರ್ಧಾರ ಧಿಕ್ಕರಿಸಿ ಯಡಿಯೂರಪ್ಪ ವಿರೋಧಿ ಬಣದ ಬಸನಗೌಡ ಪಾಟೀಲ್ ಯತ್ನಾಳ್ ಬಣ ಪ್ರತ್ಯೇಕವಾಗಿ ವಕ್ಫ್ ವಿಚಾರವನ್ನು ಮುಂದಿಟ್ಟುಕೊಂಡು ಬೀದಿಗಿಳಿದಿದೆ.

ಯತ್ನಾಳ್ ನಿರ್ಧಾರ ವಿರೋಧಿಸಿ, ಯಡಿಯೂರಪ್ಪ ಬಣದ ಕೆಲವು ಹಿರಿಯ ಮುಖಂಡರು ಶುಕ್ರವಾರದಿಂದ ಪ್ರತ್ಯೇಕ ಯಾತ್ರೆ ಹಮ್ಮಿಕೊಂಡಿದ್ದು, ದಾವಣಗೆರೆಯಲ್ಲಿ ಬೃಹತ್ ಸಮಾವೇಶ ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ರಾಜ್ಯ ಬಿಜೆಪಿ ಮುಖಂಡರಲ್ಲಿನ ಭಿನ್ನಾಭಿಪ್ರಾಯವನ್ನು ಕಾಂಗ್ರೆಸ್‌ನವರು ಅಪಹಾಸ್ಯ ವಿಷಯ ಮಾಡಿಕೊಂಡಿದ್ದಾರೆ. ಯತ್ನಾಳ್ ಮತ್ತವರ ಸಂಗಡಿಗರಿಂದ ಆಗುತ್ತಿರುವ ಮುಜುಗರ ತಪ್ಪಿಸುವಂತೆ ಸ್ವತಃ ವಿಜಯೇಂದ್ರ ಅವರೇ ದೆಹಲಿಗೆ ತೆರಳಿ ವರಿಷ್ಠರಿಗೆ ದೂರು ನೀಡಿದ್ದರು.

ವರಿಷ್ಠರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಾಧ್ಯಕ್ಷರು, ಡಿಸೆಂಬರ್‌ನಲ್ಲಿ ನಮ್ಮಲ್ಲಿನ ಎಲ್ಲಾ ಗೊಂದಲ ಬಗೆಹರಿದು, ಐದು ಬಾಗಿಲುಗಳು ಮುಚ್ಚಲಿವೆ ಎಂದು ಮಾರ್ಮಿಕವಾಗಿ ನುಡಿದಿದ್ದರು.

ವರಿಷ್ಠರು ಕಳುಹಿಸುತ್ತಿರುವ ಈ ಮುಖಂಡರು ಕರ್ನಾಟಕದ ಬಿಜೆಪಿ ಕೋರ್ ಕಮಿಟಿ ಸದಸ್ಯರು, ಹಿರಿಯ ನಾಯಕರು ಹಾಗೂ ಪರ–ವಿರೋಧಿ ಬಣದ ನಾಯಕರೊಂದಿಗೆ ಪ್ರತ್ಯೇಕವಾಗಿ ಚರ್ಚೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಮುಂದಾಗಲಿದಾರೆಂದು ಉನ್ನತ ಮೂಲಗಳು ತಿಳಿಸಿವೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ದಕ್ಷಿಣ ಭಾರತದಲ್ಲಿ ಬಿಜೆಪಿ ಹೆಬ್ಬಾಗಿಲೆಂದೇ ಪರಿಗಣಿಸಿರುವ ಕರ್ನಾಟಕದಲ್ಲಿ ನಾಯಕರ ವೈಮನಸ್ಸು ಬೀದಿಗೆ ಬಂದಿರುವುದು ವಿಷಾದಕರ ಎಂದಿದ್ದಾರೆ. ಕೇಂದ್ರದಲ್ಲಿ ಸಚಿವರಾಗಿದ್ದವರು, ಸಂಸದರು, ಮಾಜಿ ಮಂತ್ರಿಗಳೇ ಒಂದು ವಿಷಯಕ್ಕೆ ತದ್ವಿರುದ್ಧವಾಗಿ ಹೋರಾಟಕ್ಕೆ ಮುಂದಾಗಿರು ವುದು ವಿಪರ್ಯಾಸ. ಸಿದ್ದರಾಮಯ್ಯ ಸರ್ಕಾರದ ಹಗರಣಗಳನ್ನು ಬಯಲಿಗೆಳೆಯುವಲ್ಲಿ ರಾಜ್ಯ ಬಿಜೆಪಿ ವಿಫಲವಾಗಿದೆ. ಈ ಸರ್ಕಾರದ ಹಗರಣಗಳು ಎಷ್ಟಿವೆಯೆಂದರೆ, ಪ್ರತಿನಿತ್ಯವೂ ಒಂದು ಹೋರಾಟ ನಡೆಸಬಹುದಾಗಿದೆ.

ಆದರೆ, ಇದನ್ನು ಬಿಟ್ಟು ಪ್ರತ್ಯೇಕ ಗುಂಪುಗಳಾಗಿ ಹೋರಾಟ ನಡೆಸುತ್ತಿರುವುದು ಕರ್ನಾಟಕದಲ್ಲಿ ಇದೇ ಮೊದಲು. ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರಾಗಿ ವರಿಷ್ಠರು ನೇಮಕ ಮಾಡಿದ ನಂತರ ಅದಕ್ಕೆ ಎಲ್ಲರೂ ತಲೆಬಾಗಲೇಬೇಕು, ಅದನ್ನು ಬಿಟ್ಟು ಅವರ ವಿರುದ್ಧವೇ ಹೋರಾಟ ನಡೆಸಿದರೆ, ಪಕ್ಷದ ವರಿಷ್ಠರ ನಿರ್ಧಾರವನ್ನೇ ಪ್ರಶ್ನಿಸಿದಂತೆ ಎಂದು ಕಿಡಿಕಾರಿದರು. ಇಷ್ಟೆಲ್ಲಾ ಆಗುತ್ತಿದ್ದರೂ ವರಿಷ್ಠರು ಮಧ್ಯೆ ಪ್ರವೇಶಿಸದಿರುವುದಕ್ಕೆ ಸದಾನಂದ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕರ್ತರಿಗೆ ಮುಜುಗರ; ಯತ್ನಾಳ್ ಕ್ಷಮೆಯಾಚನೆಗೆ ಆಗ್ರಹ

ಮೈಸೂರು, ನ.28(ಎಂಕೆ)– ಬಿಜೆಪಿ ಪಕ್ಷಕ್ಕೆ ಹಾಗೂ ಕಾರ್ಯಕರ್ತರಿಗೆ ಮುಜುಗರವಾಗುವಂತೆ ಹೇಳಿಕೆ ನೀಡುತ್ತಿರುವ ಶಾಸಕರಾದ ಬಸವನಗೌಡ ಪಾಟೀಲ್ ಯತ್ನಾಳ್ ಅವರು ಕೂಡಲೇ ಕ್ಷಮೆ ಕೇಳಬೇಕು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ ಆಗ್ರಹಿಸಿದ್ದಾರೆ.



ವಕ್ಫ್ ವಿಚಾರಕ್ಕೆ ಸಂಬಂಧಿಸಿದಂತೆ, ಪ್ರತ್ಯೇಕ ಹೋರಾಟವನ್ನು ಮಾಡುತ್ತಿರುವ ಯತ್ನಾಳ್, ವರಿಷ್ಠರ ಮಾತಿಗೂ ಬೆಲೆ ಕೊಡುತ್ತಿಲ್ಲ. ಅವರಿಗೆ ಶಕ್ತಿ ಇದ್ದು, ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಬೇಕಿದ್ದರೆ ಹೈಕಮಾಂಡ್ ಬಳಿ ಹೋಗಿ ಪಡೆದುಕೊಳ್ಳಬೇಕು. ಅದನ್ನು ಬಿಟ್ಟು ಪಕ್ಷದ ಹಿರಿಯ ನಾಯಕರಾದ ಯಡಿಯೂರಪ್ಪ, ಡಿ.ವಿ. ಸದಾನಂದಗೌಡರ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದು ಆಕ್ಷೇಪಿಸಿದ್ದಾರೆ.

ಹೋರಾಟದ ನೆಪದಲ್ಲಿ ಮಾಜಿ ಸಿಎಂ ಸದಾನಂದಗೌಡರು ಹಾರಿ ಹೋಗುವ ದೀಪ ಎಂದಿರುವ ಯತ್ನಾಳ್ ಅವರ ನಾನೇ ಸರಿ ಎಂಬ ವರ್ತನೆ ಖಂಡನೀಯ. ಶಕ್ತಿ ಇದ್ದರೆ ಹೈಕಮಾಂಡ್ ಬಳಿ ಹೋಗಬೇಕೇ ಹೊರತು ಹಾದಿ–ಬೀದಿಯಲ್ಲಿ ಪಕ್ಷದ ಹಾಗೂ ಕಾರ್ಯಕರ್ತರ ಮರ್ಯಾದೆ ಕಳೆಯಬಾರದು. ವಿವಾದಾತ್ಮಕ ಹೇಳಿಕೆಗಳಿಂದ ಪಕ್ಷ ಹಾಗೂ ಕಾರ್ಯಕರ್ತರನ್ನು ಮುಜುಗರಕ್ಕೀಡು ಮಾಡುತ್ತಿರುವ ಯತ್ನಾಳ್ ಅವರು ಕೂಡಲೇ ಬಹಿರಂಗವಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯಮಟ್ಟದ ಈಜು ಸ್ಪರ್ಧೆಯಲ್ಲಿ ಮೈಸೂರು ಪಟುಗಳ ಸಾಧನೆ



ಹಾಸನ್ ಸ್ವಿಮ್ಮರ್ ಕ್ಲಬ್ ಆಯೋಜಿಸಿದ್ದ ರಾಜ್ಯಮಟ್ಟದ ನಾನ್–ಮೆಡಲಿಸ್ಟ್ ಸ್ವಿಮ್ಮಿಂಗ್ ಕಾಂಪಿಟೇಷನ್‌ನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಸ್ವಿಮ್ಮಿಂಗ್ ಅಸೋಸಿಯೇಷನ್‌ನ ಈಜು ಪಟುಗಳಾದ (ಎಡದಿಂದ) ಆಧ್ಯ ಹಿರೇಮಠ್(1 ಚಿನ್ನ, 3 ಮೂರು ಬೆಳ್ಳಿ, 1 ಕಂಚು), ಎಂ.ಆರ್.ಚಾರ್ವಿ(3 ಬೆಳ್ಳಿ), ಸಿ.ಅದ್ವಿಕ್(1 ಕಂಚು), ಚಿನ್ಮಯಿ(4 ಚಿನ್ನ, 2 ಬೆಳ್ಳಿ) ಹಾಗೂ ಮಾನಸ(4 ಚಿನ್ನ) ವಿವಿಧ ವಿಭಾಗಗಳಲ್ಲಿ ಪದಕ ಗಳಿಸಿದ್ದಾರೆ. ಈಜು ತರಬೇತುದಾರ ಸ್ಕಂದ ಆರ್.ಅಶ್ವಥ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಉಪಸ್ಥಿತರಿದ್ದರು.

ಟಾಯ್ಲೆಟ್ ಗುಂಡಿಯಲ್ಲಿ ನವಜಾತ ಶಿಶು ಎಸೆದು ಪರಾರಿ

ರಾಮನಗರ, ನ.28– ಅಮಾನವೀಯ ಘಟನೆಯೆಂಬಂತೆ ರಾಮನಗರದಲ್ಲಿ ಎರಡು ದಿನದ ಹಿಂದಷ್ಟೇ ಹುಟ್ಟಿದ ಮಗುವನ್ನು ಆಸ್ಪತ್ರೆ ಟಾಯ್ಲೆಟ್‌ನಲ್ಲಿ ಹಾಕಿ ಫ್ಲಶ್ ಮಾಡಿದ ಘಟನೆ ಬೆಳಕಿಗೆ ಬಂದಿದೆ.


ರಾಮನಗರದ ದಯಾನಂದ್ ಸಾಗರ್ ಆಸ್ಪತ್ರೆಯಲ್ಲಿ ಈ ಹೇಯ ಕೃತ್ಯ ನಡೆದಿದ್ದು, ಟಾಯ್ಲೆಟ್ ಪರಿಶೀಲನೆ ವೇಳೆ ಶಿಶುವಿನ ಶವ ಪತ್ತೆಯಾಗಿದೆ. ಟಾಯ್ಲೆಟ್ ಗುಂಡಿಯಲ್ಲಿ ಮೃತದೇಹವಿರುವುದನ್ನು ಕಂಡು ಆಸ್ಪತ್ರೆ ಸಿಬ್ಬಂದಿ ಬೆಚ್ಚಿಬಿದ್ದು ವಿಷಯ ತಿಳಿಸಿದ್ದಾರೆ. ಶಿಶುವಿನ ತಾಯಿಯೇ ಈ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ. ಟಾಯ್ಲೆಟ್ ಗುಂಡಿಯಲ್ಲಿ ಎರಡು ದಿನದ ನವಜಾತ ಗಂಡು ಶಿಶುವಿನ ಮೃತದೇಹ ಪತ್ತೆಯಾಗಿದ್ದು, ಹಾರೋಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ. ಮಗುವಿನ ತಾಯಿ ಯಾರು, ಈ ಕೃತ್ಯ ಎಸಗಿದವರು ಯಾರು ಎಂಬುದನ್ನು ಪತ್ತೆ ಹಚ್ಚಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಈ ಘಟನೆ ನಡೆದಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ.

OBITUARY



A.V. CHANDRAMOHAN
Death : 21-11-2024
S/o A.N. Venugopal Mudaliar,
Brother of Dr. A.V.Champaka Malini
2954, Saraswathipuram,
Nadapu, 30 -11-2024, Saturday
Ceremony, 01-12- 2024, Sunday
Mourned by: Karthik, Arpana, Ganesh and Relatives.

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಪಿ.ಕೆಂಗೇಗೌಡರು

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನೆಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಪುಟ್ಟಲಕ್ಷ್ಮಮ್ಮ, ನಾಗರಾಜು.ಬಿ.ಕೆ, ಪಾಪೇಗೌಡರ ಕುಟುಂಬ, ಬೋಗಾದಿ, ಮೈಸೂರು

ಕೃತಜ್ಞತೆಗಳು



ಎಚ್.ಎಸ್.ಮುರಳೀಧರ

ನಮ್ಮ ಸಹೋದರ ಎಚ್.ಎಸ್.ಮುರಳೀಧರ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ನಮ್ಮ ಕುಟುಂಬಕ್ಕೆ ಸಾಂತ್ವನ ಹೇಳಿದ, ದುಃಖದಲ್ಲಿ ಭಾಗಿಯಾಗಿದ್ದ ಸಂಬಂಧಿಕರು, ಎಲ್ಲಾ ಮುಖಂಡರು, ಊರಿನ ಜನರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

– ಹನಗೋಡುನಟರಾಜ್, ಎಚ್.ಎಸ್. ಪ್ರೇಮ್‌ಕುಮಾರ್, ಸಹೋದರರು, ಪತ್ನಿ ಶೋಭಾಮುರಳಿ ಮತ್ತು ಕುಟುಂಬ ಹನಗೋಡು, ಹುಣಸೂರು ತಾಲೂಕು

2ನೇ ವರ್ಷದ ಸವಿನೆನಪು



ಶಿವಲಿಂಗು ಎಂ. (ಹೊಸಟ್ಟಿ)

ಸದಾ ನಿಮ್ಮ ನೆನಪಿನಲ್ಲಿರುವ ತಂದೆ, ತಾಯಿ, ಅಣ್ಣ, ತಮ್ಮ, ತಂಗಿಯರು, ಕುಟುಂಬ ವರ್ಗದವರು ಬಂಧುಮಿತ್ರರು ಹಾಗೂ ಯರಗನಹಳ್ಳಿ ಗ್ರಾಮಸ್ಥರು

ಗೌರವಾನ್ವಿತ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯ
ನಾಗಮಂಗಲ

ಅಸಲು ದಾವಾ ಸಂಖ್ಯೆ : 41/2016

ವಾದಿ: ಬಿ.ಎಸ್. ಶಾಂತಾಬಾಯಿ, ಮೃತ ವಾರಸುದಾರರು ದೇವರಾಜು ಎಲ್ ಮತ್ತು ಇತರರು

ವಿರುದ್ಧ

ಪ್ರತಿವಾದಿಗಳು: ಕೌಸಲ್ಯ ಬಾಯಿ ಮತ್ತು ಇತರರು

21. ಶ್ರೀಮತಿ ಬಿ.ಎಸ್. ಸುಶೀಲಾಬಾಯಿ ಕೋಂ ಬಿ.ಎಸ್. ಶಾಮರಾವ್, ವಯಸ್ಸು 77 ವರ್ಷ ವಾಸ: # 8, 11ಬಿ ಮೇನ್ ರೋಡ್ ಮಟ್ಟಾರನಗರ್, ಮನೆ ನಂ. 124 ಎದುರು, ಮೇಟಗಳ್ಳಿ, ಮೈಸೂರು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿ ಶ್ರೀಮತಿ ಬಿ.ಎಸ್. ಶಾಂತಾಬಾಯಿ ಮೊದಲಿಗೆ ದಾಖಲು ಮಾಡಿದ್ದು, ಸದ್ಯ ಅವರು ಮರಣ ಹೊಂದಿದ್ದು, ಅವರ ವಾರಸುದಾರರಾದ ಅವರ ಗಂಡ ದೇವರಾಜು ಎಲ್, ಡಿ. ವಿನೋದ್ ಕುಮಾರ್, ಡಿ. ಸಂತೋಷ್ ಕುಮಾರ್ ಅವರ ಪ್ರತಿನಿಧಿಗಳಾಗಿದ್ದು, ಪ್ರತಿವಾದಿಗಳ ವಿರುದ್ಧ ಸಮಭಾಗದ ಹಿಸ್ಸೆ ಮತ್ತು ಸ್ವಾಧೀನ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಸದರಿ ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿ 21 ರವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಸದರಿ ಮೇಲ್ಕಂಡ ದಾವೆಯು ದಿನಾಂಕ 4–01–2025 ರಂದು ನ್ಯಾಯಾಲಯದಲ್ಲಿ ಸುನಾವಣೆಗೆ ಇರುತ್ತದೆ.

ಆದುದರಿಂದ ಈ ಪತ್ರಿಕಾ ಪ್ರಕಟಣೆಯ ಮೂಲಕ ನಿಮಗೆ ತಿಳಿಸುವುದೇನೆಂದರೆ, ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ನಾಗಮಂಗಲ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಲು, ಹೇಳಿಕೆ ನೀಡಲು ನೀವು ಖುದ್ದಾಗಿಯಾಗಲೀ, ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ, ದಿನಾಂಕ 04–01–25ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ನಿಮಗೆ ಈ ಪತ್ರಿಕಾ ಪ್ರಕಟಣೆ ನೀವು ಮೇಲ್ಕಂಡ ದಿನಾಂಕದಂದು ನೀವಾಗಲಿ, ನಿಮ್ಮ ಪರ ವಕೀಲರಾಗಲಿ ಹಾಜರಾಗಿ ನಿಮ್ಮ ಪರ ತಕರಾರು ಸಲ್ಲಿಸದಿದ್ದಲ್ಲಿ ನಿಮ್ಮ ಪರ ವಿಚಾರಣೆ ಇಲ್ಲವೆಂದು ತೆಗೆದುಕೊಂಡು ಮೇಲ್ಕಂಡ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಸೋಮನಹಳ್ಳಿ ಗ್ರಾಮದ 1) ಸರ್ವೆ ನಂ. 82/3 ರಲ್ಲಿ 3 ಎಕರೆ 01 ಗುಂಟೆ, 2) ಸರ್ವೆ ನಂ. 95/1 ರಲ್ಲಿ 1 ಎಕರೆ 10 ಗುಂಟೆ, 3) ನಿವೇಶನ ಸಂಖ್ಯೆ 219/19 ರಲ್ಲಿ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 30 ಅಡಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ಕುಂಚಿಗನಾಳು ಗ್ರಾಮದ ಸರ್ವೆ ನಂ. 7 ರಲ್ಲಿ 5 ಎಕರೆ 38 ಗುಂಟೆ, ಹಾಗೂ ಸರ್ವೆ ನಂ 8 ರಲ್ಲಿ 12 ಎಕರೆ 34 ಗುಂಟೆ. ಘನ ನ್ಯಾಯಾಲಯದ ಸಹಿ ಹಾಗೂ ಮೊಹರು ಈ ಕೆಳಕಂಡಂತೆ ಇರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ

ಅರ್ಜಿದಾರರ ಪರ ವಕೀಲರು ಸಹಿ/– ಕೆ.ಎಂ. ಪ್ರವೀಣ್ ಕುಮಾರ್
ಬಿ.ಎ., ಎಲ್.ಎಲ್.ಬಿ., ವಕೀಲರು, ನಾಗಮಂಗಲ

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/1/2019 PR

2nd Floor, Jeevan Deep Building, Parliament Street, New Delhi 110001

Inviting applications for the post of Chairperson in Pension Fund Regulatory and Development Authority (PFRDA), New Delhi

Applications are invited for the post of Chairperson, Pension Fund Regulatory and Development Authority (PFRDA), New Delhi, which has a tenure period of 5 (five) years or up to 65 years of age, whichever is earlier.

The pay and allowances of the Chairperson shall be ₹5,62,500/- consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is **30.12.2024 till 5.30 P.M.** The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India,
Department of Financial Services, Ministry of Finance, Government of India, Room No. 1, 2nd Floor, Jeevan Deep Building, Parliament Street, New Delhi 110001. Tele No. 011-23748760

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/2/2019 PR

2nd Floor, Jeevan Deep Building, Parliament Street, New Delhi 110001

Inviting applications for the post of Whole-time Member(Law) in Pension Fund Regulatory and Development Authority (PFRDA), New Delhi

Applications are invited for the post of Whole-time Member(Law), Pension Fund Regulatory and Development Authority (PFRDA), New Delhi, which has a tenure period of 5 (five) years or up to 62 years of age, whichever is earlier.

The pay and allowances of the Whole-time Member(Law) shall be ₹ 5.00 lakh consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is **30.12.2024 till 5.30 P.M.** The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India, Department of Financial Services, Ministry of Finance, Government of India, Room No. 1, 2nd Floor, Jeevan Deep Building, Parliament Street, New Delhi 110001. Tele No. 011-23748760

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/2/2019 PR

2nd Floor, Jeevan Deep Building, Parliament Street, New Delhi 110001

Inviting applications for the post of Whole-time Member(Finance) in Pension Fund Regulatory and Development Authority (PFRDA), New Delhi

Applications are invited for the post of Whole-time Member(Finance), Pension Fund Regulatory and Development Authority (PFRDA), New Delhi, which has a tenure period of 5 (five) years or up to 62 years of age, whichever is earlier.

The pay and allowances of the Whole-time Member(Finance) shall be ₹5.00 lakh consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is **30.12.2024 till 5.30 P.M.** The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India, Department of Financial Services, Ministry of Finance, Government of India, Room No. 1, 2nd Floor, Jeevan Deep Building, Parliament Street, New Delhi 110001. Tele No. 011-23748760